
ಪ್ರಬೋಧನೆ

ಲಂಕೇಶ್

ಸುರಸುಂದರಾಂಗಿ
ಪೇಜಾವರ
ಜಾಣ
ಮರೆವು

ಮೇ 30, 2012 ಪುಟ 20 ರೂ. 14/-

ಮಾರಿಷಸ್ ರಹಸ್ಯ ಬ್ಯಾಂಕ್ ಅಕೌಂಟ್
ಚೀನಾದ ಹೋಟೆಲ್



ಕಂಬಿ ಎಣಿಸುವ ಮುನ್ನ



ಸೋಮಣ್ಣನ ಸ್ವಾರ್ಥಕ್ಕೆ ಯಡ್ಡಿ ಬಲಿ!

ಲಬುರ್ಗಿ ವಿವಿ:
ದ್ಯಾರ್ಥಿಗಳಿಗೆ ಮೋಸ

ಕಾರವಾರ: ACF ನಾಯಕ್
ಹತ್ಯೆಯಲ್ಲಿ ತಿಕೋಟಾ SI ಇದ್ದ

ಪಿಎಲ್: ತೆರೆಮರೆಯ ಕಳ್ಳರು

ಡ್ಡಿ ಸಂತೋಷ್ ವಿರುದ್ಧ ಯಡ್ಡಿ ಗುಡುಗು


ವ್ಯಂಗ್ಯವಿರುವುದು ಇಂದಿನ ಸಂದರ್ಭದಲ್ಲಿ...

ಭಾರತ ಕಂಡ ಅತ್ಯಂತ ಸಂವೇದನಾಶೀಲ ಮತ್ತು ಪ್ರತಿಭಾವಂತ ವ್ಯಂಗ್ಯಚಿತ್ರಕಾರ ಶಂಕರ್ ಅವರು 1949ರಲ್ಲಿ ಬರೆದ ವ್ಯಂಗ್ಯಚಿತ್ರವೊಂದು ಇದೀಗ ಅತ್ಯಂತ ವಿವಾದಕ್ಕೊಳಗಾಗಿದೆ. NCERT ಸಿಲಬಸ್ಸಿನಂತೆ 11ನೇ ತರಗತಿಯ CBSE ಪಠ್ಯಗಳಲ್ಲಿ ಸಂವಿಧಾನ ಮತ್ತು ಅದರ ರಚನೆಗೆ ಸಂಬಂಧಪಟ್ಟಂತೆ ನೀಡಲಾಗಿರುವ ಪರಿಚಯಾತ್ಮಕ ಪಠ್ಯದಲ್ಲಿ ಶಂಕರ್ ಅವರು 1949ರಲ್ಲಿ ಬರೆದ ವ್ಯಂಗ್ಯಚಿತ್ರವೊಂದನ್ನು ಸೇರಿಸಲಾಗಿದೆ. ಈ ಪಠ್ಯ ಚಿತ್ರ ಹಾಗೂ ಒಟ್ಟಾರೆ ಪಠ್ಯಕ್ರಮ ಇತ್ಯಾದಿಗಳಿಗೆ ಸಲಹೆ ನೀಡಿದವರು ಭಾರತದ ಅತ್ಯಂತ ಪ್ರಸಿದ್ಧ ಜನಪರ ಚಿಂತಕರಾದ ಸುಹಾಸ್ ಪಲ್ಶೀಕರ್ ಮತ್ತು ಪ್ರಖ್ಯಾತ ಸಮಾಜವಾದಿ ಮುತ್ಸದ್ದಿ ಯೋಗೇಂದ್ರ ಯಾದವ್ ಅವರುಗಳು. ವ್ಯಂಗ್ಯಚಿತ್ರವನ್ನು ಬರೆದವರು ಮತ್ತು ಅದನ್ನು ಪಠ್ಯದಲ್ಲಿ ಸೇರಿಸಿದವರು ಎಲ್ಲರೂ ದಲಿತ ಹಿತಾಸಕ್ತಿಯ ಹಿತಚಿಂತಕರೇ. ಆದರೂ ಆ ವ್ಯಂಗ್ಯಚಿತ್ರವು ಸಂವಿಧಾನಕರ್ತೃ ಅಂಬೇಡ್ಕರ್ ಅವರನ್ನು ಹೀಯಾಳಿಸುವಂತೆ ತೋರಿಸುತ್ತದೆ ಎಂದು ಈಗ ಆ ಚಿತ್ರವನ್ನು ಮಾತ್ರವಲ್ಲದೆ ಈಗ ಇಡೀ ಪುಸ್ತಕವನ್ನೇ ಹಿಂತೆಗೆದುಕೊಳ್ಳಲಾಗಿದೆ. ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಯಾವ ಘೋರ ಅತ್ಯಾಚಾರ ಅಥವಾ ಅನ್ಯಾಯಗಳು ನಡೆದಾಗಲೂ ನಡೆಯದಷ್ಟು ಚರ್ಚೆ ಮತ್ತು ಪಕ್ಷಾತೀತವಾದ ಒಗ್ಗಟ್ಟು ಈ ವ್ಯಂಗ್ಯಚಿತ್ರ ಪ್ರಕರಣದಲ್ಲಿ ವ್ಯಕ್ತವಾಗಿದ್ದು ಕೂಡಾ ಸಂದರ್ಭದ ವ್ಯಂಗ್ಯವೋ ಅಥವಾ ವಾಸ್ತವವೋ ಎಂಬ ಗೊಂದಲ ಹುಟ್ಟುಹಾಕುವಷ್ಟು ವಿಷಯ ಮತ್ತು ಸಂದರ್ಭ ಗೋಜಲಾಗಿದೆ.

> ನಮ್ಮ ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳು ದಿನನಿತ್ಯ ನಡೆಯುತ್ತಿರುವಾಗಲೂ ಎಂದು ಅದರ ವಿರುದ್ಧ ಇಷ್ಟು ದೊಡ್ಡ ಧ್ವನಿ ಎದ್ದಿರಲಿಲ್ಲ. ಆದರೆ ಈ ವ್ಯಂಗ್ಯಚಿತ್ರವನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಧ್ವನಿ ಮಾತ್ರ ಪಾರ್ಲಿಮೆಂಟಿನಲ್ಲಿ ಅತಿ ಗಟ್ಟಿಯಾಗಿ ಕೇಳಿಸಿದ್ದು ಮಾತ್ರವಲ್ಲದೆ ದಲಿತ ವಿರೋಧಿಗಳು, ಅವಕಾಶವಾದಿಗಳು ಮತ್ತು ಪಕ್ಷಾತೀತವಾಗಿ ಎಲ್ಲಾ ರಾಜಕಾರಣಿಗಳು ಒಂದಾಗಿ ಹುಯಿಲೆಬ್ಬಿಸಿ ಇಡೀ ಪಠ್ಯಪುಸ್ತಕವನ್ನೇ ಹಿಂತೆಗೆದುಕೊಳ್ಳುವಂತೆ ಮಾಡಿಬಿಟ್ಟರು. ಪ್ರಾಯಶಃ ಇದು ನಮ್ಮ ಸಂದರ್ಭದ ಅತಿ ದೊಡ್ಡ ವ್ಯಂಗ್ಯಚಿತ್ರವಲ್ಲವೇ?



ಅಸಲು ಆ ವ್ಯಂಗ್ಯಚಿತ್ರದಲ್ಲಿ ಇರುವುದಿಷ್ಟು. ಸಂವಿಧಾನ ರಚನಾ ಸಭೆಯ ವೇಗ ಕುಂಠಿತವಾಗಿದ್ದ ಆ ವಿಷಯದ ಬಗ್ಗೆ ಈ ವ್ಯಂಗ್ಯಚಿತ್ರವಿದೆ. ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದವರು ಅಂಬೇಡ್ಕರ್. ಆಗ (1949ರಲ್ಲಿ) ಪ್ರಧಾನಿಯಾಗಿದ್ದವರು ನೆಹರೂ. ಸಂವಿಧಾನ ರಚನೆ ಮಂದಗತಿಯಲ್ಲಿ ಸಾಗುತ್ತಿರುವುದನ್ನು ಬಸವನಹುಳು ತೆವಳುತ್ತಿರುವ ರೂಪಕದಲ್ಲಿ ತೋರಿಸುವ ವ್ಯಂಗ್ಯ ಚಿತ್ರ, ಅದರ ಅಧ್ಯಕ್ಷರಾದ ಅಂಬೇಡ್ಕರ್ ಅವರು ಅದರ ಮೇಲೆ ಕೂತು ಅದಕ್ಕೆ ಚಾಟಿ ಹಿಡಿದು ಬೇಗ ತೆವಳುವಂತೆ ಆದೇಶಿಸುತ್ತಿರುವಂತೆಯೂ, ಅವರ ಹಿಂದೆ ನೆಹರೂ ಕೂಡಾ ಚಾಟಿ ಹಿಡಿದು ಬಸವನಹುಳುವಿನ ವೇಗ ಹೆಚ್ಚಿಸಲು ಪ್ರಯತ್ನಿಸುತ್ತಿರುವಂತೆಯೂ ತೋರಿಸುತ್ತದೆ.



ಇದರ ಪ್ರಧಾನ ವ್ಯಂಗ್ಯವಿರುವುದು ಸಂವಿಧಾನ ರಚನೆ ಸಭೆಯ ಗತಿಯನ್ನು ಬಸವನಹುಳುವಿಗೆ ಹೋಲಿಸಿದ ರೂಪಕದಲ್ಲಿ ಮತ್ತು ಅದರ ವೇಗವನ್ನು ಹೆಚ್ಚಿಸಲಾಗದ ನಾಯಕರನ್ನು ವಿಡಂಬನೆ ಮಾಡುವುದರಲ್ಲಿ, ಅಂಬೇಡ್ಕರ್ ಮತ್ತು ನೆಹರೂ ಇಬ್ಬರ ಬಗ್ಗೆಯೂ ಅಪಾರ ಗೌರವ ಮತ್ತು ಅಭಿಮಾನ ಹೊಂದಿದ್ದ ವ್ಯಂಗ್ಯಚಿತ್ರಕಾರ ಶಂಕರ್ ಅವರ ಮನೋಧರ್ಮ ಮತ್ತು ರಾಜಕೀಯವನ್ನು ಬಲ್ಲವರಿಗೆ ಮತ್ತು 1949ರ ಹೊತ್ತಿನ ರಾಜಕೀಯಪ್ರಜ್ಞೆಯ ಐತಿಹಾಸಿಕ ನಿರ್ದಿಷ್ಟತೆಗಳನ್ನು ಬಲ್ಲವರಿಗೆ ಈ ವ್ಯಂಗ್ಯಚಿತ್ರ ಇದಕ್ಕಿಂತ ಹೆಚ್ಚಿನ ಅರ್ಥವನ್ನೇನೂ ಧ್ವನಿಸಬೇಕಿರಲಿಲ್ಲ. ಆದರೆ ಆ ವ್ಯಂಗ್ಯಚಿತ್ರವನ್ನು ವಿದ್ಯಾರ್ಥಿಗಳಿಗೆ ಸಂವಿಧಾನ ರಚನಾ ಸಭೆಯ ಇತಿಹಾಸವನ್ನು ಮೊಟ್ಟಮೊದಲ ಬಾರಿಗೆ ಪರಿಚಯಿಸಲು ಬಳಸಿದಾಗ ಒಂದಷ್ಟು ಸಕಾರಣವಾದ ಪ್ರಶ್ನೆಗಳನ್ನೂ ಮತ್ತಷ್ಟು ವಿನಾಕಾರಣ ವಿರೋಧಗಳನ್ನೂ ಹುಟ್ಟುಹಾಕಿದೆ.

ವ್ಯಂಗ್ಯ ಚಿತ್ರ ರಚನೆಯಾದ ಸಂದರ್ಭ ಮತ್ತು ಅದನ್ನು ಒಂದು ಪೂರಕ ಪಠ್ಯವಾಗಿ ಓದುತ್ತಿರುವ ಸಂದರ್ಭ ಬೇರೆಯಾಗಿದೆ.

ಈ ವ್ಯಂಗ್ಯಚಿತ್ರವನ್ನು 63 ವರ್ಷಗಳ ನಂತರ, ಅಂದರೆ ಸ್ವಾತಂತ್ರ್ಯದ ಬಗ್ಗೆ ಮತ್ತು ನಮ್ಮ ಸ್ವಾತಂತ್ರ್ಯ ಹೋರಾಟದ ಬಗ್ಗೆ ಹಾಗೆಯೇ ಸಂವಿಧಾನ-ರಚನೆಯ ಬಗ್ಗೆ 1949ರಲ್ಲಿ ಇರದಿದ್ದ ಹಲವು ಎಚ್ಚೆತ್ತ ಪ್ರಜ್ಞೆ ಕಾಲಘಟ್ಟದಲ್ಲಿ, 11 ನೇ ತರಗತಿಯ ಮಕ್ಕಳಿಗೆ ಪರಿಚಯಾತ್ಮಕವಾಗಿ ನೀಡಲಾಗಿದೆ. ಕಳೆದ 63 ವರ್ಷಗಳಲ್ಲಿ 1949ರಲ್ಲಿ ಸೀಮಿತವಾಗಿದ್ದ ಅಂಬೇಡ್ಕರ್ ಪ್ರತಿನಿಧಿಸುತ್ತಿದ್ದ ಎಚ್ಚೆತ್ತ ದಲಿತ ಪ್ರಜ್ಞೆ ವ್ಯಾಪಕವಾಗಿ ಹರಡಿದೆ ಮತ್ತು ಅದು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ತನ್ನ ಹಕ್ಕಿನ ಸ್ಥಾನವನ್ನು ಕೇಳಿ ಪಡೆದುಕೊಳ್ಳುತ್ತಿದೆ. ಹಾಗೆಯೇ ಅಂದಿನ ಬ್ರಿಟಿಷ್ ವಿರೋಧಿ ಭಾರತ ರಾಷ್ಟ್ರೀಯವಾದದಲ್ಲಿ ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಹೊರಗಿಟ್ಟಿದ್ದ ಹಲವು (ಸ್ತ್ರೀ ದಲಿತ, ಮಹಿಳೆ, ಪ್ರಾದೇಶಿಕತೆ, ಉಪ ರಾಷ್ಟ್ರೀಯತೆ) ಸಂವೇದನೆಗಳು ಕಳೆದ 63 ವರ್ಷಗಳಲ್ಲಿ ಆಯಾ ಸಮುದಾಯಗಳನ್ನು ಜಾಗೃತಗೊಳಿಸಿ 49ರ ಕಾಲಘಟ್ಟದ ರಾಷ್ಟ್ರೀಯವಾದದ ಇತಿಮಿತಿಗಳನ್ನು ಬಯಲಿಗೆ ತರುತ್ತಿದೆ. ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಪ್ರಶ್ನಾತೀತ 'ಐಕಾನ್'ಗಳಾಗಿದ್ದ ನೆಹರೂ, ಗಾಂಧಿ ಇನ್ನಿತರರ ಪಾತ್ರವನ್ನು ಮರು ವಿಶ್ಲೇಷಣೆಗೆ ಒಳಪಡಿಸುತ್ತಿದೆ. ಹಾಗೆಯೇ ಆ ದಿನಗಳಲ್ಲಿ ಅಧಿಕೃತವಾಗಿ ಪ್ರಚಲಿತಪಡಿಸಿದ ಸ್ವತಂತ್ರ ಭಾರತದ ಹಲವು ಕಥನಗಳ ಮತ್ತು ಹಳೆಯ ಐಕಾನ್‌ಗಳ ಬಿರುಕುಗಳನ್ನು ಬಯಲಿಗೆ ತಂದಿದ್ದೇ ಅಲ್ಲದೇ ಮೂಲೆಗುಂಪಾಗಿದ್ದ ಶೋಷಿತ ಪ್ರಜ್ಞೆಯ 'ಐಕಾನ್'ಗಳನ್ನು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಪ್ರತಿಷ್ಠಾಪಿಸುತ್ತಿದೆ. ಇದೊಂದು ಸ್ವಾಗತಾರ್ಹ ಪ್ರಜಾತಾಂತ್ರಿಕ ಪ್ರಕ್ರಿಯೆ ಎಂಬುದನ್ನು ಮೊದಲು ಗುರುತಿಸಬೇಕು.

ಸ್ವತಂತ್ರ ಭಾರತದಲ್ಲಿ ಶೋಷಿತರಿಗೆ ಸಹ್ಯವಾಗುವಂತೆ ಕಟ್ಟುವಲ್ಲಿ ಅಂಬೇಡ್ಕರ್ ನಡೆಸಿದ ಜೀವನ್ಮರಣದ ಹೋರಾಟದ ಪ್ರಜ್ಞೆ ನಮ್ಮ ರಾಷ್ಟ್ರೀಯ ಸಂವೇದನೆಗಳಿಗೆ ಸೇರಿದ್ದೇ 80ರ ದಶಕದಲ್ಲಿ, ದಲಿತ ಪ್ರಜ್ಞೆಯ ಎಚ್ಚೆತ್ತ ಹೋರಾಟದ ಉತ್ತುಂಗದಲ್ಲಿ, ಅಂಬೇಡ್ಕರ್ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಕೊಡಲು ಭಾರತದ ಆಳುವ ವರ್ಗ ಮನಸ್ಸು ಮಾಡಿದ್ದೇ ಸ್ವಾತಂತ್ರ್ಯ ಬಂದು 50 ವರ್ಷಗಳ ನಂತರ ಎಂಬುದು ಈ ಪ್ರಕ್ರಿಯೆಗೆ ಒಂದು ನಿದರ್ಶನ.

ಹೀಗಾಗಿ 1949ರ ಸಂದರ್ಭವನ್ನು ಮತ್ತು ನಮ್ಮ ಇಡೀ ಸಂವಿಧಾನ ರಚನೆಯ ಪ್ರಕ್ರಿಯೆಯನ್ನು 'ಅಧಿಕೃತ ರಾಷ್ಟ್ರೀಯವಾದದ' ನೆಲೆಯಲ್ಲಲ್ಲದೆ ದಲಿತ, ಸ್ತ್ರೀ ಭಾಷಿಕ ರಾಷ್ಟ್ರೀಯತೆ, ಶೂದ್ರ ಇನ್ನಿತ್ಯಾದಿ ವಂಚಿತ ನೆಲೆಗಳಿಂದ ಭಿನ್ನವಾಗಿ ವಿಶ್ಲೇಷಿಸುವ ಮತ್ತು ಭಿನ್ನವಾಗಿ ಅರ್ಥಮಾಡಿಕೊಳ್ಳುವ ವಿಮರ್ಶಿಸುವ ದೃಷ್ಟಿಕೋನಗಳು ಇಂದಿನ ಪ್ರಜಾತಂತ್ರವನ್ನು ಆಳಗೊಳಿಸಿದೆ. ಹೀಗಾಗಿಯೇ ಅಂದಿನ ಯಾವುದೇ ಹೇಳಿಕೆಗಳು ಅಥವಾ ಕಥನಗಳ ಬಗ್ಗೆ ಇಂದು ಭಿನ್ನಮತ ಅಥವಾ ಟೀಕೆ ಇರುವುದು ಸಹಜ. ಅದು ನಮ್ಮ ತಿಳಿವಳಿಕೆಯನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತದೆ ಮತ್ತು ಬಹುಮುಖಿಯಾಗಿಸುತ್ತದೆ. ಅದು ಸ್ವಾಗತಾರ್ಹ.

ಪ್ರಸ್ತುತ 11ನೇ ತರಗತಿಯಲ್ಲಿ ಸೇರಿಸಲ್ಪಟ್ಟಿರುವ ವ್ಯಂಗ್ಯಚಿತ್ರ ಸಂವಿಧಾನ ರಚನೆಯ ಗತಿಯ ಬಗ್ಗೆ ಮತ್ತು ಅದರಲ್ಲಿ ನೆಹರೂ ಮತ್ತು ಅಂಬೇಡ್ಕರ್ ಅವರ ಪಾತ್ರದ ಬಗ್ಗೆ ತೆಳು ಟೀಕೆಯನ್ನು ತೋರಿಸುತ್ತದೆ. ಹಾಗೆ ನೋಡಿದರೆ ಈಗಲೂ ಈ ವ್ಯಂಗ್ಯಚಿತ್ರವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಅವಕಾಶವಾದಿ ರಾಜಕಾರಣಿಗಳು ಹೇಳುತ್ತಿರುವಂತೆ ಅಂಬೇಡ್ಕರ್ ಅವರಿಗೆ ಅವಮಾನವಾಗುವಂತಹ ಯಾವುದೇ ವ್ಯಂಗ್ಯಚಿತ್ರದಲ್ಲಿಲ್ಲ. ಶಂಕರ್ ಅವರ ಒಟ್ಟಾರೆ ಸೃಜನಶೀಲ ಅಭಿವ್ಯಕ್ತಿಯನ್ನು ಗಮನಿಸುವುದಾದರೂ ಅವರಿಗೆ ಅಂಬೇಡ್ಕರ್ ಅವರ ಬಗ್ಗೆ ಗೌರವದ ಹೊರತು ಇನ್ನಾವ ಕುತ್ಸಿತ ಭಾವನೆಯೂ ಇರಲಿಲ್ಲ. ಆದರೆ ಇಂದಿನ ಪ್ರಗತಿಪರ ಸೃಜನಶೀಲತೆಯು ಖಂಡಿತವಾಗಿಯೂ ಒಳಗೊಳಬೇಕಾದ ದಲಿತ ಪ್ರಜ್ಞೆಯ ಹರಿತ ಆ ಕಾಲಘಟ್ಟದಲ್ಲಿ ಶಂಕರ್ ಅವರಿಗೆ ಮಾತ್ರವಲ್ಲ, ಬಹುಪಾಲು ಸಮಾಜವಾದಿಗಳಿಗೆ ಮತ್ತು ಕಮ್ಯುನಿಸ್ಟರಿಗೇ ಇರಲಿಲ್ಲ. ಹಾಗೆಂದ ಮಾತ್ರಕ್ಕೆ ಅವರೆಲ್ಲಾ ಆ ಕಾಲಘಟ್ಟದಲ್ಲಿ ದಲಿತ ವಿರೋಧಿಗಳೆಂದು ಶರಾ ಬರೆಯಲಾಗುವುದಿಲ್ಲ.

ಅಂಬೇಡ್ಕರ್ ಪ್ರಣೀತ ದಲಿತ ಪ್ರಜ್ಞೆ ಭಾರತೀಯ ಸಮಾಜದಲ್ಲಿ ಒಂದು ಚಳವಳಿ ಸ್ವರೂಪ ಪಡೆದುಕೊಳ್ಳಲು ಹಲವು ದಶಕಗಳೇ ಬೇಕಾಯಿತು ಎಂಬುದನ್ನು

ಚಾರ್ವಾಕ



• ಶಿವಸುಂದರ್

ಐತಿಹಾಸಿಕ ಮಿತಿಗಳು ಇನ್ನಷ್ಟು ಸ್ಪಷ್ಟವಾಗುತ್ತದೆ. ಯಾವುದೇ ಸೃಜನಶೀಲ ಕೃತಿ ನಿರ್ದಿಷ್ಟ ಕಾಲ ಸಂದರ್ಭದಲ್ಲಿ ಸೃಷ್ಟಿಯಾಗುವುದರಿಂದ ಅದಕ್ಕೆ ಆ ಕಾಲಘಟ್ಟದ ಮಿತಿಗಳು ಇದ್ದೇ ಇರುತ್ತವೆ. ಕಾಲಘಟ್ಟದ ಮಿತಿಯನ್ನು ವ್ಯಕ್ತಿಯ ಮಿತಿಯಾಗಿಯೋ ಅಥವಾ ಆ ವ್ಯಕ್ತಿಯ ದುರುದ್ದೇಶವಾಗಿಯೋ ಅರ್ಥಮಾಡಿಕೊಳ್ಳುವುದು ಈ ಕಾಲಘಟ್ಟದ ದುರುದ್ದೇಶಪ್ರೇರಿತ ತಿಳಿವಳಿಕೆಯಾಗುತ್ತದೆ. ಪ್ರಶ್ನೆಯೇನೆಂದರೆ ಆ ಕಾಲಘಟ್ಟದ ಪ್ರಗತಿಪರತೆಯನ್ನಾದರೂ ಆ ವ್ಯಕ್ತಿ ಒಳಗೊಂಡಿದ್ದರೋ ಇಲ್ಲವೋ ಎಂಬುದು. ಉದಾಹರಣೆಗೆ ನಮ್ಮ ಸಂವಿಧಾನ ರಚನೆಯ ಸಂದರ್ಭದಲ್ಲಿ ಅಂಬೇಡ್ಕರ್, ಕೃಪಲಾನಿ, ಲೋಹಿಯಾ, ಕಮ್ಯುನಿಸ್ಟ್ ನಾಯಕರುಗಳು ಆ ಕಾಲಘಟ್ಟದ ಸರಾಸರಿ ಜನಪರತೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರೆ ಸರ್ದಾರ್ ವಲ್ಲಭಬಾಯಿ ಪಟೇಲ್, ಪುರುಷೋತ್ತಮ್ ದಾಸ್ ಟಂಡನ್, ಗೋಲ್ವಾಲ್ಕರ್ (ಇವರಲ್ಲಿ ಹಲವರು ಆ ಕಾಲಘಟ್ಟದ ವಿವಿಧ ತಿಳಿವಳಿಕೆಯ ನಾಯಕರೇ ಹೊರತು ಸಂವಿಧಾನ ರಚನಾ ಸಭೆಯ ಸದಸ್ಯರ... ಇನ್ನಿತರರು ಆ ಕಾಲದ ಪ್ರಗತಿಪರತೆಯ ಒಂದಿಂಚ... ಮೈಗೂಡಿಸಿಕೊಳ್ಳದ ಪ್ರತಿಗಾಮಿಗಳು. ನೆಹರು ಹಾ... ಇನ್ನಿತರರು ಇವೆರಡರ ಮಧ್ಯೆ ತೇಲುತ್ತಿದ್ದ ಯಥಾಸ್ಥಿತಿವಾ... ಗಳು. ಅದೇ ಮಾನದಂಡಗಳನ್ನು ಸೃಜನಶೀಲ ಪ್ರತಿಭೆ... ಬಗ್ಗೆಯೂ ಅನ್ವಯಿಸಿ ಹೇಳುವುದಾದರೆ ಶಂಕರ್ ಅ... ಸೃಜನಶೀಲ ಪ್ರತಿಭೆಯನ್ನು ಮಾರ್ಗದರ್ಶನ ಮಾಡು... ತಿಳಿವಳಿಕೆ ಹೆಚ್ಚು ಮೊದಲ ಬಗೆಗೆ ಸೇರುವ ಆ ಕಾ... ಪ್ರಗತಿಪರ ಚಿಂತನೆಯದ್ದೇ ಆಗಿತ್ತು, ಹಾಗೆ ನೋಡಿ... ಬಾಳಾಠಾಕ್ರೆಯಂತವರನ್ನು ಹೊರತುಪಡಿಸಿದರೆ ವ್ಯಂಗ್ಯಚಿತ್ರ... ನೊಬ್ಬ ಹುಟ್ಟುವುದೇ ಯಥಾಸ್ಥಿತಿವಾದದ ವಿಮರ್ಶೆಯ...

ಹೀಗಾಗಿ ಶಂಕರ್ ಅವರ ವ್ಯಂಗ್ಯಚಿತ್ರ ಆ ಕಾಲಘ... ಮಿತಿಯನ್ನು ಹೊಂದಿದ್ದರೂ ಪ್ರಧಾನವಾಗಿ ಆ ಕಾ... ಜನಪರ ಆಶಯಗಳನ್ನು ಪ್ರತಿಬಿಂಬಿಸುತ್ತವೆ ಎಂಬು... ನಿರ್ವಿವಾದ.

ಆದರೆ ಪ್ರಶ್ನೆ ಅದಲ್ಲ, 63 ವರ್ಷಗಳಷ್ಟು ಹಿಂ... ವ್ಯಂಗ್ಯಚಿತ್ರವನ್ನು ಒಂದು ಐತಿಹಾಸಿಕ ದಾಖಲೆಯ... ನೋಡುವುದಕ್ಕೂ ಮತ್ತು ವರ್ತಮಾನದಲ್ಲಿ ಇತಿಹಾ... ಅಂಶವೊಂದನ್ನು ಗತಿಶೀಲವಾಗಿ ಅರ್ಥಮಾಡಿಕೊಳ್ಳ... ಸಾಧನವಾಗಿ ಬಳಸುವುದಕ್ಕೂ ವ್ಯತ್ಯಾಸವಿದೆ. '1949... ಶಂಕರ್ ಎಂಬ ವ್ಯಂಗ್ಯಚಿತ್ರಕಾರರು ಸಂವಿಧಾನ ರಚನೆ... ಬಗ್ಗೆ ಈ ರೀತಿಯ ವ್ಯಂಗ್ಯಚಿತ್ರ ಬರೆದಿದ್ದರು' ಎಂಬ... ಒಂದು ಐತಿಹಾಸಿಕ ಸಂಗತಿಯಂತೆ ಈ ವ್ಯಂಗ್ಯ... ಬಳಕೆಯಾಗಿದ್ದರೆ ಅದರಲ್ಲಿ ಹೆಚ್ಚು ಗೊಂದಲ... ಇರುತ್ತಿರಲಿಲ್ಲ, ಆದರೆ 63 ವರ್ಷಗಳ ನಂತರವೂ ಸಂವಿಧಾ... ರಚನಾ ಸಭೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಸಂವಿಧಾ... ರಚನೆಯ ಬಗ್ಗೆ 'ಮೌಲಿಕವಾಗಿ ಅರ್ಥಮಾಡಿಕೊಳ್ಳು... ಸಾಧನವಾಗಿ ವ್ಯಂಗ್ಯಚಿತ್ರ ಬಳಕೆಯಾದಾಗ ಸಹಜವಾಗಿ... ಅದರ ಬಗ್ಗೆ ಭಿನ್ನವಾದ ಧ್ವನಿಗಳು ಕೂಡಾ ಹುಟ್ಟಿಕೊಳ್ಳುತ್ತ...

1949ರಲ್ಲಿ ಶಂಕರ್ ಅವರು ಗ್ರಹಿಸಿದಂತೆ ಅಥ... ಈ ವ್ಯಂಗ್ಯಚಿತ್ರ ಸಲಹೆ ಮಾಡುವಂತೆ, ರಾಷ್ಟ್ರೀ... ಹೋರಾಟದಲ್ಲಿ ಮತ್ತು ಸಂವಿಧಾನ ರಚನೆಯಲ್ಲಿ ನೆಹ... ಮತ್ತು ಅಂಬೇಡ್ಕರ್ ಅವರ ಪಾತ್ರವನ್ನು ಪರ... ಪೂರಕವಾಗಿತ್ತೆಂದೇನೂ ಇಂದಿನ ಎಚ್ಚೆತ್ತ ದಲಿತ ಪ... ಗ್ರಹಿಸುವುದಿಲ್ಲ, ಗಾಂಧಿ ಮತ್ತು ನೆಹರು ಅವರ ಬ... ದಲಿತ ವಿಮರ್ಶೆ ಸಕಾರಣವಾಗಿ ಹರಿತವಾಗಿದೆ. 1949... ಈ ವ್ಯಂಗ್ಯಚಿತ್ರ ರಚನೆಯಾದ ನಂತರದಲ್ಲಿ ಅಂಬೇಡ್ಕ... ಮತ್ತು ನೆಹರೂ ಅವರ ನಡುವೆ ಈ ದೇಶದ ದಮನಿ... ಸಮುದಾಯಗಳ ವಿಮೋಚನೆಯ ಕುರಿತಾದ ಸಂಘ... ಇನ್ನಿತ್ಯಾದಿಗಳ ಹಿನ್ನೆಲೆಯಲ್ಲಿ, ಈ ವ್ಯಂಗ್ಯಚಿತ್ರ ಸಂವಿಧಾ... ರಚನೆಯಲ್ಲಿ ಮತ್ತು ದೇಶವನ್ನು ಕಟ್ಟುವುದರಲ್ಲಿ ಅಂಬೇಡ್ಕ... ಮತ್ತು ನೆಹರೂ ಅವರ ಪಾತ್ರದ ಬಗ್ಗೆ ವ್ಯಂಗ್ಯಚಿತ್ರ ಹೇಳು... ರೀತಿಯ ಓದನ್ನು ಆಗಮಾಡುವುದಿಲ್ಲ. ದಮನಿತ ಕಣ್ಣುಗ... ಆ ವ್ಯಂಗ್ಯಚಿತ್ರದಲ್ಲಿ ನೆಹರು ಅಂಬೇಡ್ಕರ್ ಅವರ... ಉಸ್ತುವಾರಿ ಮಾಡುವಂತೆ ಕಂಡರೆ ಅದರಲ್ಲಿ ಆ ಕಣ್... ತಪ್ಪೇನೂ ಇಲ್ಲ, ಹಾಗೆಯೇ ಕೆಲವು ಕಾಮಾಲೆ ಕಣ್ಣುಗ... ನೆಹರು ಚಾಟಿ ಬೀಸುತ್ತಿರುವುದು ಅಂಬೇಡ್ಕರ್ ಮೇ... ಎಂದು ಅಂದುಕೊಳ್ಳುವುದನ್ನೂ ಆ ವ್ಯಂಗ್ಯಚಿತ್ರ ತಡೆಯ... ವುದಿಲ್ಲ.

ಈ ಬಗೆಯ ಓದಿನ ಹಿಂದೆ ಒಂದು ಅವಕಾಶವಾ... ರಾಜಕಾರಣ ಇರುವುದು ಸ್ಪಷ್ಟವಾದರೂ ಒಟ್ಟಾರೆ ನೆಹ... ಮತ್ತು ಅಂಬೇಡ್ಕರ್ ಅವರ ವಿಚಾರ ಭೇದ ಮ... ಪ್ರಧಾನಿ ಮತ್ತು ಕಾಂಗ್ರೆಸ್ ಪಕ್ಷ ಪ್ರತಿನಿಧಿಸುತ್ತಿ... ಹಿತಾಸಕ್ತಿಗಳು ಅಂಬೇಡ್ಕರ್ ಅವರು ಪ್ರತಿನಿಧಿಸುತ್ತಿ... ಹಿತಾಸಕ್ತಿಗಳ ಮೇಲೆ ಚಾಟಿಯನ್ನೇ ಬೀಸಿ... ಇತಿಹಾಸವನ್ನು ಬೆನ್ನಿಗಿಟ್ಟುಕೊಂಡು ನೋಡಿದರ... ವ್ಯಂಗ್ಯಚಿತ್ರ ಅನುದ್ದೇಶಪೂರ್ವಕವಾಗಿ ಹಲ... ಓದುಗಳನ್ನು ಹುಟ್ಟಿಸುತ್ತದೆ. ಹೀಗಾ... ಬಹುಬಗೆಯ ಓದಿನ ಸಾಧ್ಯತೆ ವ್ಯಂ... ಚಿತ್ರದಲ್ಲೂ ಇದೆ. ನೋಡುಗರಲ್ಲೂ ಇ...

ಹೀಗಾಗಿ ಅದರ ಬಗ್ಗೆ ಹುಯಿಲೆಬ್ಬಿಸು... ಅವಕಾಶವಾದಿ ರಾಜಕಾರಣಿಗಳ ದುರುದ್ದೇ... ವನ್ನು ಟೀಕಿಸಬಹುದಾದರೂ ಆ ಬಗೆಯ ಓದಿನ ಸಾಧ... ಯನ್ನು ಸಾಹಿತ್ಯ ಮತ್ತು ಸಂಸ್ಕೃತಿ ಅರ್ಥವಾಗದವರ ಬು... ಹೀನ ಓದು ಎಂದು ತಿರಸ್ಕರಿಸಲಾಗುವುದಿಲ್ಲ, ಹೀಗಾ... ಅಂಬೇಡ್ಕರ್ ಅವರನ್ನು ಬಳಸಿಕೊಂಡು ರಾಜಕಾರಣ ಮಾ... ತ್ತಿರುವ ಅವಕಾಶವಾದಿ ರಾಜಕಾರಣವನ್ನು ಟೀಕಿಸು... ಹೊತ್ತಿನಲ್ಲೇ ಬದಲಾದ ಸಂದರ್ಭ ಮತ್ತು ಎಚ್ಚೆತ್ತ ದಮನಿ... ಪ್ರಜ್ಞೆಗಳ ಹಿನ್ನೆಲೆಯಲ್ಲಿ ಒಟ್ಟಾರೆ ವಿರೋಧವನ್ನು ಸಹಾನ... ಭೂತಿಯಿಂದಲೇ ಪರಿಶೀಲಿಸಬೇಕಾಗುತ್ತದೆ. ಈ ವ್ಯಂ... ಚಿತ್ರವನ್ನು ಅಪಮಾನವೆಂಬಂತೆ ಪ್ರಾಮಾಣಿಕವಾಗಿಯೇ ಗ್ರಹಿ... ಬಹುದಾದ ತಿಳಿವಳಿಕೆಯನ್ನು ರಾಜಕೀಯ ಮುಗ್ಧತೆಯಿಂ... ಅವಗಣನೆ ಮಾಡುವುದು ಸಹ ಇಂದಿನ ದಲಿತ ಪ್ರಶ್ನೆಯ... ತಿರಸ್ಕರಿಸುವ ದುಷ್ಟ ವಿಧಾನವೇ ಆಗಿಬಿಡುವ ಸಾಧ... ಇದೆ...

▶

ಭಾರತದ 'ಸತ್ಯ' ಮತ್ತು ಆಮಿರ್ ಖಾನ್

ಕಂಡಹಾಗೆ



• ಗೌರಿ ಲಂಕೇಶ್

ಹಿಂದಿ ನಟ ಆಮಿರ್ ಖಾನ್ ...ಸಿಕೊಡುತ್ತಿರುವ 'ಸತ್ಯಮೇವ ಜಯತೆ' ಎಂಬ ...ರ್ಯಕ್ರಮದ ಸುತ್ತ ಕರ್ನಾಟಕದಲ್ಲಿ ಡಬ್ಬಿಂಗ್ ...ಾದ ಹುಟ್ಟುಕೊಂಡಿದ್ದರಿಂದ ಈ ಕಾರ್ಯಕ್ರಮ ...ಗಿದೆ ಎಂಬುದರತ್ತ ನಮ್ಮವರು ಯಾರೂ ಹೆಚ್ಚು ...ಮನ ಕೊಟ್ಟಂತಿಲ್ಲ. ಬೇರೆಯವರ ಮಾತು ...ಗಿರಲಿ, ನಾನೂ ಇದರತ್ತ ಗಮನ ಹರಿಸಿರಲಿಲ್ಲ. ...ದಲೇ ಟಿವಿ ದ್ವೇಷಿಯಾದ ನಾನು ಎರಡು ...ರಗಳ ಹಿಂದೆ ಇದು ಪ್ರಾರಂಭವಾದ ...ನುವಾರದಂದು ಅದರ ಬಗ್ಗೆ ಸಂಪೂರ್ಣವಾಗಿ ...ರೆತುಬಿಟ್ಟಿದ್ದೆ. ಕಳೆದ ಭಾನುವಾರ ...ೀಡೋಣವೆಂದರೆ ನಮ್ಮ ತಂಡ ದೂರದ ...ಳ್ಳಿಯೊಂದರಲ್ಲಿ ಕುಮಾರ್ ಬುರಡಿಕಟ್ಟಿಯ ಸರಳ ...ದುವೆ ಸಮಾರಂಭದಲ್ಲಿ ಭಾಗವಹಿಸಿದ್ದರಿಂದ ...ತ್ತೆ ಮಿಸ್ ಆಗಿತ್ತು. ಆದರೇನಂತೆ, ಆ ...ರ್ಯಕ್ರಮದ ಎರಡೂ ಎಪಿಸೋಡುಗಳನ್ನು ...ಟರ್‌ನೆಟ್‌ನಲ್ಲಿ ನೋಡಿದೆ.


ಆಮಿರ್ ಖಾನ್ ವಿಚಿತ್ರ ಮನುಷ್ಯ. ಈತ ...ಭಾವಂತ, ತನ್ನ ವೃತ್ತಿಯ ಬಗ್ಗೆ ಅಪಾರ ಕಾಳಜಿ ...ಂದಿರುವವನು, ಹೊಸ ಪ್ರಯೋಗಗಳನ್ನು ...ಡುವವನು. ...ಮಿರ್ ಖಾನ್ ...ದಲ ಬಾರಿಗೆ ...್ಯಾತಿ ಪಡೆದದ್ದು ...88ರಲ್ಲಿ ...ಡುಗಡೆಗೊಂಡ ...ಯಾಮತ್ ಸೆ ...ಯಾಮತ್ ತಕ್' ...ಬ ಚಿತ್ರದ ...ಾಲಕವಾದರೂ ... ಸದಭಿರುಚಿ ...ಮಾಗಳ ಆಸಕ್ತರ ...ನ ಸೆಳೆದದ್ದು ...84ರಲ್ಲಿ ...ಡುಗಡೆಗೊಂಡಿದ್ದ ...ೋಲಿ' ಎಂಬ ...ತ್ರದಲ್ಲಿ, ಆ ಚಿತ್ರದಲ್ಲಿ ...ಡ ಕಾಲೇಜ್ ...್ಯಾರ್ಥಿಯ ...ತ್ರದಲ್ಲಿ ಆಮಿರ್ ...ಂಬಾ ...ನೋಜ್ಞವಾಗಿ ...ಸಿದ್ದ. ಆನಂತರ ...ಮಿರ್ ಹೆಚ್ಚಾಗಿ ಕಮರ್ಷಿಯಲ್ ಚಿತ್ರಗಳಲ್ಲೇ ...ಸಿದರೂ ನಿಧಾನವಾಗಿ ಬೇರೆ ದಾರಿ ಹಿಡಿಯಲು ...ಯತ್ನಿಸತೊಡಗಿದ. ಸಿನಿಮಾಗಳ ನಿರ್ಮಾಪಕನಾಗಿ, ...ರ್ದೇಶಕನಾಗಿ, ಬರಹಗಾರನಾಗಿ ಹೊಸದನ್ನು ...ನ್ವೇಷಿಸುವ ಯತ್ನಗಳನ್ನು ಮಾಡಲಾರಂಭಿಸಿದ. ...ಲಿವುಡ್ಡಿನ ಇತರೆ ಖಾನ್‌ಗಳಾದ ಸಲ್ಮಾನ್ ಖಾನ್ ...ಕೆಗಳಿಗೆ ಶಿಕಾರಿ ಮಾಡಿ, ರಸ್ತೆ ಅಪಘಾತದಲ್ಲಿ ...ಬ್ಬನನ್ನು ಕೊಂದು ಅಪಖ್ಯಾತಿ ಗಳಿಸಿದರೆ, ...ರುಖ್ ಖಾನ್ ತನ್ನ ಸಿನಿಮಾಗಳಿಗೆ

ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಪಡೆಯುವುದರತ್ತ ಹೆಚ್ಚು ಗಮನ ಹರಿಸಿದ. ಆದರೆ ಅದೇ ಹೊತ್ತಿಗೆ ಆಮಿರ್ ಖಾನ್ 'ಲಗಾನ್' ಎಂಬ ಉತ್ತಮ ಸಿನಿಮಾವನ್ನು ನಿರ್ಮಿಸಿದ. ಆದಾದನಂತರ ಡಿಸ್‌ಲೆಕ್ಸಿಯಾದಂತಹ ಸಮಸ್ಯೆಯನ್ನು ಕೈಗೆತ್ತಿಕೊಂಡು 'ತಾರೆ ಜಮೀನ್ ಪರ್' ಎಂಬ ಸಿನಿಮಾವನ್ನು ನಿರ್ದೇಶಿಸಿದ. ಆಮೇಲೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಟೀಕಿಸುವ 'ಥ್ರೀ ಈಡಿಯಟ್' ಎಂಬ ಮತ್ತೊಂದು ಸಿನಿಮಾವನ್ನು ನಿರ್ಮಿಸಿದ. ಇದೆಲ್ಲದರ ನಡುವೆ 'ಘಜನಿ' ತರಹದ ಅಪ್ಪಟ ಕಮರ್ಷಿಯಲ್ ಸಿನಿಮಾಗಳಲ್ಲೂ ನಟಿಸಿ ಹಣ ಮಾಡಿಕೊಂಡ.

ಇದೇ ಆಮಿರ್ ಖಾನ್ ಕಲವು ಎಡವಟ್ಟುಗಳನ್ನೂ ಮಾಡಿಕೊಂಡ. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದ ಮೇಧಾ ಪಾಟ್ಕರ್ ಅವರಿಗೆ ಬೆಂಬಲ ಸೂಚಿಸಿದ. ಆದರೆ ಯಾವಾಗ ಆತನ 'ಫನಾ' ಸಿನಿಮಾದ ವಿರುದ್ಧ ಗುಜರಾತಿನಲ್ಲಿ ಗಲಾಟೆಗಳಾದವೋ ಆತ ಆಮಿರ್ ಮೌನ ವಹಿಸಿದ. ಆನಂತರ ಹಲವರು, ಆತ ಜನರ ಆರೋಗ್ಯ ಕೆಡಿಸುವ ಮತ್ತು ಪರಿಸರವನ್ನು ನಾಶಮಾಡುವ ಕೋಕಾಕೋಲಾ ಕಂಪನಿಯ ರೂಪದರ್ಶಿ ಆಗಿರುವುದರ ಬಗ್ಗೆ ಪ್ರಶ್ನಿಸಿದಾಗ ಆತ ಕೋಕಾಕೋಲಾ ಕಂಪನಿಯ ಪರ ವಹಿಸಿ ಮಾತನಾಡಿ ಎಲ್ಲರಲ್ಲಿ ನಿರಾಶೆ ಮೂಡಿಸಿದ.

ಆದರೂ ಈತ ಬೇರೆ ಬಾಲಿವುಡ್ ನಟರಿಗಿಂತ ವಿಭಿನ್ನವಾಗಿ ಕಾಣಿಸುವುದಕ್ಕೆ ಕೆಲವು ಕಾರಣಗಳಿವೆ. ಆತನಲ್ಲಿ ಜನರಿಗೆ ಉಪಯೋಗವಾಗುವಂತಹದ್ದನ್ನು ಮಾಡುವ ಬಗ್ಗೆ ಆಸಕ್ತಿ ಇದೆ. ತನ್ನ ಸಮಾಜಕ್ಕೆ ಏನನ್ನಾದರೂ ಕೊಡಬೇಕೆಂಬ ಕಾಳಜಿ ಇದೆ. ಆತ ನಟ ಮತ್ತು ನಿರ್ಮಾಪಕನಾಗಿರುವುದರಿಂದ ಎಲ್ಲವನ್ನೂ ಲಾಭನಷ್ಟದ ಲೆಕ್ಕಾಚಾರದಲ್ಲೇ ನೋಡುತ್ತಾನೆ ನಿಜ. ಆದರೆ ಅದೇ ಆತನಿಗೆ ಮುಖ್ಯವಾಗುವುದಿಲ್ಲ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ಸಲ್ಮಾನ್ ಖಾನ್, ಶಾರುಖ್ ಖಾನ್ ಮತ್ತು ಇತರರು ಟಿವಿ ಮಾಧ್ಯಮಕ್ಕೆ ಲಗ್ಗೆ ಇಟ್ಟು, ಖ್ಯಾತಿ ಮತ್ತು ಹಣವನ್ನು ದೋಚಲಾರಂಭಿಸಿದಾಗ ಆಮಿರ್ ಖಾನ್‌ಗೂ ಟಿವಿ ಕಾರ್ಯಕ್ರಮವನ್ನು ನಿರೂಪಿಸುವ ಆಹ್ವಾನ ಬಂದಿತ್ತು. ಆದರೆ ಇತರರಂತೆ ಗೇಮ್ ಶೋಗಳನ್ನು ಮಾಡುವ ಬಗ್ಗೆ ಆತನಿಗೆ ಆಸಕ್ತಿ ಇರಲಿಲ್ಲವಾದ್ದರಿಂದ ಅಂತಹ ಅವಕಾಶಗಳನ್ನು ತಿರಸ್ಕರಿಸಿದ್ದ.

ಈಗ ಅದೇ ಆಮಿರ್ ಖಾನ್ 'ಸತ್ಯಮೇವ ಜಯತೆ' ಎಂಬ ಕಾರ್ಯಕ್ರಮದ ಮೂಲಕ ಟಿವಿ ಲೋಕಕ್ಕೆ ಪಾದಾರ್ಪಣೆ ಮಾಡಿದ್ದಾನೆ. ಈ ಕಾರ್ಯಕ್ರಮಕ್ಕೆಂದು ಆತ ಕಳೆದ ಎರಡು ವರ್ಷಗಳಿಂದ ಶ್ರಮಿಸಿದ್ದಾನೆ. ಒಂದೇ ಒಂದು ಚಾನೆಲ್ ಮೂಲಕ ಈ ಕಾರ್ಯಕ್ರಮವನ್ನು ಪ್ರಸಾರ ಮಾಡುವ ಬದಲಾಗಿ ಏಕಕಾಲದಲ್ಲಿ ಹಲವಾರು ಭಾಷೆಗಳಲ್ಲಿ ಮತ್ತು ಹಲವಾರು ಚಾನೆಲ್‌ಗಳ ಮೂಲಕ ಇಡೀ ದೇಶವನ್ನು ತಲುಪುವಂತೆ ನೋಡಿಕೊಂಡಿದ್ದಾನೆ. ಅದೆಲ್ಲಕ್ಕಿಂತ ಮುಖ್ಯವಾಗಿ ಆತ ಆಯ್ಕೆ ಮಾಡಿಕೊಂಡಿರುವ ಸಮಯ. ಬೇಕಿದ್ದರೆ ಆಮಿರ್ ಖಾನ್ ಹೆಚ್ಚು ಜನ ಟಿವಿ ವೀಕ್ಷಿಸುವ ಸಂಜೆಯ ಪ್ರೈಮ್ ಟೈಮ್ ಅನ್ನೇ ಪಡೆಯಬಹುದಿತ್ತು. ಆದರೆ ಆತ ಹಾಗೆ ಮಾಡಲಿಲ್ಲ. ಬದಲಾಗಿ 'ನಾನು ಹೊಸತನ್ನು ನಿಮಗಾಗಿ ಕೊಡುತ್ತಿದ್ದೇನೆ, ನೋಡಿ' ಎಂದು ಭಾನುವಾರ ಬೆಳಗ್ಗೆ 11 ಗಂಟೆಯ ಸ್ಲಾಟ್ ಅನ್ನೇ ಆಯ್ಕೆ ಮಾಡಿಕೊಂಡಿದ್ದಾನೆ.



ಅದೆಲ್ಲ ಇರಲಿ, ಆಮಿರ್ ಖಾನ್‌ನ 'ಸತ್ಯಮೇವ ಜಯತೆ' ಕಾರ್ಯಕ್ರಮ ಹೇಗಿದೆ? ಮೊದಲನೆ ಕಂತಿನಲ್ಲಿ ಆತ ಹೆಣ್ಣು ಭ್ರೂಣ ಹತ್ಯೆ ಕುರಿತು ಚರ್ಚಿಸಿದ. ಅದರಲ್ಲಿ ಹೊಸ ಮಾಹಿತಿ ಇರಲಿಲ್ಲ ಅಥವಾ ಈಗಾಗಲೇ ಪತ್ರಿಕೆಗಳಲ್ಲಿ ಟಿವಿಯ ಸುದ್ದಿಯಲ್ಲಿ ವರದಿ ಮಾಡಿರದ ವಿಷಯಗಳೂ ಇರಲಿಲ್ಲ. ಹಾಗೆಯೇ ಎರಡನೆ ಕಂತಿನಲ್ಲಿ ಆತ ಮಕ್ಕಳ ಮೇಲಾಗುವ ಲೈಂಗಿಕ ಅತ್ಯಾಚಾರಗಳ ಕುರಿತು ಮಾತನಾಡಿದ. ಅದರಲ್ಲೂ ಹೊಸತೇನೂ ಇರಲಿಲ್ಲ. ಆದರೂ ಆತ ಆ ವಿಷಯಗಳನ್ನು ಪ್ರೆಸೆಂಟ್ ಮಾಡಿದ ರೀತಿ ಮನಮುಟ್ಟುವಂತಿತ್ತು. ಅದೇ ಅದರಲ್ಲಿರುವ ವಿಶೇಷ.

ಆಮಿರ್ ಖಾನ್ ಕ್ರಾಂತಿಕಾರಿಯೂ ಅಲ್ಲ, ಜನಸೇವಕನೂ ಅಲ್ಲ. ಆದರೆ ಆತ ತನ್ನ ಸ್ಟಾರ್ ಪವರ್‌ಅನ್ನು ಬಂಡವಾಳ ಮಾಡಿಕೊಂಡು, ಶಿಶುಹತ್ಯೆ, ಲೈಂಗಿಕ ಅತ್ಯಾಚಾರದಂತಹ ವಿಷಯಗಳ ಬಗ್ಗೆ ನಮ್ಮ ಸಮಾಜದಲ್ಲಿ ಎಚ್ಚರಿಕೆ ಮೂಡಿಸಲು ಯತ್ನಿಸುತ್ತಾನೆಂದರೆ, ಈ ಕೆಲಸದಲ್ಲಿ ತಾನು ಮಗ್ನನಾಗಿರುವುದರಿಂದ ತನಗೆ ವರ್ಷಕ್ಕೆ ನೂರರಿಂದ ನೂರಾಇಪ್ಪತ್ತೈದು ಕೋಟಿ ರೂಪಾಯಿಗಳ ಆದಾಯ ತರುವ ಜಾಹೀರಾತುಗಳನ್ನು ಕೈಬಿಡುತ್ತಾನೆಂದರೆ, ಆತನನ್ನು ಮೆಚ್ಚದೆ ಇರಲಾಗುತ್ತದೆಯೇ? (ಅಂದಹಾಗೆ 13 ಕಂತುಗಳಲ್ಲಿ ಪ್ರಸಾರವಾಗಲಿರುವ 'ಸತ್ಯಮೇವ ಜಯತೆ'ಗೆ ಆತ ಪಡೆಯುತ್ತಿರುವ ಸಂಭಾವನೆ 45 ಕೋಟಿ ರೂಪಾಯಿಗಳು ಮಾತ್ರ. ಆ ಸಂಭಾವನೆಯಲ್ಲಿ ಈ ಕಾರ್ಯಕ್ರಮವನ್ನು ನಿರ್ಮಿಸುವ ಮೊತ್ತವೂ ಸೇರಿದೆ.)

ಸಮಾಜ ತಜ್ಞ ಶಿವ್ ವಿಶ್ವನಾಥನ್ ಅವರು ಹೇಳಿರುವಂತೆ ಆಮಿರ್ ಖಾನ್ "ಪ್ರಕಾಶಿಸುತ್ತಿಲ್ಲದ ಭಾರತದ ಇನ್ನೊಂದು ಮುಖವನ್ನು ಆಮಿರ್ ಖಾನ್ ನಮ್ಮ ದೇಶದ ಮಧ್ಯಮ ವರ್ಗದವರ ಮುಂದೆ ತೆರೆದಿಡುತ್ತಿದ್ದಾರೆ."

ಆಮಿರ್ ಖಾನ್‌ನ 'ಸತ್ಯಮೇವ ಜಯತೆ' ಕಾರ್ಯಕ್ರಮದಿಂದಾಗಿ ಒಂದು ಸಾವಿರ ಹೆಣ್ಣುಮಕ್ಕಳ ಪ್ರಾಣ ಉಳಿದರೆ, ಸಾವಿರಾರು ಮಕ್ಕಳ ಮೇಲಾಗುವ ಲೈಂಗಿಕ ಅತ್ಯಾಚಾರಕ್ಕೆ ಲಗಾಮು ಬಿದ್ದರೆ ಅದನ್ನು ಬೇಡ ಎನ್ನುವವವರು ಯಾರು? ನಮ್ಮ ಹೆಚ್ಚಿನ ನಟನಟಿಯರು ತಳುಕುಬಳುಕಿನಲ್ಲೇ ತಮ್ಮ ಕಾಲವನ್ನು ದೂಡುತ್ತಿರುವಾಗ ಸಾಮಾಜಿಕ ಪ್ರಜ್ಞೆಯನ್ನು ಹೊಂದಿರುವ ಆಮಿರ್ ಖಾನ್ ನಂತಹ ಜನಪ್ರಿಯ ನಟನಿಂದ ಇದಕ್ಕಿಂತ ಹೆಚ್ಚನ್ನು ನಿರೀಕ್ಷಿಸುವುದು ಬೇಡ.


❖

...ವಿಕ ಸಂಪಾದಕರಾಗಿ ಸುಗತ ಶ್ರೀನಿವಾಸರಾಜು

ಸುಗತ ಶ್ರೀನಿವಾಸರಾಜು ಅವರು 'ವಿಜಯ ಕರ್ನಾಟಕ' ಪತ್ರಿಕೆಯ ...ೂತನ ಸಂಪಾದಕರಾಗಿದ್ದಾರೆ. ಇತ್ತೀಚಿನ ತನಕ 'ಔಟ್‌ಲುಕ್' ಪತ್ರಿಕೆಯ ...ಕ್ಷಿಣ ಭಾರತದ ಸಂಪಾದಕರಾಗಿದ್ದ ಸುಗತ ಈ ಹಿಂದೆ ...ಿಂದೂಸ್ತಾನ್ ಟೈಮ್ಸ್, ಟೈಮ್ಸ್ ಆಫ್ ಇಂಡಿಯಾ ಮತ್ತು ದಕ್ಕನ್ ...ೆರಾಲ್ಡ್ ಪತ್ರಿಕೆಗಳಲ್ಲೂ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ...ಅವರು ಈಗಾಗಲೇ ಇಂಗ್ಲಿಷ್‌ನಲ್ಲಿ ಎರಡು ಪುಸ್ತಕಗಳನ್ನೂ ಬರೆದು ...ೈ ಎನಿಸಿಕೊಂಡಿದ್ದಾರೆ. ಇಲ್ಲಿಯತನಕ ಇಂಗ್ಲಿಷ್ ...ಪತ್ರಿಕೋದ್ಯಮದಲ್ಲಿದ್ದ ಸುಗತ ಇದೇ ಮೊದಲ ಬಾರಿಗೆ ಕನ್ನಡ ...ಪತ್ರಿಕೋದ್ಯಮಕ್ಕೆ ಕಾಲಿಡುತ್ತಿದ್ದಾರೆ.

ಅಂದಹಾಗೆ, ಸುಗತ ಕನ್ನಡ ಓದುಗರಿಗೆ ಅಷ್ಟು ...ರಿಚಿತರಿಲ್ಲದಿರಬಹುದು. ಆದರೆ ಅವರ ತಂದೆ ಟಿ. ಶ್ರೀನಿವಾಸರಾಜು ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ಬಹಳಷ್ಟು ...ೀತಿ ಮತ್ತು ಅಭಿಮಾನಿಗಳನ್ನು ಗಳಿಸಿದ್ದವರು. ತಂದೆಯ ವ್ಯಕ್ತಿತ್ವದ ...ಳಕೆಯನ್ನು ಮತ್ತು ಕನ್ನಡದ ಭಾಷೆಯ ಬಗೆಗಿನ ಕಾಳಜಿಯನ್ನೂ ಮೈಗೂಡಿಸಿಕೊಂಡಿರುವ ಸುಗತ ಕನ್ನಡ ಪತ್ರಿಕೋದ್ಯಮಕ್ಕೆ ಹೊಸತನವನ್ನು ತಂದುಕೊಡಲಿ ಎಂದು ಆಶಿಸುತ್ತೇವೆ.

ವಿಶ್ವೇಶ್ವರ ಭಟ್ ಮತ್ತು ಅವರ ಹಿಂ'ಬಾಲಕರು' ವಿಕದಲ್ಲಿ ಇದ್ದಷ್ಟು ದಿನ ಅವರೆಲ್ಲ ಆ ಪತ್ರಿಕೆಯನ್ನು ಆರೆಸ್ಸೆಸ್ಸಿನ ಕೇಸರಿ ಪತ್ರಿಕೆಯನ್ನಾಗಿಸಿದ್ದರು. ಆದರೆ ಅವರನ್ನೆಲ್ಲ ಹೊರಗೆ ಕಳುಹಿಸಿದ ನಂತರ ಸಂಪಾದಕರಾಗಿ ಬಂದಿದ್ದ ಈ.ರಾಘವನ್ 'ವಿಕ'ವನ್ನು ಸ್ವಚ್ಛಗೊಳಿಸಿ ಅದನ್ನು ಒಂದು ಆರೋಗ್ಯಕರ, ಜಾತ್ಯತೀತ ಪತ್ರಿಕೆಯನ್ನಾಗಿ ರೂಪಾಂತರಿಸಿದ್ದರು. ಜೊತೆಗೆ ವಿಜಯ ಕರ್ನಾಟಕದ ಪ್ರಸಾರ ಸಂಖ್ಯೆ ಕುಗ್ಗದಂತೆಯೂ ಎಚ್ಚರಿಕೆ ವಹಿಸಿದ್ದರು.




ದುರದೃಷ್ಟವಶಾತ್ ರಾಘವನ್ ಇದಕ್ಕಿದ್ದಂತೆ ಹೃದಯಾಘಾತದಿಂದ ಕೆಲ ತಿಂಗಳ ಹಿಂದೆ ಮರಣ ಹೊಂದಿದ್ದರು. ಆದಾದನಂತರ ಹಂಗಾಮಿ ಸಂಪಾದಕರಾಗಿ ವಸಂತ್ ನಾದಿಗೇರ್ ಪತ್ರಿಕೆಯನ್ನು ನೋಡಿಕೊಳ್ಳುತ್ತಿದ್ದರು.

ಈಗ ಸುಗತ ಶ್ರೀನಿವಾಸರಾಜು ಆ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ಚುರುಕಿ ಹೊಡೆಯುವುದರಲ್ಲಿ ಸಿದ್ಧಹಸ್ತರೂ, ದೇಶವಿದೇಶಗಳ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಗುಹೋಗುಗಳ ಬಗ್ಗೆ ಅಪಾರ ಜ್ಞಾನವನ್ನು ಹೊಂದಿರುವವರೂ, ಜಾತ್ಯತೀತ ಮನೋಭಾವದವರೂ ಆದ ಸುಗತ ಅವರಿಗೆ ನಮ್ಮ ಅಭಿನಂದನೆಗಳು.


❖

ಲಲಿತ್ ಮತ್ತು ನರೇಂದ್ರ ಎಂಬ ಎರಡು ಮೋದಿಗಳು!

ಐಪಿಎಲ್ ಕ್ರಿಕೆಟ್ ಎಂಬ ದಂಧೆಯ ರೂವಾರಿ ವಾಸ್ತವದಲ್ಲಿ ಲಲಿತ್ ಮೋದಿಯೆಂಬ ಉದ್ಯಮಿ ಕಮ್ ಕ್ರಿಮಿನಲ್ ಆರೋಪಿ! ಈತ ತನಗೆ ಪೂರ್ವಾರ್ಜಿತವಾಗಿ ಬಂದ ಗಾಡ್‌ಫ್ರೇ ಫಿಲಿಪ್ಸ್ ಇಂಡಿಯಾ ಎಂಬ ಕಂಪನಿಯ ಮಾಲಿಕ. ಫ್ಯಾಷನ್ ಟಿವಿ, ಇಎಸ್‌ಪಿಎನ್ ಮುಂತಾದ ವಿದೇಶಿ ಚಾನೆಲ್‌ಗಳಿಗೆ ಭಾರತದ ಅಧಿಕೃತ ವಿತರಕನೂ ಹೌದು. ಹೀಗೆ ನಾನಾ ವ್ಯವಹಾರಗಳಲ್ಲಿ ತೊಡಗಿದ ಲಲಿತ್ ಮೋದಿಯ ಪಾಲಿಗೆ ಕ್ರಿಕೆಟ್ ಒಂದು ಚಿನ್ನದ ಮೊಟ್ಟೆಯಿಡುವ ಕೋಳಿಯಿದ್ದಂತೆ. ಹಾಗಾಗಿ ಬಿಸಿಸಿಐನಲ್ಲಿ ಪ್ರತಿಷ್ಠಾಪಿತನಾಗಿ ನಂತರ ಐಪಿಎಲ್‌ನ್ನು ರೂಪಿಸಿದ.



ಈತನ ಹಿನ್ನೆಲೆಯನ್ನು ಕೆದಕಿದರೆ ಹಲವು ಕುತೂಹಲಕರ ಸಂಗತಿಗಳು ಸಿಗುತ್ತವೆ. 1985ರಲ್ಲಿ ಈತ ಅಮೆರಿಕಾದ ಉತ್ತರ ಕರೋಲಿನಾ ಪಟ್ಟಣದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ತನ್ನ ಕೆಲವು ಗೆಳೆಯರ ಜೊತೆ ಸೇರಿ ಕೊಕೈನ್ ಎಂಬ ಮಾದಕ ವಸ್ತು ಕಳ್ಳಸಾಗಣೆ ಶುರುವಿಟ್ಟುಕೊಂಡಿದ್ದ. ಅಷ್ಟು ಮಾತ್ರವಲ್ಲದೆ ಕೆಲವರ ಮೇಲೆ ಹಲ್ಲೆ ನಡೆಸಿದ ಹಾಗೂ ಕಿಡ್ನಾಪ್ ಮಾಡಿದ ಆರೋಪದ ಮೇಲೆ ಬಂಧನಕ್ಕೊಳಗಾಗಿ ಎರಡು ವರ್ಷ ಕಾರಾಗೃಹ ಶಿಕ್ಷೆಗೆ ಗುರಿಯಾಗಿದ್ದ. ನಂತರ ಈತನ ಕ್ಷಮಾಪಣಾ ಅರ್ಜಿಯನ್ನು ಮನ್ನಿಸಿ ನ್ಯಾಯಾಲಯ ಈತನನ್ನು ಬಿಡುಗಡೆ ಮಾಡಿತ್ತು. ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಅದೇನೋ ಎಡವಟ್ಟಾಗಿ ಈತ ಹಾದಿ ತಪ್ಪಿರಬಹುದು ಎಂದು ನೀವು ಭಾವಿಸಬಹುದು. ಆದರೆ ತೀರಾ ಇತ್ತೀಚೆಗೆ 2006ರಲ್ಲಿ ಈಶಾನ್ಯ ಭಾರತದಲ್ಲಿ ನಡೆದ ಅಕ್ರಮ ಲಾಟರಿ ವ್ಯವಹಾರ ನಡೆಸಲು ಹೋಗಿ ಈತ ಸಿಕ್ಕಿಬಿದ್ದಿದ್ದಾನೆ. ಈ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ. ಹೀಗೆ ಈತನ ಜಾತಕದೊಂದಿಗೆ ಅವ್ಯವಹಾರಗಳು, ಅಕ್ರಮಗಳು ಅಂಟಿಕೊಂಡು ಬಂದಿವೆ. ಇಂಥ ಹಿನ್ನೆಲೆಯಲ್ಲಿ ಈತನ ಕ್ರಿಮಿನಲ್ ಪ್ರತಿಭೆ ಐಪಿಎಲ್ ರೂಪಿಸುವಲ್ಲಿ ಬಹಳ ಉಪಯೋಗಕ್ಕೆ ಬಂದಿರಬಹುದು.



ಆ ಎಲ್ಲಾ ಕರಾಮತ್ತುಗಳನ್ನು ಬಳಸಿಯೇ ಈತ ಬೇನಾಮಿ ಹೆಸರುಗಳಲ್ಲಿ ಇತರ ಫ್ರಾಂಚೈಸಿಗಳಲ್ಲಿ ಪಾಲನ್ನು ಹೊಂದಿದ್ದಾನೆ. ಅದಕ್ಕಾಗಿ ಆತನ ಬಂಧು ಮಿತ್ರರ ಹೆಸರುಗಳನ್ನು ಬಳಸಿಕೊಂಡಿದ್ದಾನೆ. ರಾಜಾಸ್ಥಾನ್ ರಾಯಲ್ಸ್ ತಂಡದ ದೊಡ್ಡ ಪ್ರಮಾಣದ ಶೇರುಗಳು ಮೋದಿಯ ಭಾವ ಸುರೇಶ್ ಚೆಲ್ಲಾರಾಮ್‌ನ ಹೆಸರಿನಲ್ಲಿದೆ. ಹಾಗೆಯೇ ತನ್ನ ಸಂಬಂಧಿ ಗೌರವ್ ಬರ್ಮನ್ ಎಂಬುವವನ ಮೂಲಕ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದ ಷೇರುಗಳನ್ನು ಹೊಂದಿದ್ದಾನೆ. ಅಷ್ಟು ಮಾತ್ರವಲ್ಲದೆ ಐಪಿಎಲ್‌ಗೆ ಸಂಬಂಧಿಸಿದ ಹಲವಾರು ವ್ಯವಹಾರಗಳಲ್ಲಿ ಲಂಚ, ಕಿಕ್‌ಬ್ಯಾಕ್ ಪಡೆದ ವ್ಯಾಪಕ ಆರೋಪಗಳು ಈತನ ಮೇಲಿವೆ.

ಇಂಥ ತಲೆಹಾತಕ ಲಲಿತ್ ಮೋದಿ ಈ ಹಿಂದೆ ರಾಜಾಸ್ಥಾನದ ಬಿಜೆಪಿ ಮುಖ್ಯಮಂತ್ರಿ ವಸುಂಧರ ರಾಜೇ ಅವರ ಪರಮಾಪ್ತರ ವಲಯದಲ್ಲಿ ಗುರುತಿಸಿಕೊಂಡಿದ್ದ. ಈಗ ಬಿಜೆಪಿಯ ಪ್ರಧಾನಿ ಕ್ಯಾಂಡಿಡೇಟು ನರೇಂದ್ರ ಮೋದಿಗೂ ಈ ಲಲಿತ್ ಮೋದಿಗೂ ಭಾರೀ ನಿಕಟ ಸಂಬಂಧ. ಈ ಇಬ್ಬರು ಮೋದಿಗಳು ಸೇರಿ ಗುಜರಾತ್ ರಾಜಧಾನಿ ಅಹಮದಾಬಾದ್ ಹೆಸರಿನಲ್ಲಿ ಒಂದು ಫ್ರಾಂಚೈಸಿ ಪಡೆಯಲು ನಡೆಸಿದ ಕಸರತ್ತು ತೀರಾ ನಾಚಿಕೆಗೇಡಿನದು. ನರೇಂದ್ರ ಮೋದಿಯ ಮತ್ತೊಬ್ಬ ಗುಜರಾತಿ ಮಿತ್ರ ಅನಿಲ್ ಅಂಬಾನಿ ಮತ್ತು ನಿರ್ಮಾಣ ಕ್ಷೇತ್ರದಲ್ಲಿರುವ ಅದಾನಿ ಗ್ರೂಪ್‌ನವರು ಈ ಫ್ರಾಂಚೈಸಿಗೆ ಬಂಡವಾಳ ಹೂಡಲು ತಯಾರಾಗಿದ್ದರು.

ಈ ಕೊಟ ಕೊಚ್ಚಿ ತಂಡದ ಮಾಲಿಕರ ಮೇಲೆ ನಾನಾ ಒತ್ತಡಗಳನ್ನು, ಬೆದರಿಕೆಗಳನ್ನು ಹಾಕಿದರು. ಆಗ ಕೊಚ್ಚಿ ತಂಡದ ಪರವಾಗಿ ನಿಂತದ್ದು ಸ್ವತಃ ಕೇಂದ್ರದ ಮಂತ್ರಿ ಕೇರಳ ಮೂಲದ ಶಶಿ ತರೂರ್. ಈ ಕೇಂದ್ರ ಮಂತ್ರಿಯ ಬೆಂಬಲಕ್ಕೆ ಬೇರೆ ಕಾರಣಗಳೂ ಇದ್ದವು. ಏನೆಂದರೆ ಆತ ತನ್ನ ಪ್ರೇಯಸಿ ಸುನಂದಾ ಪಾರಿಕ್ಕರ್ ಮೂಲಕ ಕೊಚ್ಚಿ ತಂಡದಲ್ಲಿ ಶೇಕಡ 5 ರಷ್ಟು ಷೇರುಗಳನ್ನು ಹೊಂದಿದ್ದ. ದೇಶಭಕ್ತ ಬಿಜೆಪಿಗಳು ಈ ಕಚ್ಚಾಟವನ್ನು ಪಾರ್ಲಿಮೆಂಟಿಗೂ ತಲುಪಿಸಿದರು. ಕೊನೆಗೆ ಶಶಿ ತರೂರ್‌ನ ತಲೆದಂಡವಾಗಿ ಆತ ಮಂತ್ರಿಗಿರಿ ಕಳೆದುಕೊಂಡ. ಆಗಲೂ ಈ ತಂಡದ ಮಾಲಿಕರು ಬಗ್ಗದೆ ಇದ್ದಾಗ ಆ ತಂಡದ ಲೈಸೆನ್ಸನ್ನೇ ರದ್ದುಮಾಡಿಸುವಲ್ಲಿ ಮೋದಿದ್ವಯರು ಯಶಸ್ವಿಯಾಗಿದ್ದಾರೆ.

ಹೇಗಿದೆ ಜೋಡಿ ಮೋದಿಗಳ ಕರಾಮತ್ತು?



ಐಪಿಎಲ್ ತೆರೆಮರೆಯ ಕಳ್ಳರು

ಹೌದು ನಿಜ, ಈ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲೇ ಭಾರೀ ಕಳ್ಳಕಾಕರು ತುಂಬಿದ್ದಾರೆ. ಅಷ್ಟು ಮಾತ್ರವಲ್ಲ, ಈ ಅವ್ಯವಹಾರವನ್ನು ಕೆದಕುತ್ತಾ ಹೋದಂತೆ ಈ ಐಪಿಎಲ್ ಟ್ವೆಂಟಿ-20 ಎಂಬ ದಂಧೆಯ ಹಿಂದೆ ಸಾಲುಸಾಲು ಹಗರಣಗಳೇ ತುಂಬಿತುಳುಕುತ್ತಿರುವುದು ಬಯಲಾಗುತ್ತದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಒಂದು ವೈಡ್‌ಬಾಲ್ ಎಸೆದರೆ ಹತ್ತು ಲಕ್ಷ! ಒಂದು ನೋಬಾಲ್ ಎಸೆದರೆ ಹತ್ತು ಲಕ್ಷ! ಒಂದು ಓವರ್‌ನಲ್ಲಿ 16 ರನ್ ಕೊಟ್ಟರೆ ಇನ್ನೂ ಹೆಚ್ಚು! ಚೆಂಡನ್ನು ಹೊಡೆಯದೆ ಹಾಗೇ ಬಿಟ್ಟರೆ ಮತ್ತಷ್ಟು! ಇದು ಇಂದಿನ ಐಪಿಎಲ್ ಕ್ರಿಕೆಟ್‌ನ ದುಸ್ಥಿತಿ. ಆಟವನ್ನು ಗೆಲ್ಲಿಸಿಕೊಡುವ ಆಟಗಾರರಿಗಿಂತ ಆಟವನ್ನು ಸೋಲಿಸಿಕೊಡುವ ಆಟಗಾರರಿಗೆ ಡಿಮ್ಯಾಂಡು ಹೆಚ್ಚಾಗಿದೆಯಂತೆ! ಇಂಡಿಯಾ ಟಿವಿ ಎಂಬ ಹಿಂದಿ ಚಾನೆಲ್ ನಡೆಸಿದ ಕುಟುಕು ಕಾರ್ಯಾಚರಣೆಯಲ್ಲಿ ಒಟ್ಟಿಗೆ ಐದು ಕ್ರಿಕೆಟ್ ಕಣ್ಮಣಿಗಳು ಸಿಕ್ಕಿಬಿದ್ದಿವೆ. ಈ ಕ್ರಿಕೆಟ್ ರತ್ನಗಳೆಂದರೆ ಡೆಕ್ಕನ್ ಚಾರ್ಜರ್ಸ್ ತಂಡದ ಟಿ.ಪಿ. ಸುಧೀಂದ್ರ, ಪುಣೆ ವಾರಿಯರ್ಸ್‌ನ ಮೋನಿಶ್ ಮಿಶ್ರಾ, ಡೆಲ್ಲಿ ತಂಡದ ಅಭಿನವ್ ಬಾಲಿ, ಪಂಜಾಬ್ ತಂಡದ ಅಮಿತ್ ಯಾದವ್ ಮತ್ತು ಶಲಭ್ ಶ್ರೀವಾಸ್ತವ.



ಕಳ್ಳಾಟ ಆಡಲು ಹೊಸದಾಗಿ ಒಪ್ಪಂದ ಮಾಡಿಕೊಳ್ಳಲು ಅಣಿಯಾಗಿದ್ದ ಆಟಗಾರರು ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ. ಕೂಡಲೇ ಅಖಾಡಕ್ಕಿಳಿದ ಬಿಸಿಸಿಐ ಆ ಐದೂ ಮಂದಿ ಆಟಗಾರರನ್ನು ಎಲ್ಲಾ ರೀತಿಯ ಕ್ರಿಕೆಟ್‌ನಿಂದ ಕೂಡಲೇ ಸಸ್ಪೆಂಡ್ ಮಾಡಿದೆ. ಹೆಚ್ಚಿನ ಟೀಕೆಗಳಿಗೆ ಆಸ್ಪದ ಕೊಡದೆ, ಕ್ರೀಡೆಯ ಪಾವಿತ್ರ್ಯವನ್ನು ಕಾಪಾಡುವ ಸಲುವಾಗಿ ತಪ್ಪಿತಸ್ಥರ ಮೇಲೆ ಶೀಘ್ರ ಕ್ರಮ ತೆಗೆದುಕೊಂಡ ಕ್ರಿಕೆಟ್ ಮಂಡಳಿಯ ದಕ್ಷತೆಯನ್ನು ಮೆಚ್ಚದವರು ಯಾರಿದ್ದಾರೆ? ಆದರೆ ಈ ಕಳ್ಳರನ್ನು ಕಾಯಲು ನಿಂತವರೇ ಭಾರೀ ದರೋಡೆಕೋರರಾಗಿದ್ದಾರೆ ಎಂಬುದೇ ಬಹುದೊಡ್ಡ ವಿಪರ್ಯಾಸ.

ಹೌದು ನಿಜ, ಈ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲೇ ಭಾರೀ ಕಳ್ಳಕಾಕರು ತುಂಬಿದ್ದಾರೆ. ಅಷ್ಟು ಮಾತ್ರವಲ್ಲ, ಈ ಅವ್ಯವಹಾರವನ್ನು ಕೆದಕುತ್ತಾ ಹೋದಂತೆ ಈ ಐಪಿಎಲ್ ಟ್ವೆಂಟಿ-20 ಎಂಬ ದಂಧೆಯ ಹಿಂದೆ ಸಾಲುಸಾಲು ಹಗರಣಗಳೇ ತುಂಬಿತುಳುಕುತ್ತಿರುವುದು ಬಯಲಾಗುತ್ತದೆ.

ಈ ಕುಟುಕು ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದ ಪುಣೆ ವಾರಿಯರ್ಸ್ ತಂಡದ ಮೋನಿಶ್ ಮಿಶ್ರ ಹೇಳಿದ ಮಾತು ಈ ಐಪಿಎಲ್‌ನ ಕಪ್ಪುಹಣದ ಮುಖವನ್ನು ಬಿಚ್ಚಿಡುತ್ತದೆ. ಪುಣೆ ವಾರಿಯರ್ಸ್ ತಂಡದ ಮಾಲಿಕ ದೇಶದ ಬಹುದೊಡ್ಡ ರಿಯಲ್ ಎಸ್ಟೇಟ್ ಡಾನ್ ಹಾಗೂ ಬಿಲ್ಡರ್ ಸುಬ್ರತೋ ರಾಯ್. ಆತ ಮೋನಿಶ್ ಮಿಶ್ರಾನನ್ನು ಅಧಿಕೃತವಾಗಿ ತನ್ನ ತಂಡಕ್ಕಾಗಿ ಕೊಂಡುಕೊಂಡಿದ್ದು 30 ಲಕ್ಷಕ್ಕೆ. ಆದರೆ ಇದು ರಾಮನ ಲೆಕ್ಕಕ್ಕೆ ಬರುವ ಮೊತ್ತವಾಗಿದ್ದು ಉಳಿದ 1 ಕೋಟಿ 20 ಲಕ್ಷ ರೂಗಳನ್ನು ಕಪ್ಪುಹಣದ ರೂಪದಲ್ಲಿ ಕೊಟ್ಟಿದ್ದಾನೆ. ಮಿಶ್ರಾ ಹೇಳಿಕೊಂಡಂತೆ ಹಲವಾರು ತಂಡದ ಮಾಲಿಕರು ಆಟಗಾರರಿಗೆ ಕಪ್ಪುಹಣ ಹರಿಸುತ್ತಾರೆ. ಇದು ಐಪಿಎಲ್‌ನಲ್ಲಿ ಹರಿದಾಡುತ್ತಿರುವ ಸಾವಿರಾರು ಕೋಟಿ ಕಪ್ಪುಹಣದ ಒಂದಂಶ ಮಾತ್ರ. ಈ ಕಪ್ಪುಹಣದ ದಂಧೆ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿರುವವರಿಗೆ ಸರ್ವೇಸಾಮಾನ್ಯ. ಆದರೆ ಆಘಾತಕಾರಿ ಅಂಶವೇನೆಂದರೆ ಸುಬ್ರತೊ ರಾಯ್ ರಿಯಲ್ ಎಸ್ಟೇಟ್ ಉದ್ಯಮಿ ಮಾತ್ರವಲ್ಲ, ಸಹರಾ, ಸಮಯ್ ಎಂಬ ಟಿವಿ ಚಾನಲ್‌ಗಳನ್ನೂ ಹಾಗೂ ರಾಷ್ಟ್ರೀಯ ಸಹರಾ ಎಂಬ ಹಿಂದಿ ದಿನ ಪತ್ರಿಕೆಗಳಿಗೆ ಕೂಡ ಆತ ಮಾಲಿಕನಾಗಿದ್ದಾನೆ. ಮೋನಿಶ್ ಮಿಶ್ರಾನನ್ನು ಸಸ್ಪೆಂಡ್ ಮಾಡಿದ ಬಿಸಿಸಿಐನ ಅಧಿಪತಿಗಳು ಹೆಚ್ಚೆಂದರೆ ಸುಬ್ರತೋ ರಾಯ್‌ಗೆ ಸಲಾಮು ಹೊಡೆಯಬಹುದಷ್ಟೆ.



ಹಾಗಾದರೆ ಕಪ್ಪುಹಣವನ್ನು ಚಲಾಯಿಸುತ್ತಿರುವ ಐಪಿಎಲ್‌ನ ಅಂತರಾಳ ಎಂಥದ್ದಿರಬಹುದು? ಏನಿದರ ಗುಟ್ಟು?

ಐಪಿಎಲ್ ಅಂತರಾಳ

ನಂಬೋದು ಬಿಡೋದು ನಿಮಗೆ ಬಿಟ್ಟದ್ದು ಇರೋ ವಿಷಯವನ್ನು ಇದ್ದಹಾಗೆ ನಿಮ್ಮ ಮುಂದೆ ಇಡೋದಷ್ಟೆ ನಮ್ಮ ಕೆಲಸ. ನೋಡಿ, ಈ ಐಪಿಎಲ್ ಎಂಬ ದಂಧೆಯನ್ನು ಪ್ರಾರಂಭಿಸಿದ್ದು ಮಾತ್ರ ಹಡಬಿಟ್ಟಿ ಹಣದ ಲೂಟಿಗಾಗಿ ಎಂಬುದು ಅಪ್ಪಟ ಸತ್ಯ. ಒಂದು ಕ್ರೀಡೆಗೆ ಇರಬೇಕಾದ ಲಕ್ಷಣಗಳನ್ನೆಲ್ಲಾ ಅಳಿಸಿಹಾಕಿ, ಕೇವಲ ಜಾಹಿರಾತನ್ನಷ್ಟೇ ಗುರಿಯಾಗಿಟ್ಟುಕೊಂಡು ಮೂರ್ಖರ ಪೆಟ್ಟಿಗೆಯ ದಾಸರಾಗಿರುವ ನಮಗೆ ಬೇಕಾದ ಒಂದಷ್ಟು ಮಸಾಲೆಗಳನ್ನು ಸೇರಿಸಿ ರೂಪಿತವಾದ ದಂಧೆಯೇ ಐಪಿಎಲ್ ಟ್ವೆಂಟಿ-20. ಅಸಲಿಗೆ ಈ ದಂಧೆಯ ರೂವಾರಿ ಲಲಿತ್ ಕುಮಾರ್ ಮೋದಿ ಎಂಬ ಗುಜರಾತ್ ಮೂಲದ ಉದ್ಯಮಿ.

ಭಾರತದಲ್ಲಿ ಕ್ರಿಕೆಟ್ ಲೀಗ್ ಮ್ಯಾಚ್‌ಗಳನ್ನು ನಡೆಸಲು 2007ರಲ್ಲಿ ಮೊದಲ ಬಾರಿಗೆ ಜ಼ೀ ನೆಟ್‌ವರ್ಕ್ ಸಂಸ್ಥೆಯವರು ಪ್ರಯತ್ನಿಸಿದರು. ಬಿಸಿಸಿಐನ ಅಧ್ಯಕ್ಷ ಸ್ಥಾನದಲ್ಲಿದ್ದ ಲಲಿತ್ ಮೋದಿ ಈ ಯೋಜನೆಯಿಂದ ಬರಬಹುದಾದ ಲಾಭದ ವಾಸನೆಯನ್ನು ಹಿಡಿದು, ಕಿಲಾಡಿ ಲೆಕ್ಕಾಚಾರ ಹಾಕಿ ಕೂಡಲೇ ಕಾರ್ಯಪ್ರವೃತ್ತನಾದ. ಅಮೆರಿಕಾದ ಬಾಸ್ಕೆಟ್‌ಬಾಲ್ ಲೀಗ್ ಹಾಗೂ ಯೂರೋಪಿನಲ್ಲಿ ನಡೆಯುವ ಫುಟ್‌ಬಾಲ್ ಲೀಗ್‌ಗಳ ಮಾದರಿಯಲ್ಲಿ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಡಿಯಲ್ಲೇ ಅಧಿಕೃತವಾಗಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ. ಆ ಮೂಲಕ ಕ್ರಿಕೆಟ್ ಎಂಬ ಕ್ರೀಡೆಯನ್ನೂ ಹಾಗು ಕ್ರಿಕೆಟಿಗರನ್ನೂ ಬಹಿರಂಗ ಹರಾಜಿಗಿಟ್ಟ.



ಹೀಗೆ ರೂಪಿಸಲ್ಪಟ್ಟ ಹರಾಜು ನಿಯಮಗಳ ಪ್ರಕಾರ, ದೇಶದ ವಿವಿಧ ನಗರಗಳ ಹೆಸರಿನ ತಂಡಗಳನ್ನು ರಚಿಸಲು ಫ್ರಾಂಚೈಸಿ ಲೈಸೆನ್ಸುಗಳನ್ನು ನೀಡಲಾಗುತ್ತದೆ. ಈ ಲೈಸೆನ್ಸು ಪಡೆಯಲು ಆಸಕ್ತ ಬಂಡವಾಳಿಗರು ಬಿಡ್‌ನಲ್ಲಿ ಭಾಗವಹಿಸಿ ತಮಗೆ ಬೇಕಾದ ನಗರದ ಹೆಸರಿನ ತಂಡವನ್ನು, ಕ್ಷಮಿಸಿ... ತಂಡದ ಹೆಸರನ್ನು ಖರೀದಿಸಬಹುದು. ಹೀಗೆ ಫ್ರಾಂಚೈಸಿ ಪಡೆದುಕೊಂಡಿರುವ ಬಹುಪಾಲು ಮಾಲಿಕರಿಗೂ ಕ್ರೀಡೆಗೂ ಯಾವ ಸಂಬಂಧವೂ ಇಲ್ಲ. ಹೆಂಡ ಮಾರುತ್ತಿದ್ದ ಮಲ್ಯ, ರಿಯಲ್ ಎಸ್ಟೇಟ್ ದಂಧೆಯವರು, ಕೈಗಾರಿಕೋದ್ಯಮಿಗಳು, ಸಿನಿಮಾಗಳಲ್ಲಿ ಕುಣಿಯುತ್ತಿದ್ದವರು, ಬೇನಾಮಿ ಹೆಸರುಗಳಲ್ಲಿ ರಾಜಕಾರಣಿಗಳು, ಅಷ್ಟೇ ಏಕೆ ಕಾಳಸಂತೆಯ ಖದೀಮರೂ ಕೂಡ ಐಪಿಎಲ್‌ಗೆ ಹಣ ಹೂಡಿದ್ದಾರೆ. (ವಿವರಗಳಿಗೆ ಬಾಕ್ಸ್ ನೋಡಿ) ಇದು ಮೊದಲನೇ ಹಂತದ ಹರಾಜು ಪ್ರಕ್ರಿಯೆ.

ನಗರದ ಹೆಸರುಗಳನ್ನು ಹರಾಜು ಹಾಕಿದ ನಂತರ ಆಟಗಾರರ ಹರಾಜು ಪ್ರಾರಂಭವಾಯಿತು. ಹೌದು, ನಮಗೆಲ್ಲಾ ಗೊತ್ತಿರುವಂತೆ ನಮ್ಮ ನೆಚ್ಚಿನ ಆಟಗಾರರೆಲ್ಲಾ ಸಾಲಾಗಿ ಹರಾಜಿಗೆ ನಿಂತರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯುಳ್ಳ ಕ್ರಿಕೆಟ್ ಪ್ರೇಮಿಗಳ ನೆಚ್ಚಿನ ಆಟಗಾರರನ್ನು

▶9


ತಿಮಿಂಗಿಲಗಳ ಕೈಯಲ್ಲಿ ಐಪಿಎಲ್


ಐಪಿಎಲ್‌ಗೆ ಬಂಡವಾಳ ಹೂಡಿದವರನ್ನು ಗಮನಿಸಿದರೆ ಇದರ ನಿಜಬಣ್ಣ ಅರ್ಥವಾಗುತ್ತದೆ.

* ಮುಂಬೈ ಇಂಡಿಯನ್ಸ್ ಮಾಲಿಕ ರಿಲಯನ್ಸ್ ಕಂಪನಿಯ ಮುಖೇಶ್ ಅಂಬಾನಿ.
* ಆರ್‌ಸಿಬಿಯ ಮಾಲಿಕ ಯುಬಿ ಗ್ರೂಪ್‌ನ ವಿಜಯ್ ಮಲ್ಯ.
* ಡೆಕ್ಕನ್ ಚಾರ್ಜರ್ಸ್‌ನ ಮಾಲಿಕ ಡೆಕ್ಕನ್ ಕ್ರಾನಿಕಲ್ ಗ್ರೂಪ್ ಟಿ ವೆಂಕಟರಾಮ ರೆಡ್ಡಿ.
* ಚೆನ್ನೈ ಸೂಪರ್ ಕಿಂಗ್ಸ್‌ಗೆ ಇಂಡಿಯಾ ಸಿಮೆಂಟ್ಸ್‌ನ ಮಾಲಿಕ ಹಾಗೂ ಹಾಲಿ ಬಿಸಿಸಿಐನ ಕಾರ್ಯದರ್ಶಿ ಶ್ರೀನಿವಾಸ್.
* ಡೆಲ್ಲಿ ಡೇರ್‌ಡೆವಿಲ್ಸ್‌ನ ಮಾಲಿಕ ರಿಯಲ್ ಎಸ್ಟೇಟ್ ಟೈಕೂನ್ ಹಾಗೂ ದೊಡ್ಡ ಬಿಲ್ಡರ್ ಜಿಎಮ್‌ಆರ್ ಗ್ರೂಪ್.
* ಕಿಂಗ್ಸ್ ಇಲೆವೆನ್ ಪಂಜಾಬ್‌ನಲ್ಲಿ ನೆಸ್ ವಾಡಿಯ, ಪ್ರೀತಿ ಜಿಂಟಾ, ಡಾಬರ್ ಮತ್ತಿತರರು.
* ಕೋಲ್ಕತಾ ನೈಟ್‌ರೈಡರ್ಸ್‌ನಲ್ಲಿ ಶಾರೂಖ್ ಖಾನ್, ರೆಡ್ ಚಿಲೀಸ್ ಎಂಟರ್‌ಟೈನ್‌ಮೆಂಟ್, ಜೂಹಿ ಚಾವ್ಲಾ ಮುಂತಾದವರು.
* ರಾಜಾಸ್ಥಾನ್ ರಾಯಲ್ಸ್‌ನಲ್ಲಿ ಲಚ್ಲನ್ ಮರ್ಡಾಕ್ (ಮಾಧ್ಯಮ ದೊರೆ ರೂಪರ್ಟ್ ಮರ್ಡಾಕ್‌ನ ಮಗ), ಎಮರ್ಜಿಂಗ್ ಮೀಡಿಯ, ಶಿಲ್ಪಾ ಶೆಟ್ಟಿ, ರಾಜ್ ಕುಂದ್ರಾ ಮತ್ತಿತರರು.



* ಪುಣೆ ವಾರಿಯರ್ಸ್‌ನಲ್ಲಿ ಸುಬ್ರತೋ ರಾಯ್ ಸಹರಾ ಗ್ರೂಪ್‌ನ ಮಾಲಿಕ.
* ಕೊಚ್ಚಿ ಟಸ್ಕರ್ಸ್ ಕೇರಳ – ಕೊಚ್ಚಿ ಕ್ರಿಕೆಟ್ ಪ್ರೈವೇಟ್ ಲಿಮಿಟೆಡ್.





ಒಟ್ಟಾರೆ ಐಪಿಎಲ್‌ನಲ್ಲಿ ಹೂಡಿದ ಹಣದಲ್ಲಿ ಸಾಕಷ್ಟು ಪ್ರಮಾಣದ ಕಪ್ಪುಹಣ ಹರಿಯುತ್ತಿದೆ ಎಂಬುದು ಹಲವಾರು ಬಾರಿ ಕೇಳಿಬಂದಿದೆ. ಅಲ್ಲದೆ ತೆರಿಗೆ ಕಳ್ಳರ ಸ್ವರ್ಗವಾದ ಮಾರಿಷಸ್ ಮೂಲಕವೂ ಹಲವಾರು ಕಂಪನಿಗಳು ಹಾಗು ರಾಜಕಾರಣಿಗಳು ಬೇನಾಮಿ ಹೆಸರಿನಲ್ಲಿ ಹಣ ಹೂಡಿದ್ದಾರೆ. ಜೊತೆಗೆ ಈ ದಂಧೆಗೆ ಭೂಗತ ಜಗತ್ತಿನ ನಂಟೂ ಅಂಟಿಕೊಂಡಿದೆ. ಶಶಿ ತರೂರ್ ಮತ್ತು ಲಲಿತ್ ಮೋದಿಗಳ ನಡುವಿನ ವಿವಾದದಲ್ಲಿ ಈ ಇಬ್ಬರಿಗೂ ಬೇರೆ ಬೇರೆ ಸಂದರ್ಭಗಳಲ್ಲಿ ಭೂಗತ ಲೋಕದಿಂದ ಜೀವ ಬೆದರಿಕೆಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ಲಲಿತ್ ಮೋದಿ ರಕ್ಷಣೆಯ ದೃಷ್ಟಿಯಿಂದ ವಿದೇಶಕ್ಕೆ ಹೋಗಿ ಕುಳಿತಿದ್ದ.

ಇಂದಿನ ನಮ್ಮ ಕ್ರಿಕೆಟ್ ಜಗತ್ತು ಎಂಥವರ ಕೈಯಲ್ಲಿ ಸಿಕ್ಕಿಬಿದ್ದಿದೆ ನೋಡಿ?





ಮದನ್‌ನಾಯಕ್ ತನ್ನ ಕುಟುಂಬದವರೊಂದಿಗೆ...



ಕಣ್ಣೀರಿಡುತ್ತಿರುವ ಮದನ್‌ನಾಯಕ್ ಕುಟುಂಬ...

ಅರಣ್ಯಾಧಿಕಾರಿಯನ್ನು ಬಡಿಬಡಿದೇ ಕೊಂದರು!

ಆ ಹಂತಕರ ತಂಡದಲ್ಲಿದ್ದನಾ ತಿಕೋಟಾ ಪಿಎಸ್‌ಐ ನಾಯಕ್?

ದಾಂಡೇಲಿ ವನ್ಯಜೀವಿ ವಿಭಾಗದ ಸಹಾಯಕ ...ರಣ್ಯ ಸಂರಕ್ಷಣಾಧಿಕಾರಿ ಮದನ ನಾಯಕ್‌ರನ್ನು ಮನುಷ್ಯ ...ಪದ ಮೃಗಗಳು ಬಡಿದು-ಬಡಿದೇ ಬರ್ಬರವಾಗಿ ...ಂದು ಹಾಕಿದ್ದಾರೆ. ಕೊಲೆಗಾರರು ಅಶಿಕ್ಷಿತ ಕಾಡು ...ಂದಿಯೇನಲ್ಲ; ನಾಗರಿಕ ಪ್ರಪಂಚದಲ್ಲಿ ಜವಾಬ್ದಾರಿ ಸ್ಥಾನ-...ಮಾನದಲ್ಲಿರುವ ಠಾಕೂ-ಠೀಕಿನ 'ಸುಶಿಕ್ಷಿತ'ರು ಮಾಡಿರುವ ಅಮಾನುಷ ಪಾತಕ ಪುರಾಣವೀಗ ಹಳ್ಳಿಯಿಂದ ...ಲ್ಲಿತನಕ ಮಾರ್ದನಿಸುತ್ತಿದೆ! ಖಾಕಿ ದರ್ಪ-ದೌಲತ್ತಿಲ್ಲದ ...ಪರೂಪದ ಅಧಿಕಾರಿಯಾಗಿದ್ದ ಮದನ್ ...ಯಕರನ್ನು ಆತನ ಕರ್ತವ್ಯ ಪ್ರಜ್ಞೆಯೇ ಸಾವಾಗಿ ...ಂಗಿಹಾಕಿರುವುದು ವಿಪರ್ಯಾಸ.

ಮದನ್ ನಾಯಕ್ ಮರ್ಡರ್ ತೀರಾ ...ಲ್ಲಕ ಕಾರಣಕ್ಕೆ ನಡೆದುಹೋಗಿದೆ. ಆತ ಖಾಕಿ ...ರ್ಪ-ದೌಲತ್ತು ಎಂದೂ ತೋರಿಸದ ಅಧಿಕಾರಿ ...ಯಾಗಿದ್ದರು. ಮನುಷ್ಯರನ್ನು ಮನುಷ್ಯರಂತೆ ...ಣುವ ಸರಳ-ಸಂಭಾವಿತನಾಗಿದ್ದರು. ಜಿಲ್ಲೆಯಲ್ಲಿ ...ವಳಿ ಮಾಡುತ್ತಿರುವ ಆತನದೇ 'ನಾಡವ' ...ತಿಯ ಅಧಿಕಾರಿಗಳ ಆರ್ಭಟದ ನಡುವೆ ...ನುಷ್ಯತ್ವದ ಅಪರೂಪದ ಅಧಿಕಾರಿಯಾಗಿ ...ದನ್ ಎದ್ದು ಕಾಣಿಸುತ್ತಿದ್ದರು. ಆತನಾಯಿತು-ಆತನ ...ಂಡದ ಬಾಟಲಿಯಾಯಿತು ಎಂಬಂತಿದ್ದ ...ನಿರುಪದ್ರವಿಯಾಗಿದ್ದ. ಹಾಗಂತ ಡ್ಯೂಟಿ ಕಾನ್‌ಶಿಯಸ್ ...ದೂ ಮರೆತವರಲ್ಲ. ಇಂಥ ಪಾಪದ ಅಧಿಕಾರಿ ...ನ್ಯಾಯವಾಗಿ ಪಾನಮತ್ತ ಲಂಬಾಣಿ ಪುಂಡರ ತಂಡಕ್ಕೆ ...ಹುತಿಯಾಗಿ ಹೋಗಿದ್ದಾರೆ.

ಅಂದು ರವಿವಾರ **(6.5.12)**ವಾದ್ದರಿಂದ ಹೆಂಡತಿ, ...ಕ್ಕಳೊಂದಿಗೆ ಎಸಿಎಫ್ ಮದನ್‌ನಾಯಕ್ ದಾಂಡೇಲಿ ...ರವಲಯದಲ್ಲಿರುವ ದಾಂಡೇಲಪ್ಪ ದೇವಸ್ಥಾನಕ್ಕೆ ...ಹೋಗಿದ್ದರು. ಅಲ್ಲೇ ಪಕ್ಕದಲ್ಲಿ ಕಾಳಿ ನದಿ ಹರಿಯುತ್ತದೆ. ...ಳಿದಂಡೆ ಮೇಲೆ ಶಿವರಾಮ ಪಾಟೀಲ ಎಂಬ ...ತರ್‌ನಾಕ್ ಆಸಾಮಿ ಅನಧಿಕೃತವಾಗಿ 'ಮೊಸಳೆ ಪಾರ್ಕ್' ...ಮಾಡಿಕೊಂಡಿದ್ದಾನೆ; ಒಂದಿಷ್ಟು ಹೋಮ್ ಸ್ಟೇ ಎಂಬ ...ಡಿಸಲು ಕಟ್ಟಿಕೊಂಡು ದಂಧೆ ನಡೆಸುತ್ತಿದ್ದಾನೆ. ಈ ...ಕ್ರೋಕೊಡೈಲ್ ಪಾರ್ಕ್‌ನ ಗುಡಿಸಲುಗಳಲ್ಲಿ ಬಾಗಲ ...ಕೋಟೆಯ ಸುಮಾರು ಹತ್ತು ಜನ ಗಂಡಸರು-ಹೆಂಗಸರ ...ಡ ನಶೆ ಪಾರ್ಟಿ ಮಾಡುತ್ತಿದ್ದರು.

ಸೂರ್ಯ ಮುಳುಗುವ ಮೊದಲೇ ಇವರೆಲ್ಲ ಕುಡಿದು ...ಟ್ ಆಗಿದ್ದರು. ಅಲ್ಲೇ ಮಾಂಸದೂಟ ಬೇಯಿಸಿ ...ಮುಕ್ಕುತ್ತಿದ್ದರು. ಇವರೆಲ್ಲ ದಾಂಡೇಲಿ ಮುನ್ಸಿಪಾಲಿಟಿಯಲ್ಲಿ ...ಕರನಾಗಿರುವ ಅರವಿಂದ ಚೌಹಾಣ್ ಮತ್ತು ಹತ್ತಿರದ ...ಗವತಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿರುವ ...ಲಜಾ ಚೌಹಾಣ್ ದಂಪತಿಗಳ ಹೊಸ ಮನೆ ಪ್ರವೇಶ ...ಮಾರಂಭಕ್ಕೆ ಬಂದವರು. ಇವರಿಗೆ ಅರವಿಂದ-ಶೈಲಜಾ ...ಂಡು-ತುಂಡಿನ ಪಾರ್ಟಿಯನ್ನು ಕಾಡು-ಕಾಳಿ ನದಿದಂಡೆ ...ಡುವೆಯಿದ್ದ ರೆಸಾರ್ಟ್‌ನಲ್ಲಿ ಏರ್ಪಡಿಸಿದ್ದರು. ...ಮೋಜು-ಮಸ್ತಿಯಲ್ಲಿದ್ದ ಈ ತಂಡಕ್ಕೆ ಮೈಮೇಲಿನ ಖಬರೇ ...ರಲಿಲ್ಲ. ಒಂದಿಷ್ಟು ಜನ ನದಿಯಲ್ಲಿನ ಮೊಸಳೆಗಳಿಗೆ ...ಮಾಂಸದೂಟ ಹಾಕುತ್ತಿದ್ದರು. ಹೀಗೆ ಮಾನವ ಸ್ನೇಹಿ ...ಮೊಸಳೆಗಳಿಗೆ ಮಾಂಸದ ರುಚಿ ...ತೋರಿಸುವುದು ನಿಷಿದ್ಧ! ಅಷ್ಟೇ ...ಲ್ಲ, ಅರಣ್ಯ ಇಲಾಖೆ ...ನಿಯಮದಂತೆ ಅಪರಾಧವೂ ...ಹೌದು.

ಮೊಸಳೆಗಳಿಗೆ ಮಾಂಸದ ...ತುಂಡುಗಳನ್ನು 'ಪಾರ್ಟಿ ...ರಾಕ್ಷಸಿ'ಗಳು ಎಸೆಯುತ್ತಿರು ...ದು ಎಸಿಎಫ್ ಮದನ್ ...ನಾಯಕ್ ಕಣ್ಣಿಗೆ ಬಿತ್ತು. ಆತ ...ಧ್ವನಿಯಲ್ಲಿ 'ಜಾಣ ಮೊಸಳೆ

ಪಾತಕಿಗಳನ್ನು ರಕ್ಷಿಸುವಂಥ ಯಾವ ಕೆಲಸವನ್ನೂ ದಾಂಡೇಲಿಯ ಡಿವೈಎಸ್‌ಪಿ ಫಾಲೆಮಾರಿಂದ ಹಿಡಿದು ಪಿಎಸ್‌ಐ ಪ್ರವೀಣ ನೀಲಮ್ಮನವರ್‌ತನಕ ಯಾರೂ ಒಂಚೂರೂ ಮಾಡಿಲ್ಲವೆಂದು ಬಡಬಡಿಸುತ್ತಿದ್ದಾರೆ. ಡಿವೈಎಸ್‌ಪಿ ಸಾರಾ ಫಾತಿಮಾ ಮೇಡಂ ಎಚ್ಚೆತ್ತುಕೊಂಡಿದ್ದರೂ ಸಾಕಿತ್ತು. ಒಂದು ನಿರಪರಾಧಿ ಕುಟುಂಬ ನಿಷ್ಕಾರಣವಾಗಿ ಜೀವನಪರ್ಯಂತ ಕಣ್ಣೀರಲ್ಲಿ ಕಳೆವಂಥ ಅನಾಹುತವೇ ಆಗುತ್ತಿರಲಿಲ್ಲ. ಈ ಎಸ್ಪಿ ಸಾಹೇಬ್ ತನ್ನ ಅಧೀನಾಧಿಕಾರಿಗಳ ತಾರೀಪು ಮಾಡುವುದಲ್ಲದೇ ತಿಕೋಟಾ ಪಿಎಸ್‌ಐ ಎಸ್.ಆರ್. ನಾಯಕನನ್ನೂ ರಕ್ಷಣೆ ಮಾಡುತ್ತಿರುವುದು ಅನೇಕ ಅನುಮಾನಗಳನ್ನು ಹುಟ್ಟುಹಾಕಿದೆ.



ಬಾಲಕೃಷ್ಣ   ಪ್ರವೀಣ್ ನೀಲಮ್ಮನವರ್   ಸಾರಾ ಫಾತಿಮಾ   ವಿದ್ಯಾಧರ್

ಗಳಿಗೆ ಹಾಕಬೇಡಿ.... ಅವು ಮಾಂಸದ ರುಚಿಗೆ ನದಿ ಬಿಟ್ಟು ಮೇಲೆ ಬಂದು ಮನುಷ್ಯರ ಮೇಲೆ ದಾಳಿ ಮಾಡುವ ಚಾಳಿ ಶುರುವಾಡುತ್ತವೆ......" ಎಂದು ತಿಳಿಹೇಳಿದರು. ಕಂಠಪೂರ್ತಿ ಕುಡಿದಿದ್ದ ಆ ಪುಂಡರ ತಂಡ ಯಾರ ಮಾತೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. "ನೀನ್ಯಾರಲೇ ನಮ್ಗೆ ಹೇಳಲಿಕ್ಕೆ..." ಎಂದು ಮದನನ ಮೈಮೇಲೇರಿ ಹೋದರು. ಆದರೂ ಮದನ್ ತಾಳ್ಮೆಗೆಡಲಿಲ್ಲ. "............. ನಾನು ವನ್ಯಜೀವಿ ವಿಭಾಗದ ಎಸಿಎಫ್.... ನಾನೇಕೆ ಹೇಳಿದೆ ಅಂಥ ಅರ್ಥಮಾಡ್ಕೊಳ್ಳಿ..... ಪ್ಲೀಸ್....." ಎಂದು ಅಧಿಕಾರಿ ಗತ್ತು ತೋರಿಸದೆ ವಿನಂತಿಸಿದರು.

ಈ 'ರಿಕ್ವೆಸ್ಟ್' ಆ ಲಂಬಾಣಿ ಗ್ಯಾಂಗಿನ ಈಗೋ ಕೆರಳಿಸಿತು. "ನೀನು ಎಸಿಎಫ್ ಆದ್ರೆ ನಮ್ಗೇನು?..... ನಮ್ಮಲ್ಲೂ ಪಿಎಸ್‌ಐ ಆದಾರು... ಇಂಜಿನಿಯರ್ ಆದಾರು... ಮಾಸ್ತರು ಅದಾರು....." ಎಂದಬ್ಬರಿಸಿದರು. ಆಗ ಎಸಿಎಫ್ ಮದನ್ ತಣ್ಣಗಾದರು. ಆದರೆ ಆತನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿರುವ ಮಗ ತನ್ನ ಕ್ಯಾಮರಾದಿಂದ ಮೊಸಳೆಗೆ ಮಾಂಸ ಹಾಕುತ್ತಿದ್ದವರ ಫೋಟೋ ಹೊಡೆಯುತ್ತಿದ್ದ. ಇದು ಆ ಗೂಂಡಾ ತಂಡದ ಪಿತ್ಥ ಕೆರಳಿಸಿತು. ಇದ್ದಕ್ಕಿದ್ದಂತೆಯೇ ಆ ಬಾಲಕನನ್ನು ಥಳಿಸಿದರು. ಆತನ ಬಾಯಿಗೆ ಮಣ್ಣು ತುಂಬಿ ಮೊಸಳೆಗೆಸೆಯಲು ಹವಣಿಸಿದರು. ಇದರಿಂದ ಮದನ ನಾಯಕ್ ಸಿಟ್ಟಾದರು. ಮಾತಿಗೆ ಮಾತು ಬೆಳೆಯಿತು. ಅಷ್ಟಕ್ಕೇ ಆ ಪಾನಮತ್ತ ಗ್ಯಾಂಗ್ ಬಡಿಗೆ-ದೊಣ್ಣೆ-ಕಲ್ಲುಗಳಿಂದ ಮಾರಣಾಂತಿಕವಾಗಿ ಎಸಿಎಫ್‌ಗೆ ಬಡಿದರು.. ಆತ ನೋವು ತಾಳದೇ ಒದ್ದಾಡಿದರೂ ಬಿಡದೇ ಆತನ ಮೈ- ಮುಖದ ಮೇಲೆಲ್ಲ ಹತ್ತಿ ಕುಣಿದರು. ಅಲ್ಲಿಗೆ ಹೆದರಿದ ಮದನ್ ಫ್ಯಾಮಿಲಿ ಓಡೋಡಿ ಬಂದು ಕಾರು ಹತ್ತಿ ಪರಾರಿಯಾಗಲು ನೋಡಿದರು. ಅಲ್ಲೂ ಬಂದ ತಂಡ ಮನಸೋ ಇಚ್ಛೆ ತಳಿಸಿತು.

ಇಷ್ಟಾದರೂ ಎಸಿಎಫ್ ನಾಯಕ್ ತನ್ನ ಹೆಂಡತಿ ಮಕ್ಕಳನ್ನು ಕಾರಲ್ಲಿ ಕೂಡ್ರಿಸಿಕೊಂಡು ಪೊಲೀಸ್ ಸ್ಟೇಷನ್ನಿಗೆ ಬಂದಿದ್ದರು. ಅವರ ಹಿಂದೆಯೇ ಹಲ್ಲೆಕೋರರ ತಂಡವೂ ಪೊಲೀಸ್ ಠಾಣೆಗೇ ಬಂದಿತು. ಅಲ್ಲಿ ಪಿಎಸ್‌ಐ ಆಗಿದ್ದವ ಪ್ರವೀಣ ನೀಲಮ್ಮನವರ್ ಎಂಬಾತ. ಆತ ಎಸಿಎಫ್ ಮೇಲೆ ಬರ್ಬರ ದಾಳಿ ಮಾಡಿದ ಪುಂಡರ ದಂಡಿನ ಜಾತಿಬಂಧು. ಅಷ್ಟೇ ಅಲ್ಲ, ಆ ರೌಡಿ ಪಡೆಯಲ್ಲಿದ್ದ ತಿಕೋಟಾ ಪಿಎಸ್‌ಐ ಎಸ್.ಆರ್. ನಾಯಕ್ ಎಂಬಾತನ ಬ್ಯಾಚ್‌ಮೇಟ್ ಬೇರೆ.


ತಿಕೋಟಾದಲ್ಲಿ ಪಿಎಸ್‌ಐ ಆಗಿರುವ ಎಸ್.ಆರ್. ನಾಯಕ ತನ್ನವರ ಬಚಾಯಿಸಲು ಖಾಕಿ ಬಂಧುತ್ವ-ಜಾತಿ ಬಾಂಧವ್ಯ ಎಲ್ಲ ಪ್ರಯೋಗಿಸಿದ. ದಾಂಡೇಲಿ ಎಸ್‌ಐ ಪ್ರವೀಣ ನೀಲಮ್ಮನವರ್ ಮತ್ತವನ ಪೊಲೀಸ್ ಪಡೆ ಎಸಿಎಫ್‌ಗೆ ಕನಿಷ್ಠ ಮರ್ಯಾದೆಯೂ ಕೊಡಲಿಲ್ಲ. ಆತನ ಕಂಪ್ಲೇಂಟೂ ಪಡೆಯದೆ ನಿಲ್ಲಿಸಿಯೇ ಇದ್ದ ಎಸಿಎಫ್ ಮದನ್ ನಾಯಕ್‌ಗೆ "ನೀನು ಹಲ್ಲೆ ಕೇಸು ಕೊಟ್ರೆ ಅವ್ರು ಜಾತಿ ನಿಂದನೆಯ ಅಟ್ರಾಸಿಟಿ ಪ್ರಕರಣ ದಾಖಲಿಸ್ತಾರೆ" ಎಂದು 'ರಾಜಿ'ಗೆ ದಾಂಡೇಲಿ ಪೊಲೀಸರು ಕುತಂತ್ರ ಮಾಡಿದರು. ಅದಾಗಲೇ ಅರಣ್ಯ ಇಲಾಖೆಯ ಅಧಿಕಾರಿಗಳು-ಎಸಿಎಫ್‌ರ ಪರಿಚಯದವರು ಠಾಣೆಯಲ್ಲಿ ಜಮಾಯಿಸಿದ್ದರು. ಈ ಚೌಕಾಸಿಯಲ್ಲೇ ಬರೋಬ್ಬರಿ ಐದು ತಾಸು ಕಳೆದುಹೋಯ್ತು.

ರಕ್ತ ಸುರಿಸುತ್ತಿದ್ದ ಮದನ್ ನಾಯಕ್ ಆ ಹೊತ್ತಿಗೆ ವಾಂತಿ ಮಾಡಿಕೊಳ್ಳತೊಡಗಿದರು. ನಿತ್ರಾಣರಾಗಿದ್ದ ಆತ ಪ್ರಜ್ಞೆಯೂ ಕಳೆದುಕೊಂಡು ಬಿದ್ದರು. ಆಗ ಬೆದರಿದ ಪೊಲೀಸರು ಆಸ್ಪತ್ರೆ ಸೇರಿಸಲು ತಡಬಡಾಯಿಸಿದರು. ಸಾವು-ಬದುಕಿನ ನಡುವೆ ಹೊಯ್ದಾಡುತ್ತಿದ್ದ ನಾಯಕರ ಕಾಲುಗಳು ಮುರಿದು ಹೋಗಿದ್ದವು. ಕಿಡ್ನಿಗೆ ಘಾಸಿಯಾಗಿತ್ತು. ಹಾರ್ಟ್ ಪೇಷಂಟ್ ಆಗಿದ್ದ ಆತನಿಗೆ ಹೃದಯಾಘಾತವೂ ಆ ವೇಳೆಗೆ ಆಗಿಹೋಗಿತ್ತು. ಎಸಿಎಫ್ ನಾಯಕರನ್ನು ಧಾರವಾಡದ ಎಸ್‌ಡಿಎಂ ಆಸ್ಪತ್ರೆಗೆ ಸೇರಿಸಲಾಯ್ತು. ಮೂರು ದಿನ ಕೋಮಾದಲ್ಲಿದ್ದ ಆತ ಅಲ್ಲಿ ನಿಧನರಾದರು! ಅಲ್ಲಿಗೆ ಅನ್ಯಾಯವಾಗಿ ಬಾಗಲಕೋಟೆಯ ರೌಡಿ ಪಡೆಯ ಹಿಂಸೋನ್ಮಾದಕ್ಕೆ ನಿಷ್ಪಾಪಿ ಎಸಿಎಫ್ ಮದನ್ ನಾಯಕ್ ಬಲಿಯಾದರು; ಆತನ ಮೇಲೆ ಅವಲಂಬಿತವಾಗಿದ್ದ ಸಣ್ಣ-ಸಣ್ಣ ಮಕ್ಕಳ ಕುಟುಂಬ ಅನಾಥವಾಗಿ ಹೋಯ್ತು.

ಈ ತುತ್ತೆಗೆ ತುಂತಕ ಪಡೆ ಯಷ್ಟೇ ಹೊಣೆ ದಾಂಡೇಲಿಯ ಪಾಪಿ ಪೊಲೀಸರು! ಪೊಲೀಸರು ಆರಂಭದಲ್ಲೇ ನಿಷ್ಪಕ್ಷಪಾತವಾಗಿ ವರ್ತಿಸಿದ್ದರೆ ಅಥವಾ ಎಸಿಎಫ್ ನಾಯಕರನ್ನು ಆಸ್ಪತ್ರೆಗೆ ಸೇರಿಸುವ ಕೆಲಸ ಮಾಡಿದ್ದರೆ ಆತ ಬದುಕಿರು

▶▶▶7

ಕಾಗೇರಿ ಕಾಣೆ



ಕರ್ತವ್ಯನಿಷ್ಠ ಅರಣ್ಯಾಧಿಕಾರಿ ಮದನ್ ನಾಯಕ್ ಮರ್ಡರ್ ನಡೆದು ಒಂದು ವಾರವಾದರೂ ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿಯ ಪತ್ತೆಯೇ ಇಲ್ಲ! ಸಣ್ಣ-ಪುಟ್ಟ ಜನಪ್ರತಿನಿಧಿಗಳಿಂದ ಶಾಸಕರು, ಗೂಟದ ಕಾರಿನ ಧೀರರು, ಪೊಲೀಸ್ ಅಧಿಕಾರಿಗಳು, ಮಾನವ ಹಕ್ಕು ಆಯೋಗದ ಅಧ್ಯಕ್ಷರು ಸಾಲಾಗಿ ಮದನ್ ನಾಯಕ್ ಮನೆಗೆ ಹೋಗಿ "ಸಾಂತ್ವನ" ಹೇಳುತ್ತಿದ್ದಾರೆ. ಆದರೆ ಜಿಲ್ಲಾಡಳಿತದ ಹೊಣೆ ಹೊತ್ತಿರುವ ಮಂತ್ರಿ ಕಾಗೇರಿ ಕಾಣೆ!!

ಎಸಿಎಫ್ ನಾಯಕ್‌ರ ಅಮಾನುಷ ಹತ್ಯೆ ಖಂಡಿಸಿ ಜಿಲ್ಲೆಯಾದ್ಯಂತ ಪ್ರತಿಭಟನೆ ಸರಣಿಯಾಗಿ ನಡೆಯುತ್ತಿದೆ. ಪೊಲೀಸರು ಆರಂಭದಿಂದಲೂ ಆರೋಪಿ ಪರ ಕರಾಮತ್ತು ಮಾಡುತ್ತಿದ್ದಾರೆಂದು ಜನ ತಿರುಗಿಬಿದ್ದಿದ್ದಾರೆ. ಪ್ರಕರಣ ರಾಜ್ಯದಲ್ಲಿ ಸಂಚಲನ ಮೂಡಿಸಿದೆ. ಕೇಂದ್ರ ಪರಿಸರ ಮಂತ್ರಿಯೇ ಖುದ್ದು ಈ ಹತ್ಯೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಆದರೆ ಜಿಲ್ಲಾ ಮಂತ್ರಿ ಕಾಗೇರಿ ತನಗೇನೂ ಸಂಬಂಧವಿಲ್ಲ ಎಂಬಂತೆ ಹಾಯಾಗಿ ದೋಣಿ ವಿಹಾರ ಮಾಡುತ್ತ ಮೋಜು-ಮಸ್ತಿಯಲ್ಲಿದ್ದಾರೆ.

ಜಿಲ್ಲೆ ಹೊತ್ತಿ ಉರಿದಾಗೆಲ್ಲ ಈ ಕಾಗೇರಿ ಕೇರ್ ಮಾಡದೆ 'ಪಿಟೀಲು' ಬಾರಿಸುತ್ತ ಕಾಲಹರಣ ಮಾಡಿದ್ದೇ ಹೆಚ್ಚು. ಜಾತಿರಾಜಕಾರಣ ಮಾಡಿದ್ದು ಬಿಟ್ಟರೆ ಈತ ಮಂತ್ರಿಯಾಗಿ ಜಿಲ್ಲೆಗೆ ಬಿಲ್ಲೆ ಪ್ರಯೋಜನ ಮಾಡಿಲ್ಲ. ಎಸಿಎಫ್ ಮದನ್ ನಾಯಕ್ ಕಗ್ಗೊಲೆ ನಂತರದ ಘಟನಾವಳಿಗಳನ್ನೇ ತೆಗೆದುಕೊಳ್ಳಿ. ಸಾಕ್ಷಾತ್ ಸಿಎಂ ಸಾಹೇಬರು ಕಾಳಜಿ ವಹಿಸಿ ಎಸಿಎಫ್ ಹತ್ಯೆ ಪ್ರಕರಣವನ್ನು ಸಿಐಡಿ ತನಿಖೆ ವಹಿಸಿದ್ದಾರೆ. ಆದರೆ ಕಾಗೇರಿಗೆ ಅದರ ಖಬರೇ ಇಲ್ಲ. ಎಸಿಎಫ್ ಹತ್ಯೆ ಪ್ರಕರಣವನ್ನು ಪೊಲೀಸರು ತಾತ್ಸಾರದಿಂದಲೇ ಪರಿಗಣಿಸಿದ್ದರು. ಇದು ಜಿಲ್ಲೆಯ ಜನರನ್ನು ಕೆರಳಿಸಿತ್ತು. ಎಸಿಎಫ್ ನಾಯಕ್ ಶವ ಇಟ್ಟುಕೊಂಡು ನಿಷ್ಪಕ್ಷಪಾತ ತನಿಖೆಗೆ ಜನ ಒತ್ತಾಯಿಸಿದರು. ಶಾಂತಿಯುತವಾಗಿ ಪ್ರತಿಭಟಿಸಿದವರ ಮೇಲೇ ಪೊಲೀಸರು ಕೇಸು ಜಡಿದರು.

ಪೊಲೀಸರಿಗೆ ಧಿಕ್ಕಾರ ಕೂಗಿದ್ದಕ್ಕಾಗಿ ಬರೋಬ್ಬರಿ **36** ಮಂದಿ ಮೇಲೆ ಕೇಸು ಹಾಕಲಾಗಿದೆ. ಈ ಗುಂಪಿನಲ್ಲಿ ಹಾಲಿ ಎಮ್ಮೆಲ್ಸಿ ಎಸ್.ಎಲ್. ಘೋಟನೇಕರ್, ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆ ಮತ್ತಿತರ ಮುಖಂಡರೂ ಇದ್ದರು. ಇವರ ಮೇಲೆ ಕೇಸು ಹಾಕದ ಪೊಲೀಸರು ತಮ್ಮ ತಪ್ಪು ಮುಚ್ಚಿಕೊಳ್ಳಲು ಕೇಸ್ ಅಸ್ತ್ರ ಬಳಸುತ್ತಿದ್ದಾರೆ. ಜನ ರೋಸಿ ಹೋಗಿದ್ದಾರೆ. ಜಿಲ್ಲಾ ಮಂತ್ರಿ ಕಾಗೇರಿ ಬೋಟಲ್ಲಿ ತೇಲುತ್ತ ತಣ್ಣಗಿದ್ದಾರೆ!



ಆರೋಪಿಗಳಾದ ಪ್ರಶಾಂತ್ ರಾಠೋಡ್, ಸುರೇಶ್ ನಾಯಕ್, ಆನಂದ್ ನಾಯಕ್, ಅರವಿಂದ್ ಚೌಹಾಣ್, ಶೈಲಜಾ ಚೌಹಾಣ್, ದಾನಾಬಾಯಿ ನಾಯಕ್



ಇನ್ನೊಂದು ಡಿನೋಟಿಫಿಕೇಷನ್ ಹಗರಣ

ಸೋಮಣ್ಣನ ಸ್ವಾರ್ಥಕ್ಕೆ ಯಡ್ಡಿ ಬಲಿ!

ಒಂದೆಡೆ ಸಿಬಿಐ ತನಿಖೆ, ಮತ್ತೊಂದೆಡೆ ರಾಚೇನಹಳ್ಳಿ ಡಿನೋಟಿಫಿಕೇಷನ್ ಹಗರಣದ ಕೇಸು, ಇಷ್ಟು ಸಾಲದೆಂಬಂತೆ ಈಗ ನಾಗದೇನಹಳ್ಳಿಯ ಡಿನೋಟಿಫಿಕೇಷನ್ ಹಗರಣ ದಾರೀಲಿ ಹೋಗೋರು ಒಂದು ಕಲ್ಲು ತಗೊಂಡು ಹೊಡೆದರೆ ಒಂದು ರೀತಿ, ಆದರೆ ಜೊತೆಲಿದ್ದವರೆ ಕಲ್ಲುಗುಂಡನ್ನು ಕಾಲಮೇಲೆ ಎತ್ತಿ ಹಾಕಿದರೆ ಅದೊಂದು ರೀತಿಯಾಗಿರುತ್ತದೆ. ನಾಗದೇನಹಳ್ಳಿ ಹಗರಣದಲ್ಲಿ ಈಗ ಸಿಕ್ಕಿಹಾಕಿಕೊಂಡಿರುವ ಯಡ್ಡಿಯ ಕಾಲಮೇಲೆ ಸೈಜು ಕಲ್ಲನ್ನು ಎತ್ತಿ ಹಾಕಿರುವುದು ಬೇರೆ ಯಾರೂ ಅಲ್ಲ. ಅದು ಯಡ್ಡಿಯ ಪರಮಾಪ್ತನಂತೆ ಪೋಜು ಕೊಡುತ್ತಿರುವ ಸೋಮಣ್ಣ.

'ದುಶ್ಮನ್ ಕಹಾ ಹೈ?' ಅಂದರೆ 'ಬಗಲ್ ಮೆ ಹೈ' ಎನ್ನುವಂತೆ ಯಡ್ಡಿಯ ಪಾಲಿನ ಹಿತಶತ್ರುವಾಗಿ ವಸತಿ ಸಚಿವ ವಿ. ಸೋಮಣ್ಣನೇ ಇದ್ದಾನೆ.

ಈ ಸೋಮಣ್ಣ-ಯಡ್ಡಿ ವಿರುದ್ಧ ಹೊಸದೊಂದು ಡಿನೋಟಿಫಿಕೇಶನ್ ಕೇಸೊಂದು ಈಗತಾನೆ ದಾಖಲಾಗಿದೆ. ಬೆಂಗಳೂರಿನ ಜ್ಞಾನಭಾರತಿ ಲೇಔಟ್‌ಗೆಂದು ಬಿಡಿಎ ವಶಪಡಿಸಿಕೊಂಡಿದ್ದ ಜಮೀನುಗಳ ಪೈಕಿ 30 ಗುಂಟೆಯಷ್ಟು ಅಂದರೆ ಮುಕ್ಕಾಲೆಕರೆ ಭೂಮಿಯನ್ನು ಯಡಿಯೂರಪ್ಪ ತಾನು ಮುಖ್ಯಮಂತ್ರಿಯಾಗಿದ್ದಾಗ ಡಿನೋಟಿಫೈ ಮಾಡಿರುವುದೇ ಈ ಹೊಸ ಕೇಸಿನ ಸಾರಾಂಶ.

ಈ ಡಿನೋಟಿಫಿಕೇಷನ್ನಿನ ಲಾಭ ಸಂಪೂರ್ಣವಾಗಿ ಸೋಮಣ್ಣ ಮತ್ತಾತನ ಮಗ ನವೀನನಿಗೆ ಆಗಿದೆ. ಅಂದಾಜು ಇಪ್ಪತ್ತೈದು ಕೋಟಿ ರೂಪಾಯಿ ಮಾರುಕಟ್ಟೆ ಬೆಲೆ ಇರುವ ಈ ಆಸ್ತಿಯನ್ನು ಸೋಮಣ್ಣನ ಕುಟುಂಬಕ್ಕೆ ಕೊಡಿಸಲು ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಿರುವ ಯಡ್ಡಿ ಈಗ ಪುನಃ ನ್ಯಾಯಾಲಯದೆದುರು ಕೈಕಟ್ಟಿ ನಿಲ್ಲಬೇಕಾಗಿ ಬಂದಿದೆ.

ಇದೆಂಥಾ ವಿಪರ್ಯಾಸ ನೋಡಿ. ಈ ಯಡ್ಡಿ 'ನನಗೆ ಅನಂತಕುಮಾರ್ ಶತ್ರು, ಈಶ್ವರಪ್ಪ ಸಿಎಂ ಸದಾನಂದ ಗೌಡ ನನ್ನ ತುಳೀತಿದಾರೆ' ಎಂದು ದಿನಬೆಳಗಾದರೆ ದೂರು ಹೇಳುತ್ತಿದ್ದಾರೆ. ಆಗೆಲ್ಲಾ ಯಡ್ಡಿ ಪಕ್ಕದಲ್ಲೇ ಆಪ್ತನಂತೆ ಸೋಮಣ್ಣ ಇದ್ದೇ ಇರುತ್ತಾನೆ. ಈಗ ನೋಡಿ, ಅದೇ ಸೋಮಣ್ಣನ ಆಸ್ತಿ ದಾಹಕ್ಕೆ ಯಡ್ಡಿ ಮೇಲೆ ಹೊಸ ಕೇಸು ಬಿದ್ದಿದೆ.

ಯುವ ವಕೀಲ ಹೆಚ್. ಯೋಗೇಂದ್ರ ಎಂಬುವರು ಈಗ ಈ ಡಿನೋಟಿಫಿಕೇಷನ್ ಹಗರಣದ ಸಕಲ ದಾಖಲೆಗಳನ್ನೂ ಪತ್ತೆ ಹಚ್ಚಿ ಸೋಮಣ್ಣ ಯಡ್ಡಿ ಸೋಮಣ್ಣನ ಪತ್ನಿ ಶೈಲಜಾ ಹಾಗು ಮಗ ಬಿ.ಎಸ್. ನವೀನನ ಮೇಲೆ ವಂಚನೆ, ಅಧಿಕಾರ ದುರ್ಬಳಕೆಯ ಆರೋಪ ಹೊರಿಸಿ ಕೇಸ್ ಹಾಕಿದ್ದಾರೆ.

ನಾಗದೇನಹಳ್ಳೀಲಿ ಭೂಕಬಳಿಕೆ

ಬೆಂಗಳೂರು ವಿಶ್ವವಿದ್ಯಾಲಯದ ಹಿಂದೆ ಜ್ಞಾನಭಾರತಿ ಎಂಬ ಬಡಾವಣೆ ನಿರ್ಮಿಸಲು ಬಿಡಿಎ 1989 ರಲ್ಲೇ ಭೂಸ್ವಾಧೀನದ ಬಗ್ಗೆ ಅಧಿಸೂಚನೆ ಹೊರಡಿಸಿತ್ತು. ಈ ಬಡಾವಣೆಗಾಗಿ ಭೂಸ್ವಾಧೀನವಾಗಲಿದ್ದ ಜಮೀನುಗಳ ಪೈಕಿ ದೇವೇಗೌಡ ಎಂಬ ರೈತನಿಗೆ ಸೇರಿದ್ದ ನಾಗದೇನಹಳ್ಳಿಯ ಸರ್ವೆ ನಂಬರ್ 77 ರಲ್ಲಿನ 2 ಎಕರೆ ಜಮೀನೂ ಸಹ ಸೇರಿತ್ತು.

ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿಯ ನಾಗದೇನಹಳ್ಳಿಯಲ್ಲಿರುವ ಈ ಭೂಮಿಯ ಮಾಲಿಕ ದೇವೇಗೌಡ ಸತ್ತ ನಂತರ ಈ ಆಸ್ತಿಯು ಆತನ ಮಕ್ಕಳಾದ ಹನುಮಯ್ಯ, ಲಿಂಗಯ್ಯ ಹಾಗೂ ರಾಮಯ್ಯ ಎಂಬುವರ ನಡುವೆ ಹಂಚಿಕೆಯಾಗಿತ್ತು. ಈ ನಡುವೆ ಸದರಿ ಜಮೀನನ್ನು ಬಿಡಿಎ ಪೂರ್ತಿಯಾಗಿ ಸ್ವಾಧೀನಪಡಿಸಿಕೊಂಡು ಜಮೀನಿಗೆ ಪರಿಹಾರವಾಗಿ ಸುಮಾರು ಐದೂವರೆ ಲಕ್ಷ ರೂಪಾಯಿಗಳನ್ನು ಭೂಮಾಲಿಕರಿಗೆ ನೀಡುವ ಬಗ್ಗೆ 1997ರಲ್ಲಿ ಕ್ರಮ ಜರುಗಿಸಿತ್ತು.

ಈ ನಡುವೆ ಸಚಿವ ಸೋಮಣ್ಣನ ಕಾಕದೃಷ್ಟಿ ಈ ಜಮೀನಿನ ಮೇಲೆ ಬಿತ್ತು. ಬಿಡಿಎ ವತಿಯಿಂದ ಭೂಸ್ವಾಧೀನದ ಪ್ರಕ್ರಿಯೆ ನಡೆಯುತ್ತಿದ್ದಾಗಲೇ ಭೂಮಾಲಿಕರೊಂದಿಗೆ ಒಂದು ಡೀಲ್ ಕುದುರಿಸಿಕೊಂಡ ಸೋಮಣ್ಣ ತನ್ನ ವಿಎಸ್‌ಎಸ್ ಎಜುಕೇಷನ್ ಸಂಸ್ಥೆಯ ಬೋರ್ಡ್ ತಂದು ಅಲ್ಲಿ ನೆಟ್ಟ. ಬಿಡಿಎ ಜೊತೆ ತಾನು ವ್ಯವಹರಿಸಿಕೊಂಡು ಸದರಿ ಜಮೀನನ್ನು ಭೂಸ್ವಾಧೀನದಿಂದ ಹೇಗೋ ಬಿಡಿಸಿಕೊಳ್ಳಬಹುದೆಂಬ ಲೆಕ್ಕಾಚಾರ ಸೋಮಣ್ಣನಿಗಿತ್ತು.

ಹಾಗಾಗಿ ಜಮೀನಿನ ಮಾಲಿಕರಿಗೆ ಬಿಡಿಎ ನೀಡಲು ಹೊರಟಿದ್ದ ಮೊತ್ತಕ್ಕಿಂತ ನಾಲ್ಕರಷ್ಟನ್ನು ಕೊಡುವ ಆಮಿಷ ತೋರಿಸಿದ. ಅದರಂತೆ ಸೋಮಣ್ಣನ ಹೆಂಡತಿ ಶೈಲಜಾ ಹೆಸರಿನಲ್ಲಿ 20 ಲಕ್ಷ ರೂಪಾಯಿಗಳನ್ನು ಅಡ್ವಾನ್ಸ್ ಎಂದು ಕೊಡಲಾಯಿತು.

ವಂಚನೆ ಶುರುವಾಗಿದ್ದೇ ಇಲ್ಲಿ. ಯಾಕೆಂದರೆ ಅಷ್ಟರಲ್ಲಿ ಈ ಭೂಮಿಯು ಬಿಡಿಎ ಕೈವಶವಾಗಿ ಲೇಔಟ್ ನಿರ್ಮಾಣಕ್ಕಾಗಿ ಬಿಡಿಎನ ಇಂಜಿನಿಯರಿಂಗ್ ವಿಭಾಗದವರಿಗೆ ಹಸ್ತಾಂತರವೂ ಆಗಿ ಹೋಗಿತ್ತು. ಇದರರ್ಥ ದೇವೇಗೌಡರ ಕುಟುಂಬದವರು ಆ ಜಮೀನಿನ ಮಾಲಿಕರಾಗಿಯೇ ಇರದಿದ್ದಾಗಲೂ ಸೋಮಣ್ಣ ಅವರೊಂದಿಗೇ ಖರೀದಿ ಒಪ್ಪಂದ ಮಾಡಿಕೊಂಡು 20 ಲಕ್ಷ ರೂ ಅಡ್ವಾನ್ಸ್ ಕೊಟ್ಟಿದ್ದರು!

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಚಾರವೂ ಇದೆ.

ಇದೇ ನಾಗದೇನಹಳ್ಳಿಯ ಸರ್ವೆ ನಂಬರ್ 77 ರಲ್ಲಿನ 22 ಗುಂಟೆಯಷ್ಟು ಜಮೀನಿನ ಡಿನೋಟಿಫಿಕೇಷನ್ ಅನ್ನು ಸೋಮಣ್ಣ ಆಗ ಮುಖ್ಯಮಂತ್ರಿಯಾಗಿದ್ದ ಯಡ್ಡಿಯ ತಲೆಕೆಡಿಸಿ ಮಾಡಿಸಿಕೊಂಡಿದ್ದ. ಜನಾಗ್ರಹ ಸಂಸ್ಥೆಯ ರವಿಕೃಷ್ಣರೆಡ್ಡಿ ಈ ಸಂಬಂಧ ಲೋಕಾಯುಕ್ತರಿಗೆ ಒಂದು ದೂರು ನೀಡಿದ್ದು ಅದೀಗ ವಿಚಾರಣೆಯ ಹಂತದಲ್ಲಿದೆ.

ಈಗ ನಾವು ಪ್ರಸ್ತಾಪಿಸಿರುವ ಡಿನೋಟಿಫಿಕೇಷನ್ ಡೀಲ್ 30 ಗುಂಟೆಗೆ ಸಂಬಂಧಿಸಿದ್ದು. ಈ ಭೂಮಿ ಸಹ ಅದೇ ನಾಗದೇನಹಳ್ಳಿಯ ಸರ್ವೆ ನಂ 77 ರಲ್ಲಿದೆ. ಬಹಳ ಮುಖ್ಯವಾಗಿ ಅದಾಗಲೇ ಸೋಮಣ್ಣನ ಕುಟುಂಬದ ಕೈವಶವಾಗಿದ್ದ ಹಾಗೂ ಆತನ ವಿಎಸ್‌ಎಸ್ ಶಿಕ್ಷಣ ಸಂಸ್ಥೆಯ ಪಕ್ಕದಲ್ಲೇ ಈ 30 ಗುಂಟೆ ಭೂಮಿ ಇತ್ತು.

ಹಾಗಾಗಿ ಸೋಮಣ್ಣ ಈ ಎಲ್ಲಾ ಜಮೀನುಗಳಿಗೂ ಒಟ್ಟಿಗೆ ಬೇಲಿ ಸುತ್ತಿ ನುಂಗಿ ಹಾಕಲು ಒಂದು ಪ್ಲಾನ್ ಮಾಡಿದ್ದ.

ಅರ್ಜಿ ಕೊಟ್ಟಳು ಲಿಂಗಮ್ಮ

ಒಂದು ಕಡೆ ಸೋಮಣ್ಣನ ಹೆಂಡತಿ ಶೈಲಜಾರಿಂದ ಅಡ್ವಾನ್ಸಾಗಿ ಲಕ್ಷಾಂತರ ರೂಪಾಯಿ ಪಡೆದಿದ್ದ ದೇವೇಗೌಡನ ಪತ್ನಿ ಲಿಂಗಮ್ಮ ದಿನಾಂಕ 10-5-2010 ರಂದು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನಿಗೆ ಒಂದು ಅರ್ಜಿ ನೀಡಿ ಸದರಿ 30 ಗುಂಟೆ ಜಮೀನನ್ನು ಡಿನೋಟಿಫೈ ಮಾಡಿಕೊಡುವಂತೆ ಕೋರಿದಳು.

> ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ನಾಗದೇವನಹಳ್ಳಿ ಗ್ರಾಮದ ಸ.ನಂ. 77 ರಲ್ಲಿನ 30 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯಿಂದ ಕೈ ಬಿಡುವ ಬಗ್ಗೆ.
>
> ಯುಡಿಡಿ/474/ಬೆಂಭೂಸ್ವಾ/2010
>
> ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ನಾಗದೇವನಹಳ್ಳಿ ಗ್ರಾಮದ ಸರ್ವೆನಂ: 77 ರಲ್ಲಿನ 0.30 ಗುಂಟೆ, ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲು ಅರ್ಜಿದಾರರು ಮನವಿ ಮಾಡಿರುತ್ತಾರೆ.
>
> ಪ್ರಸ್ತುತ ಜಮೀನಿನ ಸುತ್ತಮುತ್ತಲೂ ಖಾಸಗಿ ಗೃಹ ನಿರ್ಮಾಣ ಸಂಘದವರು ಪ್ರಾಧಿಕಾರದಿಂದ ಸ್ವಾಧೀನವಾಗಿರುವ ಜಮೀನುಗಳನ್ನು ಹಿಂಪಡೆದುಕೊಂಡು ನಿವೇಶವನ್ನಾಗಿ ಪರಿವರ್ತಿಸಿ ಮಾರಾಟ ಮಾಡಿದ್ದು, ಈ ಜಮೀನು ಬಿಟ್ಟರೆ ಬಿಡಿಎನವರಿಗೆ ಬಡಾವಣೆ ನಿರ್ಮಾಣ ಮಾಡಲು ಬೇರೆ ಜಮೀನುಗಳು ಇರುವುದಿಲ್ಲ. ಆದ್ದರಿಂದ ಬಿಡಿಎ ನವರಿಗೆ ಈ ಪ್ರದೇಶದಲ್ಲಿ ಬಡಾವಣೆ ಮಾಡಲು ಅವಕಾಶವಿರುವುದಿಲ್ಲ. ಅರ್ಜಿದಾರರು ವಿಧವೆಯಾಗಿದ್ದು, ತಮಗೆ 5 ಜನ ಮಕ್ಕಳಿದ್ದು, ಈ ಜಮೀನು ಕುಟುಂಬಕ್ಕೆ ಆಧಾರವಾಗಿದೆ ಎಂದು ವಿನಂತಿಸಿರುವುದರಿಂದ ಮಾನವೀಯ ದೃಷ್ಟಿಯಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಅರ್ಜಿದಾರರ ಮನವಿಯಂತೆ 0.30 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆದಿಂದ ಕೈಬಿಡಲು ಆದೇಶಿಸಿದೆ.
>
> (ಬಿ.ಎಸ್. ಯಡಿಯೂರಪ್ಪ)
> ಮುಖ್ಯಮಂತ್ರಿ
>
> ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
> ನಗರಾಭಿವೃದ್ಧಿ ಇಲಾಖೆ.

ಈ ಯಡಿಯೂರಪ್ಪ ಶತದಡ್ಡನಂತೆ 'ಕೂಡಲೇ ಕಡತ ಮಂಡಿಸಲು ಆದೇಶಿಸಿದೆ' ಎಂದು ಅರ್ಜಿಯ ಮೇಲೆ ಶರಾ ಬರೆದುಬಿಟ್ಟರು.

ಹಾಗೆ ಆದೇಶ ನೀಡುವ ಮೂಲಕ ತಾನೇನು ತಪ್ಪು ಮಾಡುತ್ತಿದ್ದೇನೆಂದು ಅವತ್ತು ಯಡ್ಡಿಗೆ ಗೊತ್ತಾಗಲಿಲ್ಲವೆಂದು ಕಾಣುತ್ತದೆ. ಮುಂದಿನ ದಿನಗಳಲ್ಲಿ ಇದೇ ಅರ್ಜಿ ತನ್ನ ಪಾಲಿಗೆ ಕಷ್ಟ ತಂದೊಡ್ಡುವ ಬಗ್ಗೆಯೂ ಯಡ್ಡಿಗೆ ಅರಿವಾಗಲಿಲ್ಲ.

ಯಾವಾಗ ಯಡ್ಡಿಯ ಆದೇಶ ಬಂತೊ ಆಗ ಸಿಎಂ ಕಚೇರಿಯಲ್ಲಿದ್ದ ಜಂಟಿ ಕಾರ್ಯದರ್ಶಿ ನಂದಕುಮಾರ್ 21-5-2010 ರಂದು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗೊಂದು ಪತ್ರ ಬರೆದು ಕಡತ ಸಲ್ಲಿಸುವಂತೆ ಸೂಚಿಸಿದರು. ಅಲ್ಲಿಂದ ಅದು ಬಿಡಿಎಗೆ ಹೋಯಿತು.

2010ರ ಜುಲೈ 27 ರಂದು ಲಿಂಗಮ್ಮನ ಅರ್ಜಿ ಹಾಗೂ ಯಡ್ಡಿಯ ಆದೇಶದ ಬಗ್ಗೆ ಪ್ರತಿಕ್ರಿಯೆ ನೀಡಿದ ಬಿಡಿಎ ಒಂದು ಖಚಿತ ಅಭಿಪ್ರಾಯ ನೀಡಿತು.

ಅದರಲ್ಲಿ, ಸದರಿ ಸರ್ವೆ ನಂ 77 ರಲ್ಲಿನ 30 ಗುಂಟೆ ಜಮೀನು ಈಗಾಗಲೇ ಬಿಡಿಎಯಿಂದ ಸ್ವಾಧೀನಕ್ಕೆ ಒಳಗಾಗಿದ್ದು ಬಡಾವಣೆ ನಿರ್ಮಾಣಕ್ಕೆಂದು ಇಂಜಿನಿಯರಿಂಗ್ ವಿಭಾಗದ ವಶದಲ್ಲಿದೆ ಎಂದು ಬಿಡಿಎ ಸ್ಪಷ್ಟವಾಗಿ ಹೇಳಿತು. ಅಷ್ಟೇ ಅಲ್ಲದೇ ಅದೇ ಸರ್ವೆ ನಂ 77 ರಲ್ಲಿ 22 ಗುಂಟೆ ಜಮೀನನ್ನು ಈಗಾಗಲೇ ಡಿನೋಟಿಫೈ ಮಾಡಿರುವ ಬಗ್ಗೆಯೂ ಮಾಹಿತಿ ನೀಡಿತು.

ಬಹಳ ಮುಖ್ಯವಾಗಿ ಒಮ್ಮೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಂತಹ ಭೂಮಿ ಬಿಡಿಎಗೆ ಸೇರಿದ ಆಸ್ತಿಯಾಗುತ್ತದೆ. ಹಾಗಾಗಿ 'ಡಿನೋಟಿಫೈ ಮಾಡಲು ಕಾನೂನಿನ ಅಡಚಣೆ ಇದೆ' ಎಂಬುದಾಗಿಯೂ ಸಿಎಂಗೆ ತಿಳಿಸಲಾಗಿತ್ತು.

ಆದರೆ ನೀರಿಗಿಳಿದವರಿಗೆ ಚಳಿಯೇನು, ಮಳೆಯೇನು ಎನ್ನುವಂತೆ ಯಡ್ಡಿ ಬಿಡಿಎ ಅಭಿಪ್ರಾಯವನ್ನು ನಿರ್ಲಕ್ಷಿಸಿಬಿಟ್ಟರು. ಕಾನೂನಿನ ಪರಿಣಾಮಗಳನ್ನು ಲೆಕ್ಕಿಸದೆ 2010ರ ಆಗಸ್ಟ್ 5ನೇ ತಾರೀಖು 30 ಗುಂಟೆ ಭೂಮಿಯನ್ನು ಡಿನೋಟಿಫೈ ಮಾಡುವಂತೆ ಆದೇಶ ಕೊಟ್ಟೇಬಿಟ್ಟರು.

ಇದು ಯಡ್ಡಿ ಮಾಡಿದ ಅತೀ ದೊಡ್ಡ ತಪ್ಪಾಗಿತ್ತು.

ಅವತ್ತಿನ ರಾಜಕೀಯ ವಿದ್ಯಮಾನ

ಮೇಲ್ನೋಟಕ್ಕೇ ಕಾಣುವಂತೆ ಈ ಡಿನೋಟಿಫಿಕೇಷನ್ ವ್ಯವಹಾರದಲ್ಲಿ ನೇರವಾಗಿ ಲಾಭವಾಗಿದ್ದು ಸೋಮಣ್ಣನಿಗೆ!

ಆದರೆ ಯಡ್ಡಿ ಯಾಕೆ ಇಷ್ಟು ರಿಸ್ಕಿಗೆ ತಲೆ ಕೊಟ್ಟರೆಂಬ ಪ್ರಶ್ನೆ ಬರುತ್ತದೆ ಅಲ್ಲವೆ?

ಇದಕ್ಕೆ ಶನಿಯಂತೆ ಯಡ್ಡಿಯ ಹೆಗಲೇರಿದ್ದ ಸೋಮಣ್ಣನೇ ಕಾರಣ ಎನ್ನದೇ ವಿಧಿಯಿಲ್ಲ.

2008ರ ಮೇ 30 ರಂದು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದ ಯಡ್ಡಿಗೆ ಬಿಜೆಪಿ ಪಾರ್ಟಿಯೊಳಗಿಂದಲೇ ನಾನಾತರದ ಕಿರುಕುಳ ಎದುರಾಗುತ್ತಿತ್ತು. ಆಗ ಪಕ್ಷದಲ್ಲಿ ತನ್ನ ಹಿಡಿತ ಹೆಚ್ಚಿಸಿಕೊಳ್ಳಲು ಲಿಂಗಾಯತ ಶಾಸಕರಿಗೆ ಹಾಗೂ ನಾಯಕರಿಗೆ ಯಡ್ಡಿ ಜಾಸ್ತಿ ಆದ್ಯತೆ ಕೊಡಲು ಶುರು ಮಾಡಿದ್ದರು.

ಸೋಮಣ್ಣನೂ ಇದರ ಫಲಾನುಭವಿಯೇ!

ನೀವೇ ಗಮನಿಸಿ ನೋಡಿ.

2004 ಹಾಗೂ 2008 ರಲ್ಲಿ ಗೋವಿಂದರಾಜನಗರ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕನಾಗಿ ಗೆದ್ದುಬಂದಿದ್ದ ಸೋಮಣ್ಣ ರಾಜೀನಾಮೆ ಕೊಟ್ಟು ಅಧಿಕಾರ ಲಾಲಸೆಯಿಂದ ಬಿಜೆಪಿಗೆ ನೆಗೆದು ಮಂತ್ರಿಯಾಗಿ ಪುನಃ ಗೋವಿಂದರಾಜನಗರ ಕ್ಷೇತ್ರದಿಂದಲೇ ಬಿಜೆಪಿಯಿಂದ ಎಲೆಕ್ಷನ್‌ಗೆ ನಿಂತನಾದರೂ ಜನ ಸೋಲಿಸಿಬಿಟ್ಟರು. ಆದರೇನು ಸೋಮಣ್ಣ ಲಿಂಗಾಯತನೆಂಬ ಕಾರಣದಿಂದ ಯಡ್ಡಿ ಹಠ ಹಿಡಿದು ಎಂಎಲ್‌ಸಿ ಮಾಡಿಸಿ ವಸತಿ ಖಾತೆ ಸಚಿವನನ್ನಾಗಿ ನೇಮಿಸಿದರು. ಮತ್ತೊಂದೆಡೆ ಹುಟ್ಟುಕಳ್ಳ ಮಾಲೂರಿನ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿಯನ್ನು ಕರ್ನಾಟಕ ಗೃಹ ಮಂಡಳಿಗೆ ಅಧ್ಯಕ್ಷನನ್ನಾಗಿ ತಂದು ಕೂರಿಸಿ ಮೇಯಲು ಬಿಟ್ಟರು.

ಇತ್ತ ವಸತಿ ಸಚಿವನಾದ ಸೋಮಣ್ಣ ತನ್ನ ಆಜನ್ಮ ಶತ್ರು ಲೇಔಟ್ ಕೃಷ್ಣಪ್ಪ ಹಾಗೂ ಪ್ರಿಯಾಕೃಷ್ಣರ ವಿರುದ್ಧ ಕೆಲಸ ಚಾಲೂ ಮಾಡಿದ. ಅವರಿಗೆ ಸೇರಿದ್ದ ನೂರಾರು ಎಕರೆ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರದ ಸಂಸ್ಥೆಗಳನ್ನೇ ಛೂಬಿಟ್ಟ. ಅದೇ ವೇಳೆಯಲ್ಲೇ ತನ್ನ ಸ್ವಂತ ಲಾಭಕ್ಕಾಗಿ ನಾಗದೇನಹಳ್ಳಿಯ ಸರ್ವೆ ನಂ 77ರಲ್ಲಿನ 22 ಗುಂಟೆ ಹಾಗೂ 30 ಗುಂಟೆ ಜಮೀನುಗಳನ್ನು ಬಿಡಿಎ ವಶದಿಂದ ವಾಪಾಸ್ ಪಡೆಯಲು ಯಡ್ಡಿಯ ಕೈಲಿದ್ದ ಅಧಿಕಾರವನ್ನು ಬಳಸಿಕೊಂಡ.

ಬೆಂಗಳೂರು ನಗರದಲ್ಲಿ ತಾನೊಬ್ಬ ಪ್ರಬಲ ಲಿಂಗಾಯತ ಲೀಡರ್ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದ ಸೋಮಣ್ಣನಿಗೆ ಯಡ್ಡಿಯನ್ನು ಯಾಮಾರಿಸಿ ತನ್ನ ಕೆಲಸ ಮಾಡಿಸಿಕೊಳ್ಳುವ ಕಲೆ ಗೊತ್ತಿತ್ತು. ಹಾಗಾಗಿ ಕಾನೂನು ಬಾಹಿರವೆಂದು ತಿಳಿದಿದ್ದಾಗಲೂ ಸಹ ಹಿಂಜರಿಯದೆ ಯಡ್ಡಿ ಮೇಲೆ ಒತ್ತಡ ಹಾಕಿ 20 ಗುಂಟೆ ಹಾಗೂ 30 ಗುಂಟೆಗೆ ಡಿನೋಟಿಫೈ ಆದೇಶ ನೀಡುವಂತೆ ಯಡ್ಡಿಯ ತಲೆಕೆಡಿಸಿ ತನ್ನ ಕಾರ್ಯ ಸಾಧಿಸಿಕೊಂಡಿದ್ದಾನೆ.

ಈಗ ಏನಾಯಿತು ನೋಡಿ?

ಈ ಪ್ರಕರಣವೀಗ ಕೋರ್ಟ್ ಮೆಟ್ಟಲೇರಿದೆ. ಯಡ್ಡಿಯ ಅಳಿಯ ಹಾಗೂ ಮಕ್ಕಳು ಮಾಡಿರುವ ಅವ್ಯವಹಾರಗಳೀಗ ಯಡ್ಡಿಗೆ ಜೈಲಿನ ದಾರಿ ತೋರಿಸುತ್ತಿದೆ. ಆ ಡೀಲ್‌ಗಳಲ್ಲಿ ಸ್ವತಃ ಯಡ್ಡಿಯ ಕುಟುಂಬದವರಿಗೆ ನೂರಾರು ಕೋಟಿ ರೂಪಾಯಿ ಲಾಭವಾಗಿದೆ. ಇನ್ನೂ ಮೇಲಾಗಿ ಆ ಅವ್ಯವಹಾರಗಳಲ್ಲಿ ಯಡ್ಡಿ ಮುಗ್ಧ ಎನ್ನುವಂತೆಯೂ ಇಲ್ಲ.

ಆದರೆ ನಾಗದೇನಹಳ್ಳಿ ಡಿನೋಟಿಫಿಕೇಷನ್ ಡೀಲ್‌ನಲ್ಲಿ ನೇರವಾಗಿ ಲಾಭವಾಗಿದ್ದು ಸೋಮಣ್ಣನಿಗೆ ಮಾತ್ರ. ಆದರೆ ತಲೆ ಕೊಡಬೇಕಾಗಿ ಬಂದಿರುವುದು ಯಡ್ಡಿ!

ಸೋಮಣ್ಣನಂತಹ ಹಲಾಲ್‌ಟೋಪಿಗಳನ್ನು ನಂಬಿದ ಕಾರಣ ಈಗ ಯಡ್ಡಿ ಕಾನೂನಿನ ಬಲೆಯಲ್ಲಿ ಪುನಃ ಸಿಕ್ಕಿಬಿದ್ದಿದ್ದಾರೆ.

ಒಂದೆಡೆ ಸಿಬಿಐ ತನಿಖೆ, ಮತ್ತೊಂದೆಡೆ ರಾಚೇನಹಳ್ಳಿ ಡಿನೋಟಿಫಿಕೇಷನ್ ಹಗರಣದ ಕೇಸು, ಇಷ್ಟು ಸಾಲದೆಂಬಂತೆ ಈಗ ನಾಗದೇನಹಳ್ಳಿಯ ಡಿನೋಟಿಫಿಕೇಷನ್ ಹಗರಣ ದಾರೀಲಿ ಹೋಗೋರು ಒಂದು ಕಲ್ಲು ತಗೊಂಡು ಹೊಡೆದರೆ ಒಂದು ರೀತಿ, ಆದರೆ ಜೊತೆಲಿದ್ದವರೆ ಕಲ್ಲುಗುಂಡನ್ನು ಕಾಲಮೇಲೆ ಎತ್ತಿ ಹಾಕಿದರೆ ಅದೊಂದು ರೀತಿಯಾಗಿರುತ್ತದೆ.

ನಾಗದೇನಹಳ್ಳಿ ಹಗರಣದಲ್ಲಿ ಈಗ ಸಿಕ್ಕಿಹಾಕಿಕೊಂಡಿರುವ ಯಡ್ಡಿಯ ಕಾಲಮೇಲೆ ಸೈಜು ಕಲ್ಲನ್ನು ಎತ್ತಿ ಹಾಕಿರುವುದು ಬೇರೆ ಯಾರೂ ಅಲ್ಲ, ಅದು ಯಡ್ಡಿಯ ಪರಮಾಪ್ತನಂತೆ ಪೋಜು ಕೊಡುತ್ತಿರುವ ಸೋಮಣ್ಣ.

• ಪಾರ್ವತೀಶ

5 ◄◄◄
ತ್ತಿದ್ದರು. ಹಲ್ಲೆಯಿಂದ ನಜ್ಜು ಗುಜ್ಜಾಗಿದ್ದ ಎಸಿಎಫ್ ನಾಯಕರನ್ನು ಠಾಣೆಯಲ್ಲೇ ಸತತ ಐದು ತಾಸು ಸತಾಯಿಸಿದ್ದ ಪೊಲೀಸರು ಅಟ್ರಾಸಿಟಿ ಅಸ್ತ್ರ ತೋರಿಸಿ ಮಾನಸಿಕವಾಗಿಯೂ ಹೈರಾಣಾಗಿಸಿದ್ದರು. ಇದರಿಂದಾಗಿ ಯೇ ಎಸಿಎಫ್ ನಾಯಕ್ ಸಾವು ಕಾಣುವಂತಾಯ್ತೆಂಬುದು ನಿಸ್ಸಂಶಯ!

ಇಷ್ಟಾದರೂ ಜಿಲ್ಲಾ ಎಸ್ಪಿ ಸಾಹೇಬ ಕೆ.ಟಿ. ಬಾಲಕೃಷ್ಣನೆಂಬ ಹೇತ್ಲಾಂಡಿ ತನ್ನ ಪೊಲೀಸು ಪಡೆ ಪುಣ್ಯಾಂತರದೆಂದು ಪ್ರತಿಪಾದಿಸುತ್ತಿದ್ದಾರೆ. ಪಾತಕಿಗಳನ್ನು ರಕ್ಷಿಸುವಂಥ ಯಾವ ಕೆಲಸವನ್ನೂ ದಂಡೇಲಿಯ ಡಿವೈಎಸ್‌ಪಿ ಫಾಲಿಮಾರಿಂದ ಹಿಡಿದು ಪಿಎಸ್‌ಐ ಪ್ರವೀಣ ನೀಲಮ್ಮನವರ್ ತನಕ ಯಾರೂ ಒಂಚೂರೂ ಮಾಡಿಲ್ಲವೆಂದು ಬಡಬಡಿಸುತ್ತಿದ್ದಾರೆ. ಡಿವೈಎಸ್‌ಪಿ ಸಾರಾ ಫಾತಿಮಾ ಮೇಡಂ ಎಚ್ಚೆತ್ತುಕೊಂಡಿದ್ದರೂ ಸಾಕಿತ್ತು, ಒಂದು ನಿರಪರಾಧಿ ಕುಟುಂಬ ನಿಷ್ಕಾರಣವಾಗಿ ಜೀವನಪರ್ಯಂತ ಕಣ್ಣೀರಲ್ಲಿ ಕಳೆವಂಥ ಅನಾಹುತವೇ ಆಗುತ್ತಿರಲಿಲ್ಲ. ಈ ಎಸ್ಪಿ ಸಾಹೇಬ್ ತನ್ನ ಅಧೀನಾಧಿಕಾರಿಗಳ ತಾರೀಫು ಮಾಡುವುದಲ್ಲದೇ ತಿಕೋಟಾ ಪಿಎಸ್‌ಐ ಎಸ್.ಆರ್. ನಾಯಕನನ್ನೂ ರಕ್ಷಣೆ ಮಾಡುತ್ತಿರುವುದು ಅನೇಕ ಅನುಮಾನಗಳನ್ನು ಹುಟ್ಟುಹಾಕಿದೆ.

ಎಸಿಎಫ್ ಮೇಲೆ ಹಲ್ಲೆಯಾದಾಗ ಪಿಎಸ್‌ಐ ಎಸ್.ಆರ್. ನಾಯಕ್ ದಾಂಡೇಲಿಯಲ್ಲಿ ಇರಲೇ ಇಲ್ಲ; ಆತನ ಮೊಬೈಲ್ ಅಂದು ತಿಕೋಟಾ ಟವರ್ ವ್ಯಾಪ್ತಿಯಲ್ಲೇ ಕಾರ್ಯನಿರ್ವಹಿಸುತ್ತಿತ್ತೆಂದು ಎಸ್‌ಪಿ ಬಾಲಕೃಷ್ಣ ಗಡಿಬಿಡಿಯಲ್ಲಿ ಮಾಧ್ಯಮಗಳಿಗೆ ಹೇಳಿಕೆ ಬಿತ್ತರಿಸಿದ್ದಾರೆ. ತನಿಖೆಗೂ ಮೊದಲೇ ಎಸ್.ಆರ್. ನಾಯಕ್ ಎಂಬ ಖಾಕಿ ಕುಲಬಂಧುವನ್ನು ಬಚಾವ್ ಮಾಡುವ ಜರೂರತ್ತು ಎಸ್ಪಿ ಸಾಹೇಬರಿಗೆ ಬಂದಿರುವುದು ಇಡೀ ಪ್ರಕರಣವನ್ನೇ ಹಳ್ಳ ಹಿಡಿಸುವ ಸಂಚೊಂದು ಗೊತ್ತಾಗುತ್ತದೆ. ಎಸ್‌ಐ ಎಸ್.ಆರ್. ನಾಯಕ ಎಸಿಎಫ್ ಮದನ್ ನಾಯಕ್ ಹತ್ಯೆಯ ಹೊತ್ತಲ್ಲಿ ಹಾಲುಮಡ್ಡಿ ಹೋಮ್‌ಸ್ಟೇನಲ್ಲಿ ಇದ್ದನೆಂಬುದಕ್ಕೆ ಅನೇಕ ಸಾಂದರ್ಭಿಕ ಸಾಕ್ಷ್ಯಗಳಿವೆ. ಅಷ್ಟೇ ಅಲ್ಲ, ಆ ನಂತರವೂ ಆತ ತನ್ನ ಬಂಧುಗಳನ್ನು ಕಾನೂನು ತೊಡಕಿಂದ ರಕ್ಷಿಸಲು ಪೊಲೀಸು ಠಾಣೆ, ವಕೀಲರು ಮತ್ತು ಕೋರ್ಟ್ ಆಚೀಚೆ ಓಡಾಡಿದ ಬಗ್ಗೆಯೂ ಖಾತ್ರಿ ಖಾತ್ರಿಗಳು ದಾಂಡೇಲಿಯಲ್ಲಿದೆ. ಹೀಗಿರುವಾಗ ಅದೇಕೆ ಎಸ್ಪಿ ಬಾಲಕೃಷ್ಣ "ಕಣ್ಣೇಕಟ್ಟೇ ಕಾಡೇ ಗೂಡೆ....." ಆಡುತ್ತಿದ್ದಾರೆಂದು ಜನ ಮುಸಿಮುಸಿ ನಗುತ್ತಾರೆ.

ಎಸಿಎಫ್ ಮದನ್ ನಾಯಕರ ಮನೆಯವರೇ ಹಿಂಸಾಚಾರದ ಸಂದರ್ಭದಲ್ಲಿ ಸ್ವತಃ ಎಸ್.ಆರ್. ನಾಯಕನಿದ್ದನೆಂದು ದೂರಿದ್ದಾರೆ. ಹಲ್ಲೆ ಹೊತ್ತಲ್ಲಿ ಎಸಿಎಫ್ ಮದನ್ ನಾಯಕರಿಗೆ ಅಲ್ಲಿದ್ದವನೊಬ್ಬ "ನೀನು ಎಸಿಎಫ್ ಇದ್ರೆ ನಂಗೇನು.....? ನಾನೇ ಪಿಎಸ್‌ಐ ಇದ್ದೇನೆ, ಗೊತ್ತಾ?" ಎಂದು ಹಾರಾಡಿದ್ದ. ಇದೇ ಸಾಕು, ಅಂದಲ್ಲಿ ಎಸ್.ಆರ್.ನಾಯಕನಿದ್ದ ಎಂದು ಹೇಳಲಿಕ್ಕೆ. ಈ ಎಸ್.ಆರ್. ನಾಯಕ್ ಇಡೀ ಪ್ರಕರಣದ "ಆತಿಥೇಯ" ಅರವಿಂದ ಚೌಹಾಣ್‌ನ ಭಾಮೈದ. ಅಕ್ಕನ ಹೊಸ ಮನೆ ಪ್ರವೇಶ ಸಮಾರಂಭಕ್ಕೆಂದು ಆತ ಬಂದಿದ್ದು ನೂರಕ್ಕೆ ನೂರು ಸತ್ಯ. ಮರ್ಡರ್-ಕೇಸ್ ಬಳಿಕ ಆತ ದಾಂಡೇಲಿ ಠಾಣೆಯಲ್ಲೇ ಠಿಕಾಣಿಯೂ ಹೂಡಿದ್ದ. ಅಲ್ಲಿಯ ಅಧಿಕಾರಿ ಮಿತ್ರರ ಜೊತೆ ಲೇವಾದೇವಿಯೂ ನಡೆಸಿದ್ದ. ಮೊಬೈಲ್ ತೆಗೆವಾಗ ಆತನ ಕಿಸೆಯಲ್ಲಿದ್ದ ನೋಟಿನ ಕಂತೆ-ಕಂತೆ ಹೊರಗೆ ಬಂದದ್ದು ಕಂಡವರೂ ಇದ್ದಾರೆ.

ಮರುದಿನ ಎಸ್.ಆರ್. ನಾಯಕ್ ತನ್ನಕ್ಕ ಶೈಲಜಾ ಚೌಹಾಣ್ ಮತ್ತು ದಾನಾಬಾಯಿ ನಾಯಕ್ ಎಂಬ ಆರೋಪಿಗಳು ಅಡ್ಮಿಟ್ ಆಗಿದ್ದ ಸರ್ಕಾರಿ ಆಸ್ಪತ್ರೆಗೂ ಹೋಗಿದ್ದ. ಕೆಎ-27 ನೋಂದಣಿಯ ಇನ್ನೋವಾದಲ್ಲಿ ಆತ ದಾಂಡೇಲಿಯಲ್ಲಿ ಓಡಾಡಿಕೊಂಡಿದ್ದ. ಭಾವ ಅರವಿಂದ ಚೌಹಾಣ್‌ನನ್ನು ಪೊಲೀಸರು ಹುಡುಕಾಡುತ್ತಿದ್ದಾಗ ಅದೇ ಇನ್ನೋವಾದಲ್ಲಿ ಪಿಎಸ್‌ಐ ಎಸ್.ಆರ್. ನಾಯಕ್ ಭಾವನನ್ನು ಎಸ್ಕೇಪ್ ಮಾಡಿದ್ದ. ಸದ್ರಿ ಕಾರಲ್ಲೇ ಮೂವರು ಆರೋಪಿಗಳನ್ನು ಕೋರ್ಟಿಗೂ ಕರಕೊಂಡು ಬಂದಿದ್ದ. ಆರೋಪಿಗಳು ಕೋರ್ಟಿನಲ್ಲಿದ್ದಾಗ ಈತ ಹತ್ತಿರದಲ್ಲಿದ್ದ ಬೇಕರಿಯಲ್ಲಿ ನಿಂತು ಎಲ್ಲ ವಾಚ್ ಮಾಡುತ್ತಿದ್ದ. ಅಲ್ಲೇ ಕೋಲ್ಡ್ ಡ್ರಿಂಕ್ ಕೂಡ ಆತ ಕುಡಿದಿರುವುದು ಕಂಡವರಿದ್ದಾರೆ. ದಾಂಡೇಲಿ ಡಿವೈಎಸ್‌ಪಿ ಸಾರಾ ಫಾತಿಮಾ ಕೂಡ ಒಂದು ಹಂತದಲ್ಲಿ ಈ ಪಿಎಸ್‌ಐ ಎಸ್.ಆರ್. ನಾಯಕ್ ಬಗ್ಗೆ ಬಾಗಲಕೋಟೆ ಎಸ್ಪಿಗೆ ದೂರು ಕೊಡಲಾಗಿದೆ ಎಂದೂ ಹೇಳಿದ್ದಿದೆ.


ತಿಕೋಟಾ ಎಸ್‌ಐ ಎಸ್.ಆರ್. ನಾಯಕ್ ಭಾನ್ಗಡಿಯಲ್ಲಿ ಭಾಗಿಯಾಗಿರುವುದಲ್ಲದೆ ತನ್ನ ಪೊಲೀಸ್ ತಾಕತ್ತು ಬಳಸಿ ಇಡೀ ಪ್ರಕರಣವನ್ನೇ ಹಳಿ ತಪ್ಪಿಸಲು ಹವಣಿಸಿರುವ ಬಗ್ಗೆ ಅನೇಕ ನಿಖರ ಮಾಹಿತಿಗಳು ದಾಂಡೇಲಿಯಲ್ಲಿದೆ. ಎಸ್.ಆರ್. ನಾಯಕ್ ಬಳಸುವ ಮೊಬೈಲ್ ಎಸ್ಪಿ ಬಾಲಕೃಷ್ಣ ಹೇಳಿದಂತೆ ತಿಕೋಟಾ ಟವರ್ ವ್ಯಾಪ್ತಿಯಲ್ಲೇ ಇದ್ದರೂ ಇರಬಹುದು. ಹಾಗಾದರೆ ಎಸ್.ಆರ್. ನಾಯಕ್ ದಾಂಡೇಲಿಯಲ್ಲಿ ಉಪಯೋಗಿಸಿದ ಮೊಬೈಲ್ ಯಾರದು? ಇದು ಸಿಐಡಿಗೆ ಇಡೀ ಪ್ರಕರಣದ ಹೂರಣ ತೆಗೆಯಲು ಕೀ ಪಾಯಿಂಟ್! ತಿಕೋಟಾ ಪಿಎಸ್‌ಐ ನಾಯಕ್‌ನ ಪಾತ್ರ ಪರಿಚಯ ಸ್ಪಷ್ಟವಾಗಿ ಈ ಮೊಬೈಲ್ ಮಾಡಲಿದೆ.

ಎಸಿಎಫ್ ಮದನ್ ನಾಯಕ್ ಪ್ರಕರಣ ಈಗ ಸಿಐಡಿ ಕೈಗೆ ಕೊಡಲಾಗಿದೆ. ಸಿಐಡಿ ನಿಷ್ಪಕ್ಷಪಾತ ತನಿಖೆ ನಡೆಸಿ ಮದನ್ ನಾಯಕ್ ಕುಟುಂಬಕ್ಕೆ ನ್ಯಾಯ ಒದಗಿಸೀತಾ? ಅಥವಾ ಖಾಕಿ ಕುಲಬಾಂಧವರ ಬಚಾಯಿಸಲು ತನಿಖೆಯ ನಾಟಕ ನಡೆಸಿ ತಿಪ್ಪೆ ಸಾರಿಸೀತಾ? ಇಂಥದೊಂದು ಅನುಮಾನ ಈಗ ಉತ್ತರ ಕನ್ನಡಿಗರನ್ನು ಕಾಡುತ್ತಿದೆ. ಹಾಗೆಯೇ ಇನ್ನಾದರೂ ದಾಂಡೇಲಿಯಲ್ಲಿ ನಡೆಯುತ್ತಿರುವ ಅನಧಿಕೃತ ಹೋಮ್‌ಸ್ಟೇ, ರೆಸಾರ್ಟ್‌ಗಳತ್ತ ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಲಕ್ಷ್ಯ ಹರಿಸುವುದಾ? ಈ ಅಕ್ರಮ ಇಕೋ ಟೂರಿಸಮ್‌ಗೆ ಕಡಿವಾಣ ಹಾಕದಿದ್ದರೆ ದಾಂಡೇಲಿ ಆಚೀಚೆ ಇಂಥ ಅನಾಹುತ ಮಾಮೂಲಿ ಆಗಿಹೋದೀತು!

-ನಹುಷ

ಕೆಟ್ಟ ಕೆಲಸ ಮಾಡೋರಿಗೆ ಬಿಜೆಪಿ ಒಳ್ಳೆಪಾರ್ಟಿ ಕಂಡ್ರಿ

ಕೇಶವಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ವಿಪ್ರೋತ್ತಮರು ಉಂಡು ಎಸೆದ ಎಂಜಲೆಲೆ ನೆಕ್ಕಲು ಒಂದು ಜೂಲು ನಾಯಿ ಮತ್ತೊಂದು ಕಂತ್ರಿ ನಾಯಿ ಕಡಿದಾಡುತ್ತಿರುವುದನ್ನು ನೋಡಿದ ಕೂಡಲೇ ಅಬಕಾರಿ ಮಂತ್ರಿ ರೇಣುಕಾಚಾರ್ಯರಿಗೆ ಫೋನು ಮಾಡಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: "ಕೆಂಚಾಲೊ ಮಚ್ಚಾಲೊ ಯಂಗವ್ರುಲಾ ನಿನ್ ಡವ್‌ಗಳು, ಗೋವಿಂದಾ ಜೇಡರಹಳ್ಳೀ..."

"ಹಲೋ ಯಾರು?"

"ನಾನು ಸಾರ್, ನಿಮ್ಮ ಬಾಮೈದುನ ಕ್ಲೋಸ್ ಫ್ರೆಂಡ್ ಯಾಹೂ."

"ಜಯಲಕ್ಷ್ಮಿ ಬ್ರದರ್ ಫ್ರೆಂಡೇನ್ರಿ?"

"ಅಲ್ಲ ಸಾರ್ ನಿಮ್ಮ ನಿಜವಾದ ಹೆಂಡತಿ ತಮ್ಮನ ಫ್ರೆಂಡ್ ಯಾಹೂ ಅಂತ, ಪತ್ರಕರ್ತ."

"ಡ್ರಿಂಕ್ಸ್ ಬೇಕಾಗಿತ್ತೇನ್ರೀ?"

"ಬೇಡ ಸಾರ್, ನನ್ನಲ್ಲೇ ಸ್ಟಾಕಿದೆ. ಒಂದೆರಡು ಪ್ರಶ್ನೆ ಕೇಳಬೇಕಾಗಿತ್ತು."

"ಅದೇನು ಬೇಗ ಕೇಳಿ. ಎಡೂರಪ್ಪನ ಜೊತೆ ಹೋಗಬೇಕು."

"ಎಲ್ಲಿಗೋಗ್ತಿರಿ ಸಾರ್?"


"ಅದಿನ್ನೂ ಗೊತ್ತಾಗಿಲ್ಲ, ಬೇಗ ಕೇಳಿ."

"ಸಿ.ಟಿ.ರವಿ ನಿಮ್ಮ ಬಗ್ಗೆ ಏನೇನೊ ಹೇಳಿದಾರೆ ಸಾರ್?"

"ನನ್ನ ತರನೇ ಇರೋನು ನನ್ನ ಬಗ್ಗೆ ಏನೇಳ್ತನ್ರಿ?"

"ಅವ್ರುನಿಗಿಂತ ನೀವೇ ಪರವಾಗಿಲ್ಲ ಅಲ್ಲವ ಸಾರ್?"

"ಹಂಡ್ರೆಡ್ ಪರಸೆಂಟು ನಿಜಕಂಡ್ರಿ. ಬಾಬಾಬುಡನ್‌ಗಿರಿ ಬೆಟ್ಟ ಇಲ್ದೆಯಿದ್ರೆ ಈ ಚೇಟಿ ರವಿ ಇಲ್ಲ ಕಂಡ್ರಿ. ದತ್ತಮಾಲೆ ಹಾಕ್ಕೊಂಡು ಜಾತಿರಾಜಕಾರಣ ಮಾಡಿ ಶಾಸಕ ಆದೋನಿಗೆ ಯಾರ ಬಗ್ಗೆನೂ ಮಾತಾಡೊ ಯೋಗ್ತಿಯಿಲ್ಲ. ಚಿಕ್ಕಮಗಳೂರಲ್ಲಿ ಅಕ್ರಮವಾಗಿ ಸೈಟ್ ಹೊಡಕಂಡು ಬಾಯಿಗೆ ಬಂದಂಗೆ ಮಾತಾಡ್ತನೆ. ಕುಮಾರಸ್ವಾಮಿ ಅತ್ರಕೋಗಿ ಮಂತ್ರಿ ಮಾಡಿ ಅಂದ. ಅವ್ರುರು ಆಗಲ್ಲ ಅಂದಾಗ, ಹೋಗ್ಲಿ ದುಡ್ಡು ಕೊಡಿ ಅಂತ್ ಈಸಗಂಡೋನು ಇವತ್ತಿಗೂ ಕೊಟ್ಟಿಲ್ಲ."



"ಕುಮಾರಸ್ವಾಮಿನೆ ಸುಮ್ಮನಿರುವಾಗ ನಿಮಗೇಕೆ ಆ ಸಾಲದ ಸುದ್ದಿ ಅಂತನವ್ರುನು."

"ಚೀಟ್ ಮಾಡೊರು ಅಂಗೆ ಅಲವೇನ್ರಿ ಮಾತಾಡದು."

"ನೀವು ಬ್ಲಾಕ್‌ಮೇಲ್ ಮಾಡಿ ಮಂತ್ರಿಯಾದರಂತೆ?"

"ಬ್ಲಾಕ್‌ಮೇಲ್ ಮಾಡೊದು ಯಾವಾಗ ಗೊತ್ತೇನ್ರಿ? ಮಾಡಿಸಿಗಳೋನು ಏನಾರ ಮಾಡಿದಾಗ ತಾನೆ. ಅದೇ ತರ ನಾನು ಶ್ರೀಮಾನ್ ಎಡೂರಪ್ಪನೋರಿಗೆ ನನ್ನ ಮಂತ್ರಿ ಮಾಡ್ತರೊ ಇಲ್ಲ ಯಲ್ಲಾನು ಜನಗಳ ಮುಂದೆ ಹೇಳಲೊ ಅಂದೆ. ಕೂಡ್ಲೆ ಮಂತ್ರಿ ಮಾಡಿದ್ರು. ಇವ್ರುನು ಕಾಲಿಗೆ ಬಿದ್ರೂ ಮಂತ್ರಿ ಮಾಡಲಿಲ್ಲವಲ್ಲ ಹೇಳಿ."

"ಕಾಲಿಗೆ ಬಿದ್ದಿದ್ದು ಆಶೀರ್ವಾದ ತಗಳಕ್ಕೆ ಅಂತನಲ್ಲಾ."

"ಆಶೀರ್ವಾದ ತಗೊಳಕ್ಕೆ ಎಡೂರಪ್ಪೇನು ಜಗದ್ಗುರುಗಳೆ? ನಮ್ಮನ್ನೆಲ್ಲ ಹೊರಗಡೆ ಕಳಿಸಿ ಮರೇಲಿ ಕಾಲಿಗೆ ಬೀಳ್ತನೆ ಅಂದ್ರೆ ಇವ್ರುನೆಂಥಾ ಹೈನಾತಿ ಇರಬೇಕು ನೀವೇ ಯೋಚನೆ ಮಾಡಿ."

"ನೀವು ಗೋವಾ, ಹೈದರಾಬಾದ್ ರೆಸಾರ್ಟಿಗೋಗಿ ಎಡೂರಪ್ಪನೋರ ಇಳಸಕ್ಕೆ ಪ್ರಯತ್ನ ಮಾಡಿದ್ರಂತೆ."

"ಇಳಸಕ್ಕಲ್ಲ ಕಂಡ್ರೀ. ಸತ್ಯ ಹೇಳಬೇಕು ಅಂದ್ರೇ ನನ್ನನ್ನ ಉಪಮುಖ್ಯಮಂತ್ರಿ ಮಾಡಿ ಅಂತ ಒತ್ತಡ ತರಕ್ಕೆ ಹೋಗಿದ್ದೆ. ಜೊತೆಲಿ ಬಂದೋರು ಎಡೂರಪ್ಪನ್ನೇ ಇಳಸಬೇಕು ಅಂದಾಗ ನಾನು ವಾಪಸ್ಸು ಬಂದು ಶ್ರೀಮಾನ್ ಎಡೂರಪ್ಪನವರ ಕ್ಷಮೆ ಕೇಳಿ ಜೊತೆಗೆ ಸೇರಿಕೊಂಡೆ. ಇವ್ರುನಂಗೆ ಒಂದಿನ ಎಡೂರಪ್ಪನ್ನ ಹೊಗಳೋದು, ಇನ್ನೊಂದು ದಿನ ಸದಾನಂದಗೌಡ್ರ ಹೊಗಳೊ ಕೆಲಸ ನಾನು ಇವತ್ತಿನವರಿಗೂ ಮಾಡಿಲ್ಲ, ಮಾಡೋದೂ ಇಲ್ಲ."

"ನೀವು ಜನಾರ್ದನ ರೆಡ್ಡಿ ಹತ್ರ ದುಡ್ಡು ತಗೊಂಡರಂತೆ?"

"ಹೌದು, ಇಡೀ ಸರಕಾರನೆ ತಗೊಂಡದೆ. ಈ ಚೇಟಿ ರವಿಯ ಚುನಾವಣೆ ಖರ್ಚಿಗೆ ಅವ್ರುರಪ್ಪ ದುಡ್ಡು ಕೊಟ್ನ ಅಥವಾ ಅವನ ದುಡ್ಡನೇ ಹಾಕಿದ್ನ? ಅವ್ರುನು ಮತದಾರರಿಗೆ ಹಂಚಿದ ದುಡ್ಡು ಬಂದಿದ್ದು ಬಳ್ಳಾರಿ ಗಣಿ ಧೂಳಿಂದ್ಲೆ ಅಂತ ಹೇಳಿ."

"ಏನ್ಸಾರ್ ಒಂದೇ ಪಾರ್ಟಿಲಿದ್ದುಕೊಂಡು ಇಷ್ಟೊಂದು ಜಗಳ ಆಡ್ತೀರಿ."

"ನಾನು ಯಾವತ್ತೂ ಜಗಳ ಆಡೋನಲ್ಲ ಕಂಡ್ರಿ. ನನ್ನ ಇಷ್ಟದಂಗೆ ಯೆಲ್ಲಾ ನೆಡೀಬೇಕು. ಇಲ್ಲ ಅಂದ್ರೆ ಯಾರಿಗೂ ಕೇರ್ ಮಾಡದಿಲ್ಲ ನಾನು."

"ನಿಜ ಸಾರ್, ಮಾಧ್ಯಮ, ಸಾರ್ವಜನಿಕರು, ಗುರುಪೀಠ, ಕ್ಷೇತ್ರದ ಜನ ಯಾರಿಗೂ ಕೇರ್ ಮಾಡದಿಲ್ಲ ನೀವು. ನಿಮ್ಮೆದುರಿಗೆ ಆ ಸಿಟಿ ರವಿ ನರಿ. ನಿಜಕ್ಕೂ ನೀವು ಹೊನ್ನಾಳಿ ಸಿಮ್ಮ."

"ಸಿಮ್ಮ ಅಲ್ಲ ಸಿಂಹ ಕಂಡ್ರಿ. ಯಾತಕ್ರಿ ಹೆದರಬೇಕು ನಾವು. ನನ್ನತ್ರ ಯಾವ ಮುಚ್ಚುಮರೆನೂ ಇಲ್ಲ. ನಮ್ಮ ಹೊನ್ನಾಳಿಲಿ ಎಲ್ಲಾ ಹುಡುಗರ ಜೊತೆಲೂ ಕುಡೀತಿನಿ. ಅವ್ರುರು ಯಾವ್ರುದೇ ಜಾತಿ ಇರಬಹುದು. ಅವ್ರುರ ಜೊತೆ ಯಂತಾ ಡ್ರಿಂಕ್ಸ್‌ನಾದ್ರು ತಗೋತಿನಿ. ಇಂತ ಶಕ್ತಿ ಇಡೀ ಕರ್ನಾಟಕದಲ್ಲಿ ಯಾರಿಗಿದೆ ಹೇಳ್ರಿ?"

"ನಿಜಕ್ಕೂ ನಾನು ನಿಮ್ಮ ಜೊತೆ ಇರಬೇಕು ಅನ್ನಸ್ತಾಯಿದೆ ಸಾರ್."

"ಬನ್ರಿ, ನಿಮ್ಮ ತರದೋರೊಬ್ರು ಬೇಕು ನಮಿಗೆ."

"ನೀವು ಬಿ.ಜೆ.ಪಿ. ಬುಟ್ರೆ ಬರಬಹುದು ಸಾರ್."

"ಆಗಲ್ಲ ಕಂಡ್ರಿ. ಕೆಟ್ಟ ಕೆಲಸ ಮಾಡಕ್ಕೆ ಬಿ.ಜೆ.ಪಿ. ಹೇಳಿ ಮಾಡಿಸಿದ ಪಾರ್ಟಿ. ಅದೇ ಕಾಂಗ್ರೆಸ್ನಲ್ಲಿ, ಜೆ.ಡಿ.ಎಸ್ನಲ್ಲಿ ನಾವಿಂಗಿರಕ್ಕಾಗಲ ಕಂಡ್ರಿ."

"ಜೆ.ಡಿ.ಎಸ್ನಲ್ಲಿ ಇಟಿಗಳದಕಿಂತ ಯರಡ್ನೆ ಮದಿವಾಗೂ ಪರಮಿಷನ್ನ ದೇವೇಗೌಡ್ರೆ ಕೊಟ್ಟಿದ್ದರಂತೆ ಸಾರ್."

"ಥೂ, ಮದಿವಾಗಕ್ಕೊಗಬಾರ್ದರಿ. ಇಟಗಳೊ ಮಜಾನೆ ಬೇರೆ. ಆ ದಡ್ಡ ಕುಮಾರಸ್ವಾಮಿ ಪಜೀತಿ ನೋಡಕ್ಕಾಗಲ್ಲ. ಅದೇ ನಾನ್ನೋಡಿ. ಜಯಲಕ್ಷ್ಮಿ ಜೊತೆ ಇದ್ದೆ. ಈಗಿಲ್ಲ, ಮುಂದೆ ಅಂಥೋಳೆ ಒಬ್ಳು ಸಿಗಬಹುದು."

"ಈಗ್ಯಾರೂ ಇಲ್ಲವಾ ಸಾರ್?"

"ಈಗ ಏಡೂರಪ್ಪನ ಜೊತೆ ಇದ್ದಿನಿ. ಸಾಕಾಗೋಗ್ಯದೆ."

ಥೂತ್ತೇರಿ!!!

▶2

ವ್ಯಂಗ್ಯವಿರುವುದು ಸಂದರ್ಭದಲ್ಲಿ...

ಅದೇನೇ ಇರಲಿ. ಈ ವಿರೋಧಕ್ಕೆ ಐತಿಹಾಸಿಕ ತಳಹದಿ ಇದೆ ಎಂದು ಒಪ್ಪಿಕೊಂಡ ಮೇಲೆ ಆ ವ್ಯಂಗ್ಯಚಿತ್ರವನ್ನು ಮತ್ತು ಪಠ್ಯವನ್ನು ಏನು ಮಾಡಬೇಕು?

ಈ ಪ್ರಶ್ನೆಗೆ ಮಾತ್ರ ನಮ್ಮ ಪಾರ್ಲಿಮೆಂಟು ಅತ್ಯಂತ ಕೆಟ್ಟ ಉತ್ತರವನ್ನು ನೀಡಿದೆ. ಆ ವ್ಯಂಗ್ಯಚಿತ್ರವಾಗಲೀ, ಅದನ್ನು ಪಠ್ಯಕ್ಕೆ ಸೇರಿಸಿದ ಸುಭಾಷ್ ಮತ್ತು ಯಾದವ್ ಅವರಿಗೇ ಆಗಲೀ ಯಾವುದೇ ಜಾತಿವಾದಿ ದುರುದ್ದೇಶಗಳಿಲ್ಲ, ಹೀಗಾಗಿ ಅವರ ಮೇಲೆ ಅದನ್ನು ಆರೋಪಿಸುವುದು, ಇಡೀ ಪಠ್ಯಪುಸ್ತಕವನ್ನೇ ಹಿಂತೆಗೆದುಕೊಳ್ಳುವುದು ಹಾಗೂ ಅವರ ಮೇಲೆ ಕೇಸುಗಳನ್ನು ಜಡಿಯುವುದು, ಹಲ್ಲೆ ಮಾಡುವುದು ಇತ್ಯಾದಿಗಳೆಲ್ಲಾ ಅತಿರೇಕದ ಮತ್ತು ಅವಕಾಶವಾದಿ ಜಾತಿ ರಾಜಕಾರಣದ ಕ್ರಮಗಳಾಗಿವೆ. ಈ ಕ್ರಮಗಳು ದೇಶದಲ್ಲಿ ಹೆಚ್ಚುತ್ತಿರುವ ಅಸಹನೆ ಮತ್ತು ದ್ವೇಷದ ರಾಜಕಾರಣವನ್ನು ಮತ್ತು ಸಂಕುಚಿತ ತಾತ್ವಿಕತೆಯನ್ನು ಗಟ್ಟಿಗೊಳಿಸುತ್ತದೆ.

ಸಂದರ್ಭದ ವ್ಯಂಗ್ಯವೇನೆಂದರೆ ವಿದ್ಯಾರ್ಥಿಗಳನ್ನು ಪಠ್ಯಪುಸ್ತಕದ ಆಚೆ ಮತ್ತು ಅವು ನೀಡುತ್ತಿದ್ದ 'ಅಧಿಕೃತ ಸತ್ಯ'ಗಳನ್ನು ವಿಮರ್ಶೆ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಮಾನಸಿಕತೆಯನ್ನು ಬುದ್ಧಿಮತ್ತೆಯನ್ನು ತಯಾರು ಮಾಡಬೇಕೆಂಬ ಅತ್ಯಂತ ಪ್ರಗತಿಪರ ದೃಷ್ಟಿಯಿಂದ ಈಗ NCERT ಮಾರ್ಗದರ್ಶನದಂತೆ ಪಠ್ಯಗಳು ತಯಾರಾಗುತ್ತಿವೆ. ಹಾಗೂ ಪಠ್ಯದಲ್ಲಿ ಏಕತಾನತೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳಲ್ಲಿ ಟೀಕಾತ್ಮಕ ಮತ್ತು ವಿಮರ್ಶಾತ್ಮಕ ಸಂವೇದನೆಯನ್ನು ಬೆಳೆಸುವ ದೃಷ್ಟಿಯಲ್ಲಿ ವ್ಯಂಗ್ಯಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಸದರಿ ವ್ಯಂಗ್ಯಚಿತ್ರವೂ ಆ ದೃಷ್ಟಿಕೋನದ ಭಾಗ. ಪ್ರಾಯಶಃ ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಕೊಟ್ಟಿದ್ದನ್ನು ತುಂಬಿಕೊಳ್ಳುವ ಗೋಣಿಚೀಲದಂಥ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಬದಲಿಗೆ ವಿಮರ್ಶೆ ಮತ್ತು ಸ್ವಂತ ಚಿಂತನೆಯುಳ್ಳ ಪ್ರಬುದ್ಧ ವಿದ್ಯಾರ್ಥಿಗಳನ್ನು, ನಾಗರಿಕರನ್ನು ಸೃಷ್ಟಿಸುವ ಉದ್ದೇಶದಿಂದ ವಿದ್ಯಾರ್ಥಿ ಕೇಂದ್ರಿತ ಮತ್ತು ಪ್ರಜಾತಾಂತ್ರಿಕ ಪ್ರಜ್ಞೆ ಪಠ್ಯರಚನೆಯಲ್ಲಿ ಬರುತ್ತಿದೆ. ಇದು ಸ್ವಾಗತಾರ್ಹ. ಹೀಗಾಗಿ ಈ ಪ್ರಕರಣದಲ್ಲಿ ಈ ವ್ಯಂಗ್ಯಚಿತ್ರದ ಜೊತೆಗೆ ಸಂವಿಧಾನ ರಚನೆಯ ಬಹುಮುಖಿ ಓದನ್ನು ಸಾಧ್ಯವಾಗಿಸಬಲ್ಲ ಮತ್ತಷ್ಟು ಚಿತ್ರವೋ, ಪಠ್ಯವೋ, ಹೇಳಿಕೆಗಳೋ ಸೇರ್ಪಡೆಯಾಗಿ ವಿದ್ಯಾರ್ಥಿಗಳಿಗೆ ಸಂವಿಧಾನರಚನೆಯ ಬೇರೆ ಮುಖಗಳು ಮತ್ತು ಅದರಲ್ಲಡಗಿದ್ದ ಸಂಕೀರ್ಣತೆಯನ್ನು ಪರಿಚಯಿಸುವಂತಾಗಬೇಕೆ ಹೊರತು ಈ ವ್ಯಂಗ್ಯಚಿತ್ರವನ್ನಾಗಲೀ, ಪಠ್ಯವನ್ನಾಗಲೀ ಹಿಂತೆಗೆದುಕೊಳ್ಳಬಾರದು. ಹಾಗಾದಲ್ಲಿ ಅದು ಯಥಾಸ್ಥಿತಿವಾದದ ವಿಜಯವಾಗುತ್ತದೆ.

ಅದೇರೀತಿ ಅಂಬೇಡ್ಕರ್ ಅವರು ದಮನಿತ ಸಮುದಾಯದ ಐಕಾನ್ ಆದ್ದರಿಂದ ಅವರನ್ನು ಟೀಕಿಸುವುದು ತಪ್ಪು ಎಂಬ ಅಭಿಪ್ರಾಯವೂ ಸಹ ಸ್ವತಃ ಅಂಬೇಡ್ಕರ್ ಅವರೇ ವಿರೋಧಿಸುತ್ತಿದ್ದ ಮೂರ್ತಿಪೂಜೆಗೆ ಇಂಬು ಕೊಟ್ಟಂತಾಗುತ್ತದೆ. ಅಂಬೇಡ್ಕರ್ ಆಗಲೀ, ಮಾರ್ಕ್ಸ್ ಆಗಲೀ, ಪ್ರತಿಮೆಗಳಾದ ತಕ್ಷಣ ವರ್ತಮಾನದಲ್ಲಿ ಅವರ ಸಿದ್ಧಾಂತದ ಬಳಕೆ ಸಾಯುತ್ತದೆ. ಆಯಾ ಕಾಲಘಟ್ಟದ ಉತ್ಪನ್ನಗಳಾದ ಮಾರ್ಕ್ಸ್, ಅಂಬೇಡ್ಕರ್ ಅವರಂಥ ದಾರ್ಶನಿಕರು ಪ್ರತಿಪಾದಿಸಿದ ದರ್ಶನ ಮತ್ತು ವಿಮೋಚನಾ ಮಾರ್ಗಗಳಲ್ಲಿ ಕಾಲಾತೀತ ಸತ್ಯಗಳು ಇದ್ದಂತೆಯೇ ಕಾಲಬಾಹಿರವಾದ ಸಂಗತಿಗಳೂ ಇವೆ. ಅದರಲ್ಲಿನ ಸಾರ್ವತ್ರಿಕತೆಯನ್ನು ಮುಂದುವರೆಸಿ ವರ್ತಮಾನ ಬೇಡುವಂತೆ ಆಯಾ ಸಿದ್ಧಾಂತಗಳನ್ನು ಪುನರುಜ್ಜೀವೀಕರಿಸುವ ಮೂಲಕ ಮಾತ್ರ ಅಂಬೇಡ್ಕರ್ ಆಗಲಿ ಮಾರ್ಕ್ಸ್ ಆಗಲಿ ಮರುಜೀವ ಪಡೆಯುತ್ತಾರೆ. ಅದರ ಬದಲಿಗೆ ಅವರನ್ನು ಪ್ರತಿಮೆಗಳನ್ನಾಗಿಸುವವರು ಮತ್ತು ಅವರ ದರ್ಶನಗಳನ್ನು ಚಲನರಹಿತ ಶಾಸ್ತ್ರಗಳನ್ನಾಗಿಸುವವರು ಈ ದಾರ್ಶನಿಕರನ್ನು ಪ್ರತಿನಿತ್ಯ ಸಾಯಿಸುತ್ತಾರೆ. ಹಾಗೆ ನೋಡಿದರೆ ಇಂದಿನ ದಮನಿತ ಸಮುದಾಯಗಳ ರಾಜಕಾರಣ ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ಈ ಜೀವಂತ ಸಿದ್ಧಾಂತಗಳ ಪ್ರಾಣವನ್ನು ತೆಗೆದು ಸ್ಥಾವರ ಮಾಡುವ ಪ್ರತಿಮಾ ರಾಜಕಾರಣವೇ.....

ಹೀಗಾಗಿ...

1. ಮೊದಲಿಗೆ ಸುಭಾಷ್ ಪಾಲ್ಶೀಕರ್ ಮತ್ತು ಯೋಗೇಂದ್ರ ಯಾದವ್ ಮೇಲೆ ಹಾಕಿರುವ ಪ್ರಕರಣವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು. ಇಡೀ ಪಠ್ಯವನ್ನು ಹಿಂತೆಗೆದುಕೊಳ್ಳುವ ಸರ್ಕಾರದ ನಿರ್ಧಾರ ಖಂಡನಾರ್ಹ. ಕೂಡಲೇ ಆ ನಿರ್ಧಾರವನ್ನು ವಾಪಸ್ ಪಡೆಯಬೇಕು.
2. ವ್ಯಂಗ್ಯಚಿತ್ರಕ್ಕೆ ಬರುತ್ತಿರುವ ಒಟ್ಟಾರೆ ಪ್ರತಿರೋಧವನ್ನು ಅವಕಾಶವಾದಿ ರಾಜಕಾರಣ ಎಂದು ತಿರಸ್ಕರಿಸಲು ಸಾಧ್ಯವಿಲ್ಲ. ಬದಲಾದ ಸಂದರ್ಭ ಮತ್ತು ಎಚ್ಚೆತ್ತ ದಮನಿತ ಪ್ರಜ್ಞೆಗಳು ಇತಿಹಾಸಕ್ಕೆ ಸಂಬಂಧಪಟ್ಟಂತ ಎಲ್ಲಾ ಓದನ್ನು ಮರುನಿರ್ವಚನಕ್ಕೆ ಒಳಪಡಿಸುವುದು ಪ್ರಜಾತಂತ್ರಕ್ಕೆ ಪೂರಕವಾದದ್ದೇ. ಹೀಗಾಗಿ ಈ ವಿರೋಧವನ್ನು ಸಹಾನುಭೂತಿಯಿಂದಲೇ ನೋಡಬೇಕು ಮತ್ತು ಆ ವಿರೋಧದ ಧ್ವನಿಗೂ ಅವಕಾಶವಿರುವಂತೆ ನಮ್ಮ ಇತಿಹಾಸದ ಓದನ್ನು ಬಹುಮುಖೀ ನಿರ್ವಚನಕ್ಕೆ ಒಳಪಡಿಸಬೇಕು.
3. ಇಂದಿನ ಸಂದರ್ಭ ಹೆಚ್ಚೆಚ್ಚು ಓದಿನ ಸಾಧ್ಯತೆಗಳನ್ನು ಆಗಮಾಡುವ ಪಠ್ಯ ಸಾಮಗ್ರಿಗಳ ಸೇರ್ಪಡೆಯನ್ನು ಕೇಳುತ್ತವೆಯೇ ವಿನಃ ವಿಮರ್ಶೆ ಮತ್ತು ಟೀಕೆಯನ್ನೇ ತೆಗೆದುಹಾಕುವಂತ ಅವಿಮರ್ಶಾತ್ಮಕ ಓದನ್ನಲ್ಲ. ಅಂಥ ಕ್ರಮ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಜ್ಞಾನವನ್ನು ಹುಟ್ಟಿಸುವ ಬದಲಿಗೆ ಯಂತ್ರಗಳನ್ನು ಸೃಷ್ಟಿಸುತ್ತದೆ.
4. ನಮ್ಮ ಐಕಾನ್‌ಗಳನ್ನು ಪದೇಪದೇ ಪುನರ್ ವಿಮರ್ಶೆಗೊಳಪಡಿಸುವ ಮತ್ತು ಅವರ ಸಾಧನೆಯ ಶಕ್ತಿಯನ್ನು ಪಡೆದುಕೊಂಡು ಅವರ ಮಿತಿಯನ್ನು ಮೀರಿ ಬೆಳೆಯುವ ರಾಜಕೀಯ ಸಂಸ್ಕೃತಿ ಬೆಳೆಸಬೇಕೆ ವಿನಃ ನಾಯಕರನ್ನು ಪ್ರಶ್ನಾತೀತ ಪ್ರತಿಮೆಗಳನ್ನಾಗಿಸುವುದು ತಪ್ಪು.

ನಮ್ಮ ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳು ದಿನನಿತ್ಯ ನಡೆಯುತ್ತಿರುವಾಗಲೂ ಎಂದು ಅದರ ವಿರುದ್ಧ ಇಷ್ಟು ದೊಡ್ಡ ಧ್ವನಿ ಎದ್ದಿರಲಿಲ್ಲ. ಆದರೆ ಈ ವ್ಯಂಗ್ಯಚಿತ್ರವನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಧ್ವನಿ ಮಾತ್ರ ಪಾರ್ಲಿಮೆಂಟಿನಲ್ಲಿ ಅತಿ ಗಟ್ಟಿಯಾಗಿ ಕೇಳಿಸಿದ್ದು ಮಾತ್ರವಲ್ಲದೆ ದಲಿತ ವಿರೋಧಿಗಳು, ಅವಕಾಶವಾದಿಗಳು ಮತ್ತು ಪಕ್ಷಾತೀತವಾಗಿ ಎಲ್ಲಾ ರಾಜಕಾರಣಿಗಳು ಒಂದಾಗಿ ಹುಯಿಲೆಬ್ಬಿಸಿ ಇಡೀ ಪಠ್ಯಪುಸ್ತಕವನ್ನೇ ಹಿಂತೆಗೆದುಕೊಳ್ಳುವಂತೆ ಮಾಡಿಬಿಟ್ಟರು. ಪ್ರಾಯಶಃ ಇದು ನಮ್ಮ ಸಂದರ್ಭದ ಅತಿ ದೊಡ್ಡ ವ್ಯಂಗ್ಯಚಿತ್ರವಲ್ಲವೇ?

ದೀದಿಯ ಗುಲಾಮನಿಗೆ ರಾಜ್ಯಸಭೆ ಸದಸ್ಯತ್ವ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ 'ದೀದಿ' ಮಮತಾ ಬ್ಯಾನರ್ಜಿ ಇತ್ತೀಚೆಗೆ ತಾನು ಸೂಕ್ತ ಎಂದು ಸೂಚಿಸಿದ ಪತ್ರಿಕೆಗಳನ್ನು ಮಾತ್ರ ರಾಜ್ಯ ಸರ್ಕಾರದ ಲೈಬ್ರರಿಗಳಿಗೆ ತರಿಸಬೇಕೆಂದು ಆದೇಶಿಸಿದ್ದರಲ್ಲ... ಆಗ ಆಕೆ ಸೂಚಿಸಿದ್ದ ಪತ್ರಿಕೆಗಳಲ್ಲಿ ಹಿಂದಿ ದೈನಿಕ 'ಸನ್ಮಾರ್ಗ್'ವೂ ಒಂದಾಗಿತ್ತು. 'ಸನ್ಮಾರ್ಗ್' ಪತ್ರಿಕೆಯ ಸಂಪಾದಕ ವಿವೇಕ್ ಗುಪ್ತಾ ಎಂಬುವವರು ದೀದಿಯನ್ನು ತಮ್ಮ ಪತ್ರಿಕೆಯಲ್ಲಿ ಹಾಡಿಹೊಗಳುತ್ತಿದ್ದದ್ದೇ ದೀದಿಯ ಬೆಂಬಲಕ್ಕೆ ಕಾರಣ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅನ್ನಿಸುತ್ತದೆ.

ಅಂದಹಾಗೆ ಈ ಸಂಪಾದಕ ವಿವೇಕ್ ಗುಪ್ತಾನಿಗೆ ಒಂದು ಆಶಯವಿತ್ತು, ಅದೇನೆಂದರೆ ದೆಹಲಿಯಲ್ಲಿರುವ ಸಂಸತ್ ಭವನದ ಕಲಾಪಗಳನ್ನು ಒಮ್ಮೆ ವೀಕ್ಷಿಸುವುದು. ತಮ್ಮ ಈ ಆಶೆಯನ್ನು ದೀದಿಯ ತೃಣಮೂಲ್ ಕಾಂಗ್ರೆಸ್ ಪಕ್ಷದ ಕಿರಿಯ ನಾಯಕ ಸುದೀಪ್ ಬಂಡೋಪಾಧ್ಯಾಯ ಎಂಬುವವರಲ್ಲಿ ತೋಡಿಕೊಂಡರು. ಹೇಗಿದ್ದರೂ ದೀದಿಯಿಂದ 'ಶಹಭಾಷ್' ಪಡೆದ ಪತ್ರಿಕೆಯ ಸಂಪಾದಕನಲ್ಲವೇ. ಅದಕ್ಕೆ ಬಂಡೋಪಾಧ್ಯಾಯ ಅವರು ಇತ್ತೀಚೆಗೆ ದೆಹಲಿಯಲ್ಲಿರುವ ಲೋಕಸಭೆಯ ಕಲಾಪಗಳನ್ನು ವೀಕ್ಷಿಸಲು ಗುಪ್ತಾ ಅವರಿಗೆ ಸಂಸತ್ ಭವನದ ವಿಸಿಟರ್ಸ್ ಗ್ಯಾಲರಿಗೆ ಒಂದು ಪಾಸ್ ಅನ್ನು ಕೊಡಿಸಿದರು.



ಗುಪ್ತಾ ಅವರಿಗೆ ಸಂತೋಷವೋ ಸಂತೋಷ. ಅವರು ಇಡೀದಿನ ಲೋಕಸಭೆಯ ವಿಸಿಟರ್ಸ್ ಗ್ಯಾಲರಿಯಲ್ಲಿ ಕೂತು ಕಲಾಪಗಳನ್ನು ನೋಡಿದರು. ಅದೆಲ್ಲ ಮುಗಿದನಂತರ ಅವರು ದೆಹಲಿಯಿಂದ ಕೊಲ್ಕತ್ತಾಗೆ ವಿಮಾನವನ್ನೇರಿದರು. ಭೋಪರಾಕ್ ಎನ್ನುವ ಮಂದಿಗೆ ಅದೃಷ್ಟ ಎಂಬುದು ಹೇಗೆ ಖುಲಾಯಿಸುತ್ತದೆ ನೋಡಿ. ಗುಪ್ತಾ ಅವರಿದ್ದ ವಿಮಾನವು ಕೊಲ್ಕತ್ತಾದ ವಿಮಾನ ನಿಲ್ದಾಣದಲ್ಲಿ ಇಳಿಯುವ ಮುನ್ನವೇ ಅವರಿಗೊಂದು ಸಿಹಿ ಸುದ್ದಿ ಕಾದಿತ್ತು, ಅದೇನೆಂದರೆ ಗುಪ್ತಾ ಅವರನ್ನು ದೀದಿ ಬ್ಯಾನರ್ಜಿ ತಮ್ಮ ಪಕ್ಷದ ವತಿಯಿಂದ ರಾಜ್ಯ ಸಭೆಗೆ ನೇಮಿಸಿದ್ದರು.

ಅಕಟಕಟಾ, ದೀದಿಯ ದಾದಾಗಿರಿಯನ್ನು ಪ್ರಶಂಸಿಸಿದರೆ ಏನೇನೆಲ್ಲ ಸಿಗುತ್ತದೆ ನೋಡಿ....

ಚಿಂದಿ ಎದ್ದಿರುವ ಚೆಡ್ಡಿಗಳಿಗೆ ಗಡ್ಕರಿಯೇ ನಾಯಕ

ತನ್ನ ಕಳಪೆ ಕಾರ್ಯಶೈಲಿಯಿಂದಾಗಿ ಚೌಚೌ ಆಗಿರುವ ಕಾಂಗ್ರೆಸ್ ಪಕ್ಷವನ್ನು ಮುಂದಿನ ವರ್ಷ ಬರಲಿರುವ ಚುನಾವಣೆಯಲ್ಲಿ ಅಧಿಕಾರದಿಂದ ಒದ್ದೋಡಿಸುವ ಕನಸನ್ನು ಕಾಣುತ್ತಿರುವ ಬಿಜೆಪಿಯ ನಾಯಕರಿಗೆ ತಮ್ಮ ಪಕ್ಷವೇ ಚಿಂದಿ ಚಿತ್ರಾನ್ನವಾಗಿರುವುದು ಆತಂಕ ಹುಟ್ಟಿಸಿದೆ.

ತೆಹೆಲ್ಕಾ ವರದಿಗಾರರು ನಡೆಸಿದ ಸ್ಟಿಂಗ್ ಆಪರೇಷನ್‌ನಲ್ಲಿ ಪಕ್ಷಕ್ಕೆ ಲಂಚ ಸ್ವೀಕರಿಸಿದ್ದಕ್ಕೆ ಬಿಜೆಪಿಯ ಮಾಜಿ ರಾಷ್ಟ್ರಾಧ್ಯಕ್ಷ ಬಂಗಾರು ಲಕ್ಷ್ಮಣನಿಗೆ ಇತ್ತೀಚೆಗೆ ನಾಲ್ಕು ವರ್ಷ ಜೈಲುಶಿಕ್ಷೆಯನ್ನು ನ್ಯಾಯಾಲಯ ವಿಧಿಸಿತು. ಇದಾದ ಕೆಲ ದಿನಗಳಲ್ಲೇ ಗುಜರಾತ್‌ನಲ್ಲಿ 2002ರಲ್ಲಿ ನಡೆದ ಅಲ್ಪಸಂಖ್ಯಾತರ ಮಾರಣ ಹೋಮಕ್ಕೆ ಸಂಬಂಧಿಸಿದಂತೆ ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನೂ ಆರೋಪಿಯನ್ನಾಗಿಸಬೇಕೆಂದು ಅಮಿಕಸ್ ಕ್ಯೂರಿ ರಾಜು ಮಹೇಂದ್ರನ್ ಅವರು ಸುಪ್ರೀಂಕೋರ್ಟಿಗೆ ಹೇಳಿದರು. ಇದೇ ಹೊತ್ತಿಗೆ ಬಾಬ್ರಿ ಮಸೀದಿಯನ್ನು 1992ರಲ್ಲಿ ಸಂಘಪರಿವಾರದವರು ಕೆಡವಿದ್ದರಲ್ಲಾ, ಆ ಸಂಚಿನಲ್ಲಿ ಬಿಜೆಪಿಯ ಹಿರಿಯ ನಾಯಕ ಎಲ್.ಕೆ.ಅಡ್ವಾನಿಯನ್ನೂ ಆರೋಪಿಯನ್ನಾಗಿಸಬೇಕೆಂದು ಸಿಬಿಐ ಸುಪ್ರೀಂಕೋರ್ಟಿಗೆ ತನ್ನ ಅಭಿಪ್ರಾಯವನ್ನು ಸಲ್ಲಿಸಿತು.

ಇತ್ತೀಚೆಗೆ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ಅಧ್ಯಕ್ಷ ನಿತಿನ್ ಗಡ್ಕರಿ ಜಾರ್ಖಂಡ್ ರಾಜ್ಯದಿಂದ ಸ್ಪರ್ಧಿಸಲು ಅಂಶುಮಾನ್ ಮಿಶ್ರಾ ಎಂಬಾತನಿಗೆ ಪಕ್ಷದ ಟಿಕೆಟ್ ಕೊಟ್ಟಿದ್ದ. ಅನಿವಾಸಿ ಭಾರತೀಯನಾದ ಮಿಶ್ರಾನಿಗೂ, ಸಂಘಪರಿವಾರಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಗಡ್ಕರಿ ಆತನಿಗೆ ಪಕ್ಷದ ಟಿಕೆಟ್ ಕೊಟ್ಟದ್ದರ ವಿರುದ್ಧ ಬಿಜೆಪಿಯ ಹಿರಿಯ ನಾಯಕರೇ ಕಿಡಿಕಾರಿದ್ದರು. ಮಿಶ್ರಾನಿಂದ ಹಣ ಪಡೆದೇ ಗಡ್ಕರಿ ಆತನಿಗೆ ಟಿಕೆಟ್ ಕೊಟ್ಟಿದ್ದಾನೆಂದೂ ಪಕ್ಷದ ಚಿಲ್ಲುಪಿಲ್ಲುಗಳು ಆರೋಪಿಸಿದ್ದರು. ಆಗ ವಿಧಿ ಇಲ್ಲದೆ ಮಿಶ್ರಾನಿಗೆ ಕೊಟ್ಟಿದ್ದ ಟಿಕೆಟನ್ನು ವಾಪಸ್ ಪಡೆದಿದ್ದ ಗಡ್ಕರಿ ಅದನ್ನು ಪಕ್ಷದ ಹಿರಿಯ ನಾಯಕ ಎಸ್.ಎಸ್.ಅಹ್ಲುವಾಲಿಯಾ ಅವರಿಗೆ ನೀಡಿದ್ದ. ಆದರೆ ಮಿಶ್ರಾ ನೀಡಲಿದ್ದ ಲಂಚದ ಆಸೆಗೆ ಬಿದ್ದಿದ್ದ ಜಾರ್ಖಂಡ್ ರಾಜ್ಯದ ಬಿಜೆಪಿ ಶಾಸಕರು ಮಿಶ್ರಾನ ಬದಲಾಗಿ ಸ್ಪರ್ಧಿಸಿದ ಅಹ್ಲುವಾಲಿಯಾ ವಿರುದ್ಧವೇ ತಮ್ಮ ಮತ ಚಲಾಯಿಸಿ ಆತ ಸೋಲುವಂತೆ ನೋಡಿಕೊಂಡರು. ಈ ವಿದ್ಯಮಾನ ಈಗ ಬಿಜೆಪಿಯಲ್ಲಿ ಯಾವುದೇ ಆದರ್ಶ, ಸಿದ್ಧಾಂತಕ್ಕೆ ಬೆಲೆ ಇಲ್ಲ, ಬದಲಾಗಿ ಹಣಕ್ಕೆ ಮಾತ್ರ ಮೌಲ್ಯ ಇದೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿತು.


ಇಂತಹ ರೇಜಿಗೆಗಳ ನಡುವೆಯೇ ಕರ್ನಾಟಕದಲ್ಲಿ ಮಾಜಿ ಮುಖ್ಯಮಂತ್ರಿ ಯಡ್ಡಿ ಮತ್ತು ರಾಜಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ವಸುಂಧರ ರಾಜೇ ತಮ್ಮ ಹರಕತ್ತುಗಳನ್ನು ಪ್ರಾರಂಭಿಸಿದ್ದಾರೆ. ಇಲ್ಲಿ ಯಡ್ಡಿ ಬಿಜೆಪಿಯ ಮುಖ್ಯಮಂತ್ರಿ ಸದಾನಂದ ಗೌಡರನ್ನು ಇಳಿಸಿಯೇ ತೀರಬೇಕೆಂದು ಪಣ ತೊಟ್ಟಿದ್ದರೆ ಅತ್ತ ರಾಜಸ್ಥಾನದಲ್ಲಿ ವಸುಂಧರ ರಾಜೆ ಮತ್ತೋರ್ವ ಬಿಜೆಪಿಯ ಮುಖ್ಯಸ್ಥ ಗುಲಾಬ್‌ಚಂದ್ ಕಟಾರಿಯಾ ವಿರುದ್ಧ ಹಲ್ಲು ಮಸಿಯುತ್ತಿದ್ದಾಳೆ. ಇತ್ತ ಯಡ್ಡಿಯನ್ನೂ ನಿಭಾಯಿಸಲಾಗದ, ಅತ್ತ ರಾಜೆಯನ್ನೂ ನಿಯಂತ್ರಿಸಲಾಗದ ಗಡ್ಕರಿಗೆ ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ ಒಂದು ಸವಾಲಾಗಿ ವಕ್ಕರಿಸಿದ್ದಾನೆ. ಗಡ್ಕರಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿರುವ ಮೋದಿ ಪಕ್ಷದ ಆದೇಶಗಳಿಗೆ ಕ್ಯಾರೇ ಅನ್ನುತ್ತಿಲ್ಲ.

ಇದೆಲ್ಲರ ಮಧ್ಯೆ ದೆಹಲಿಯಲ್ಲಿರುವ ಬಿಜೆಪಿಯ ಹೈಕಮಾಂಡ್ ನಾಯಕರೂ ತಮ್ಮ ತಮ್ಮ ನಡುವೆಯೇ ಕಿತ್ತಾಡಿಕೊಳ್ಳುತ್ತಿದ್ದಾರೆ. ಸುಷ್ಮಾ ಸ್ವರಾಜ್ ಮತ್ತು ಅರುಣ್ ಜೈಟ್ಲಿಗೆ ಒಬ್ಬರನ್ನೊಬ್ಬರನ್ನು ಕಂಡರಾಗುವುದಿಲ್ಲ. ಸುಷ್ಮಾ ಸ್ವರಾಜ್ ಮತ್ತು ಅರುಣ್ ಜೈಟ್ಲಿ ಪಕ್ಷದಲ್ಲಿ ಗಟ್ಟಿಗೊಂಡರೆ ತಾನು ಈ ದೇಶದ ಪ್ರಧಾನಿ ಆಗುವ ಕನಸು ನನಸಾಗುವುದಿಲ್ಲ ಎಂಬ ತರ್ಕದಲ್ಲಿರುವ ವೃದ್ಧ ಅಡ್ವಾನಿ ಇವರಿಬ್ಬರ ಜಗಳವನ್ನು ಶಮನ ಮಾಡುವ ಬಗ್ಗೆ ಯೋಚಿಸುತ್ತಲೂ ಇಲ್ಲ.

ಹೀಗೆ ಬಿಜೆಪಿ ಎಂಬ ಪಕ್ಷವು ರಾಷ್ಟ್ರ ಮಟ್ಟದಲ್ಲದೆ, ವಿವಿಧ ರಾಜ್ಯಗಳಲ್ಲೂ ಚಿಂದಿಯಾಗುತ್ತಿದ್ದರೂ, ಅದನ್ನು ತಡೆಯುವಲ್ಲಿ ರಾಷ್ಟ್ರಾಧ್ಯಕ್ಷ ಗಡ್ಕರಿ ವಿಫಲವಾಗಿದ್ದರೂ, ಆತನೇ ಮತ್ತೊಮ್ಮೆ ಬಿಜೆಪಿಯ ರಾಷ್ಟ್ರಾಧ್ಯಕ್ಷನಾಗುವ ಸಾಧ್ಯತೆಗಳು ಕಾಣಿಸುತ್ತಿವೆ.

ಅದಕ್ಕೆ ಕಾರಣ ಬೇರೇನಲ್ಲ, ಗಡ್ಕರಿಗೆ ವೈಯಕ್ತಿಕ ಚಾರಿಸ್ಮಾ ಇಲ್ಲದಿದ್ದರೂ, ಆತನಿಗೆ ಬಿಜೆಪಿಯ ಒಳಗೆ ಬೆಂಬಲ ಇಲ್ಲದಿದ್ದರೂ, ಆತನ ನೇತೃತ್ವದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಕನಸಿನ ಮಾತಾಗಿದ್ದರೂ, ಆತ ಪಕ್ಷದ ಅಧ್ಯಕ್ಷನಾಗಿ ಸಂಪೂರ್ಣವಾಗಿ ಸೋತಿದ್ದರೂ ಆತನೇ ಮತ್ತೆ ಆ ಸ್ಥಾನವನ್ನು ಪಡೆಯುವುದಕ್ಕೆ ಕಾರಣ ಏನೆಂದರೆ ಆತ ಆರೆಸ್ಸೆಸ್ ನಾಯಕರ ಸೇವಕನಾಗಿರುವುದು!

ಜೈ ಚೆಡ್ಡಿ ಮಾತೆ!



ಐಪಿಎಲ್

ಸಂತೆಯಲ್ಲಿ ಕುರಿಗಳನ್ನು ಕೊಳ್ಳುವಂತೆ ತಂಡದ ಮಾಲೀಕರು ಖರೀದಿಸಿದರು. ದುರ್ಲಾಭದ ಲೆಕ್ಕಾಚಾರದ ಹುಚ್ಚು ಹರಾಜಿನಲ್ಲಿ ಆಟಗಾರರ ಬೆಲೆ ನಿಗದಿಯಾಯಿತು. ಉದಾಹರಣೆಗೆ ಈ ಬಾರಿಯ ಹರಾಜಿನಲ್ಲಿ ಗೌತಮ್ ಗಂಭೀರ್ ಎಂಬ ಬ್ಯಾಟ್ಸ್‌ಮನ್ ಸುಮಾರು 9 ಕೋಟಿಗಳಿಗೂ ಅಧಿಕ ಮೊತ್ತಕ್ಕೆ ಹರಾಜಾಗಿದ್ದಾನೆ. ಆಟಗಾರರ ಹರಾಜಿನ ನಂತರದ ಹಂತವೇ ಖಾಸಗಿ ಚಾನೆಲ್‌ಗಳಿಗೆ ಪ್ರಸಾರದ ಹಕ್ಕನ್ನು ನೀಡುವ ಹರಾಜು. 2008 ರಲ್ಲಿ ಸೋನಿ ಎಂಟರ್‌ಟೈನ್‌ಮೆಂಟ್ ಮತ್ತು ಮಾರಿಷಸ್ ಮೂಲದ ಡಬ್ಲ್ಯೂ ಎಸ್ ಗ್ರೂಪ್ ಎಂಬ ಮಾಧ್ಯಮ ಕಂಪನಿಗಳಿಗೆ ಹತ್ತು ವರ್ಷಗಳ (2017ರವರೆಗೆ) ಜಾಗತಿಕ ಪ್ರಸಾರದ ಹಕ್ಕನ್ನು ಮಾರಾಟ ಮಾಡಲಾಯಿತು. ಮಾರಾಟದ ಮೊತ್ತ ಎಷ್ಟು ಗೊತ್ತೆ? ಸುಮಾರು 5300 ಕೋಟಿಗಳು! ಆ ನಂತರ ಈ ವ್ಯವಹಾರದಲ್ಲಿ ಅಕ್ರಮವೆಸಗಿ ಕಡಿಮೆ ಮೊತ್ತವನ್ನು ನಿಗದಿಪಡಿಸಿ ತಮಗೆ ಅನ್ಯಾಯವೆಸಗಿರುವುದಾಗಿ ಆರೋಪಿಸಿ ಕೆಲವರು ಕೇಸು ಜಡಿದರು. ಈ ಕೇಸು ಕೋರ್ಟಿನ ಮೆಟ್ಟಿಲೇರುತ್ತಿದ್ದಂತೆ ಕೆಲವು ತಿಂಗಳುಗಳ ಹಿಂದೆ ಪರಸ್ಪರ ಮಾತುಕತೆ ನಡೆಸಿದ ಉಭಯರು ಹೊಸರೇಟು ಫಿಕ್ಸ್ ಮಾಡಿದರು. ಆ ಹೊಸ ರೇಟು ಬರೋಬ್ಬರಿ 8700 ಕೋಟಿಗಳು!

ಹೀಗೆ ಜಾಗತಿಕ ಮಟ್ಟದ ಪ್ರಸಾರದ ಹಕ್ಕನ್ನು ಪಡೆದುಕೊಂಡ ಕಂಪನಿಗಳು ಬೇರೆಬೇರೆ ದೇಶಗಳಲ್ಲಿ ಟಿವಿ ಪ್ರಸಾರದ ಹಕ್ಕನ್ನು ಬೇರೆಬೇರೆ ಚಾನೆಲ್‌ಗಳಿಗೆ ಮಾರಿಕೊಳ್ಳುತ್ತಾರೆ. ಇಂಥಾ ಮಾರಾಟದಿಂದ ತಾವೂ ಸಾವಿರಾರು ಕೋಟಿಗಳ ಲಾಭವನ್ನು ಬಾಚುತ್ತಾರೆ.

ಜಾಹಿರಾತಿಗಾಗಿಯೇ ರೂಪಿತವಾದ ಐಪಿಎಲ್‌ನಲ್ಲಿ ಮಿಣಗುಡುವ ಕಾಂಚಾಣದ ಕೆಲವು ಸ್ಯಾಂಪಲ್‌ಗಳನ್ನು ನೋಡಿ. ಇಲ್ಲಿ ಎಲ್ಲವೂ ಜಾಹಿರಾತಿಗಾಗಿ ಮಾತ್ರ. ಜಾಹಿರಾತನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಈ ನೀತಿಗೆ ಅನುಗುಣವಾಗಿ ಐಪಿಎಲ್ ಎಂಬ ಮೂರು ಅಕ್ಷರಗಳ ಜೊತೆಗೆ ಡಿಎಲ್‌ಎಫ್ ಎಂಬ ಮೂರು ಅಕ್ಷರಗಳು ಅಂಟಿಕೊಂಡವು. ಹೀಗೆ ಐಪಿಎಲ್ ಜೊತೆಗೆ ತನ್ನ ಹೆಸರನ್ನು ಅಂಟಿಸಲು ದೇಶದ ಬಹುದೊಡ್ಡ ಬಿಲ್ಡರ್ ಕಂಪನಿಯಾದ ಡಿಎಲ್‌ಎಫ್ 250 ಕೋಟಿಗಳನ್ನು ನೀಡಿದೆ. ಹಾಗೆಯೇ ಹೆಂಡದ ದೊರೆ ಮಲ್ಯನ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಲಾಂಛನಗಳನ್ನು ಅಧಿಕೃತ ಅಂಪೈರುಗಳ ದಿರಿಸುಗಳ ಮೇಲೆ ಪ್ರದರ್ಶಿಸಿದ್ದರಿಂದ ಸುಮಾರು 130 ಕೋಟಿಗಳ ಆದಾಯ ಬಂದಿದೆ. ಇದೇ ಸಾಲಿನಲ್ಲಿ ಹೀರೋ ಹೊಂಡಾ, ಪೆಪ್ಸಿಕೊ ಮುಂತಾದ ಕಂಪನಿಗಳ ಲಾಂಛನಗಳ ಪ್ರದರ್ಶನದಿಂದ ಮತ್ತೆ ನೂರಾರು ಕೋಟಿಗಳು ಹರಿದುಬರುತ್ತದೆ. ಆಟಗಾರರ ಶೂಗಳಿಂದ ಹಿಡಿದು ತಲೆಯ ಮೇಲಿನ ಟೋಪಿಯವರೆಗೆ ಎಲ್ಲವನ್ನೂ ಬೇರೆ ಬೇರೆ ಕಂಪನಿಗಳ ಜಾಹಿರಾತು ಆವರಿಸುತ್ತದೆ. ಹಾಗೆ ಕ್ರೀಡಾಂಗಣದ ಜಾಹಿರಾತಿನ ಪ್ರದರ್ಶನ ಹಾಗೂ ಸ್ಥಳೀಯ ಪ್ರಾಯೋಜಕತ್ವದಿಂದಲೂ ಹಣದ ಹೊಳೆ ಹರಿಯುತ್ತದೆ. ಇದೆಲ್ಲದರ ಆಚೆಗೆ ಟಿಕೆಟ್ ಮಾರಾಟ ದಿಂದಲೂ ಹತ್ತಾರು ಕೋಟಿಗಳು ಸಂಗ್ರಹವಾಗುತ್ತದೆ.


ಹೀಗೆ ವಿವಿಧ ಬಾಬ್ತುಗಳಿಂದ ಬರುವ ಆದಾಯವನ್ನು ಕ್ರಿಕೆಟ್ ಮಂಡಳಿ ಮತ್ತು ಫ್ರಾಂಚೈಸಿಗಳು ಹಂಚಿಕೊಳ್ಳುತ್ತವೆ. ಅಲ್ಲದೆ ಹೆಚ್ಚು ಪಂದ್ಯಗಳನ್ನು ಆಡಿ, ಹೆಚ್ಚು ಹೊತ್ತು ಟಿವಿಗಳಲ್ಲಿ ಕಾಣಿಸಿಕೊಳ್ಳುವ ಕಂಪನಿಯು ಹೆಚ್ಚು ಲಾಭವನ್ನು ಜಾಹಿರಾತುಗಳ ಮೂಲಕ ಪಡೆದು ಕೋಟಿಗಳನ್ನು ಬಾಚುತ್ತದೆ. ಇಲ್ಲಿ ಆಟದ ಬಿಟ್ಟು ಸೋತದ್ದು ಯಾರು ಅಥವಾ ಗೆಲ್ಲುವುದು ಯಾರು ಎಂಬುದು ಮುಖ್ಯ ಅಲ್ಲವೇ ಅಲ್ಲ.

ಹೀಗೆ ಹಣದ ಹೊಳೆಯನ್ನು ಹರಿಸುತ್ತಿರುವ ಐಪಿಎಲ್‌ನ ಫ್ರಾಂಚೈಸಿಗಳ ಮೌಲ್ಯ ಗಗನಕ್ಕೇರಿದೆ. 2008 ರಲ್ಲಿ ಅತಿಹೆಚ್ಚು ಮೊತ್ತದ ಬಿಡ್ ಪಡೆದಿದ್ದ ಮುಂಬೈ ತಂಡ ಹತ್ತು ವರ್ಷಗಳಲ್ಲಿ ಪಾವತಿಸಬೇಕಿದ್ದ ಮೊತ್ತ ಸುಮಾರು 112 ಮಿಲಿಯನ್ ಡಾಲರ್‌ಗಳು ಅಥವಾ 56 ಕೋಟಿಗಳು. ಆದರೆ 2012ರಲ್ಲಿ ಫ್ರಾಂಚೈಸಿ ಪಡೆದುಕೊಳ್ಳಲು ಆದರ ಎಷ್ಟು ಪಟ್ಟು ಹಣ ತರಬೇಕೆಂಬುದು ನಮ್ಮ ಊಹೆಗೂ ನಿಲುಕುವುದಿಲ್ಲ. ಹೊಸದಾಗಿ ಫ್ರಾಂಚೈಸಿ ಪಡೆದುಕೊಂಡ ಕೊಚ್ಚಿ ಟಸ್ಕರ್ಸ್‌ನ ಬಿಡ್ 1500 ಕೋಟಿಗಳಾಗಿದ್ದರೆ, ಪುಣೆ ವಾರಿಯರ್ಸ್‌ನ ಬಿಡ್ ಮೊತ್ತ ಸುಮಾರು 1650 ಕೋಟಿಗಳು! ನೆನಪಿಡಿ, ಈ ಮೊತ್ತ ಕೇವಲ ಫ್ರಾಂಚೈಸಿ ಪಡೆದುಕೊಳ್ಳಲಿಕ್ಕಾಗಿ ಮಾತ್ರ. ಆಟಗಾರರನ್ನು ಖರೀದಿಸು ವುದು ಮುಂತಾದ ವೆಚ್ಚಗಳು ಪ್ರತ್ಯೇಕ. ಈಗ ಒಂದು ಪ್ರಶ್ನೆ, ಸಾವಿರಾರು ಕೋಟಿಗಳನ್ನು ಹೀಗೆ ಐಪಿಎಲ್ ತಂಡಗಳಿ ಗಾಗಿ ಬಂಡವಾಳಿಗರು ಸುರಿಯಲು ಮುಗಿಬಿದ್ದಿರುವುದಕ್ಕೆ ಅಪಾರ ಪ್ರಮಾಣದ ಲಾಭದ ಲೆಕ್ಕಾಚಾರವಲ್ಲದೆ ಬೇರೆ ಏನು ಕಾರಣವಿರಲು ಸಾಧ್ಯ?

ಆದರೆ ಐಪಿಎಲ್ ಹಾಗೂ ಫ್ರಾಂಚೈಸಿಗಳು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ಲೆಕ್ಕಪತ್ರಗಳು ಬೇರೆಯದೇ ಕತೆ ಹೇಳುತ್ತವೆ. ಆ ಪ್ರಕಾರ ಒಂದೋ ಕಂಪನಿಗಳು ನಷ್ಟದಲ್ಲಿವೆ ಅಥವಾ ಅಲ್ಪ ಪ್ರಮಾಣದ ಲಾಭವನ್ನಷ್ಟೇ ಮಾಡುತ್ತಿವೆಯಂತೆ. ಅಷ್ಟು ಮಾತ್ರವಲ್ಲದೆ ನಮ್ಮ ಘನ ಸರ್ಕಾರ ಕ್ರೀಡೆಗೆ ಉತ್ತೇಜನ ನೀಡುವ ಹೆಸರಿನಲ್ಲಿ ಈ ದಂಧೆಯನ್ನು ತೆರಿಗೆ ಮುಕ್ತಗೊಳಿಸಿದೆ. ಇದರಿಂದ ತೆರಿಗೆ ಕಟ್ಟಲು ಮೊದಲೇ ತೂಕಡಿಸುತ್ತಿದ್ದವರಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ. ನಮ್ಮ ದೇಶದ ಅಭಿವೃದ್ಧಿಗೆ ಜೊತೆಜೊತೆಯೇ ಕ್ರೀಡೆಯ ಅಭಿವೃದ್ಧಿಯೂ ಆಗುತ್ತಿದೆ ಅಲ್ಲವೆ?

ಚೆಡ್ಡಿ ಸಂತೋಷ್ ವಿರುದ್ಧ ಯಡ್ಡಿ ಗುಡುಗು

ಮೊನ್ನೆ ಮೊನ್ನೆಯ ತನಕ ರಾಜ್ಯ ಬಿಜೆಪಿಯನ್ನು, ಸದಾನಂದ ಗೌಡರ ಸರ್ಕಾರವನ್ನು ಮತ್ತು ದೆಹಲಿಯಲ್ಲಿರುವ ಬಿಜೆಪಿ ಹೈಕಮಾಂಡ್‌ನ್ನೇ ತನ್ನ ಮುಷ್ಠಿಯಲ್ಲಿಟ್ಟುಕೊಂಡು ಸರ್ವಾಧಿಕಾರಿಯಂತೆ ಮೆರೆಯುತ್ತಿದ್ದ ಯಡಿಯೂರಪ್ಪ ಈಗ ಪಕ್ಷದೊಳಗೇ ಏಕಾಂಗಿಯಾಗಿದ್ದಾರೆ. ನಿನ್ನೆಯ ಶತ್ರುಗಳು ಅವರ ಪಾಲಿಗೆ ಇಂದಿನ ಮಿತ್ರರು, ಹಾಗೆಯೇ ನಿನ್ನೆಯ ಮಿತ್ರರು ಇಂದಿನ ಶತ್ರುಗಳಾಗಿದ್ದಾರೆ. ಉದಾಹರಣೆಗೆ ಒಂದು ಕಾಲದಲ್ಲಿ ಯಡ್ಡಿಯ ಆತ್ಮೀಯರಾಗಿದ್ದ ಸದಾನಂದ ಗೌಡ ಈಗ ಅವರ ಪಕ್ಕಾ ವಿರೋಧಿಯಾಗಿದ್ದಾರೆ. ಯಡ್ಡಿಯ ಶಿವಮೊಗ್ಗ ಜಿಲ್ಲೆಯವರೇ ಆದ, ಯಡ್ಡಿಯ ನೆರಳಿನಂತಿದ್ದ ಈಶ್ವರಪ್ಪ ಈಗ ಯಡ್ಡಿ ವಿರೋಧಿ ಬಣದ ದಂಡನಾಯಕರಾಗಿದ್ದಾರೆ. ಈ ಮಧ್ಯೆ ಯಡ್ಡಿ ತನ್ನ ಸಾಂಪ್ರದಾಯಿಕ ಕಡುವೈರಿಯೆಂದೇ ಭಾವಿಸಿದ್ದ ಜಗದೀಶ್ ಶೆಟ್ಟರ್ ಈಗ ಯಡ್ಡಿಯ ಖಾಸಾ ದೋಸ್ತ್ ಆಗಿದ್ದಾರೆ. ಹೀಗೆ ಯಡ್ಡಿ ವಿಷಯದಲ್ಲಿ ಅವರ ಆತ್ಮೀಯರ ಮತ್ತು ಶತ್ರುಗಳ ಸ್ಥಾನಪಲ್ಲಟ ಆಗುತ್ತಲೇ ಇದೆ. ಅಂತಹ ಗುಂಪಿಗೆ ಹೊಸದಾದ ಸೇರ್ಪಡೆಯೆಂದರೆ ರಾಜ್ಯ ಸಂಘಟನಾ ಕಾರ್ಯದರ್ಶಿ ಸಂತೋಷ್.




ಸಂತೋಷ್ ಅವರನ್ನು ಯಾವುದೇ ಕಾರಣಕ್ಕೆ ಎಂ.ಎಲ್.ಸಿ.ಯಾಗಿ ನಾಮಕರಣ ಮಾಡಬಾರದು ಎಂದು ಯಡಿಯೂರಪ್ಪನವರು ಮೊನ್ನೆ ಹೈಕಮಾಂಡ್ ಬಳಿ ಆರ್ಭಟಿಸಿದ್ದಾರೆ. ಒಂದುವೇಳೆ ಶಾಸಕಾಂಗ ನಾಯಕತ್ವದಲ್ಲಿ - ಅಂದರೆ ಮುಖ್ಯಮಂತ್ರಿಯ ಸ್ಥಾನ - ಬದಲಾವಣೆಯಾಗದಿದ್ದರೂ ಪರವಾಗಿಲ್ಲ, ಆದರೆ ಯಾವುದೇ ಕಾರಣಕ್ಕೂ ಸಂತೋಷ್ ಅವರನ್ನು ಮಾತ್ರ ವಿಧಾನ ಪರಿಷತ್ ಸದಸ್ಯರಾಗಿ ಮಾಡಲೇಬಾರದು ಎಂದು ಯಡ್ಡಿ ಶರತ್ತು ವಿಧಿಸಿದ್ದನ್ನು ನೋಡಿ ಬಿಜೆಪಿ ಪಾಳೆಯದಲ್ಲಿ ಹೊಸ ಗೊಂದಲ ಸೃಷ್ಟಿಯಾಗಿದೆ.

ರಾಜ್ಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಬೇರೆ ಯಾರೂ ಅಲ್ಲ, ಎಂಟು ತಿಂಗಳುಗಳ ಹಿಂದೆ ಯಡ್ಡಿ ಅಧಿಕಾರದಿಂದ ಇಳಿಯುವತನಕ ಅವರ ಥಿಂಕ್ ಟ್ಯಾಂಕ್‌ನ ಪ್ರಮುಖ ಸದಸ್ಯರಾಗಿದ್ದವರು ಇದೇ ಸಂತೋಷ್. ಎಷ್ಟೋ ವಿಷಯಗಳಲ್ಲಿ ಸಂತೋಷ್ ಹಾಕಿದ ಗೆರೆಯನ್ನು ಯಡಿಯೂರಪ್ಪ ದಾಟುತ್ತಿರಲಿಲ್ಲ. ಅಷ್ಟೇ ಅಲ್ಲ, ಸಂತೋಷ್ ಅವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದವರೂ ಇದೇ ಯಡಿಯೂರಪ್ಪನವರೆ.

ಅದಕ್ಕೆ ಕಾರಣವೂ ಇತ್ತು, ಶಿವಮೊಗ್ಗದವರೇ ಆದ ಸಂತೋಷ್ ಈ ಹುದ್ದೆಯನ್ನು ಅಲಂಕರಿಸಿದರೆ ತಮಗೆ ರಾಜ್ಯಭಾರ ನಡೆಸಲು ಸುಲಭವಾಗುತ್ತದೆ ಎಂಬುದು ಯಡ್ಡಿಯ ಲೆಕ್ಕಾಚಾರವಾಗಿತ್ತು. ಆದರೆ ಇವತ್ತು ಅಂತಹ ಸಂತೋಷ್‌ರನ್ನು ವಿಧಾನ ಪರಿಷತ್ತಿಗೆ ನೇಮಿಸಬಾರದೆಂದು ಯಡ್ಡಿ ಹೇಳುತ್ತಿರುವುದಕ್ಕೆ ಕಾರಣವೇನು ಎಂದು ಬಿಜೆಪಿ ವಲಯದಲ್ಲಿ ಚರ್ಚೆಯಾಗುತ್ತಿದೆ.

ಯಡಿಯೂರಪ್ಪ ಭ್ರಷ್ಟಾಚಾರದ ಆಪಾದನೆ ಹೊತ್ತು ಅಧಿಕಾರದಿಂದ ಇಳಿಯಬೇಕಾದ ಸಂದರ್ಭದ ತನಕ ಯಡಿಯೂರಪ್ಪನವರಿಗೆ ಹೆಗಲಿಗೆ ಹೆಗಲು ಕೊಟ್ಟು ಪಕ್ಷವನ್ನು ಸಂಘಟಿಸುವಲ್ಲಿ ಸಂತೋಷ್ ಮಹತ್ತರ ಪಾತ್ರ ವಹಿಸಿದ್ದರು. ಅಷ್ಟೇ ಅಲ್ಲ, ಯಡ್ಡಿ ಮತ್ತು ಸಂತೋಷ್ ನಡುವೆ ಒಳ್ಳೆಯ ಸಂಬಂಧವಿತ್ತು, ಅನೇಕ ಸಮಸ್ಯೆಗಳನ್ನು ಇವರಿಬ್ಬರೂ ಅತ್ಯಂತ ಜಾಣ್ಮೆಯಿಂದ ನಿಭಾಯಿಸಿದ್ದೂ ಉಂಟು. ಮೂಲತಃ ಆರೆಸ್ಸೆಸ್ ಕಾರ್ಯಕರ್ತನಾದ ಸಂತೋಷ್ ಪಕ್ಷದ ಸಂಘಟನೆಯಲ್ಲಿ ಎತ್ತಿದ ಕೈ. ಹೇಗೆ ಯಡಿಯೂರಪ್ಪನವರಿಗೆ ಮಂತ್ರಿಮಂಡಲದಲ್ಲಿ ಮಂತ್ರಿಗಳು ಹೆದರುತ್ತಿದ್ದರೋ ಅದೇ ರೀತಿ ಬಿಜೆಪಿಯ ಜಿಲ್ಲಾ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕೂಡ ಸಂತೋಷ್ ಹೆಸರನ್ನು ಕೇಳಿದಾಕ್ಷಣ ಗಡಗಡನೆ ನಡುಗುತ್ತಿದ್ದರು. ಹೀಗಾಗಿ ಯಡ್ಡಿ ಮತ್ತು ಸಂತೋಷ್ ಕಾಂಬಿನೇಷನ್‌ನಲ್ಲಿ ಸರ್ಕಾರ ಮತ್ತು ಪಕ್ಷದ ನಡುವೆ ಸೌಹಾರ್ದಯುತವಾದ ಸಂಬಂಧ ಬೆಳೆದು ಸರ್ಕಾರ ಸರಾಗವಾಗಿ ನಡೆಯಲು ಸಹಕಾರಿಯಾಗಿತ್ತು.



ಆದರೆ ಯಾವಾಗ ಯಡಿಯೂರಪ್ಪನವರ ಮೇಲೆ ಟನ್ನುಗಟ್ಟಲೆ ಭ್ರಷ್ಟಾಚಾರದ ಆಪಾದನೆ ಬರಲಾರಂಭಿಸಿದವೋ ಆಗ ನಿಧಾನವಾಗಿ ಸಂತೋಷ್ ಯಡ್ಡಿಯಿಂದ ದೂರವಾಗಲಾರಂಭಿಸಿದರು. ಅಷ್ಟೇ ಅಲ್ಲ, ಬಿಜೆಪಿ ಶಾಸಕರಿರುವ ಕ್ಷೇತ್ರಗಳಲ್ಲಿ ಆದರಲ್ಲೂ ಮುಖ್ಯವಾಗಿ ಯಡಿಯೂರಪ್ಪನವರ ಹಿಂಬಾಲಕರು ಶಾಸಕರಾಗಿರುವ ಕ್ಷೇತ್ರಗಳಲ್ಲಿ ಸಂತೋಷ್ ತಾಲ್ಲೂಕು ಬಿಜೆಪಿ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ನೀಡುತ್ತ ಶಾಸಕರನ್ನು ಮೂಲೆಗುಂಪು ಮಾಡಲಾರಂಭಿಸಿದರು. ಇದರ ಹಿಂದಿನ ತಂತ್ರ ಇಷ್ಟೇ: ಪಕ್ಷ ಗಟ್ಟಿಯಾಗಬೇಕು, ಯಡ್ಡಿ ನಿಶ್ಯಕ್ತರಾಗಬೇಕು. ಯಾವಾಗ ಸಂತೋಷ್ ಪಕ್ಷದ ಸಂಘಟನೆಯ ನೆಪದಲ್ಲಿ ಯಡ್ಡಿಯನ್ನು ನಿಶ್ಯಕ್ತರನ್ನಾಗಿ ಮಾಡಲು ಹೊರಟರೋ ಆಗ ಯಡ್ಡಿಗೆ ಸಂತೋಷ್ ಮೇಲೆ ಸಿಟ್ಟು ಬರಲಾರಂಭಿಸಿತು.

ಆದರೆ ಆಗಿನ್ನೂ ಅಧಿಕಾರದ ಅಮಲೇರಿಸಿಕೊಂಡಿದ್ದ ಯಡ್ಡಿ ಎಲ್ಲವನ್ನು ಅಷ್ಟೊಂದು ಗಂಭೀರವಾಗಿ ಲೆಕ್ಕಿಸದೆ ಪ್ರತಿ ಹೆಜ್ಜೆಹೆಜ್ಜೆಗೂ ಸಂತೋಷ್‌ರವರ ಮಾರ್ಗದರ್ಶನ ಮತ್ತು ಸಹಕಾರದೊಂದಿಗೆ ಸರಕಾರ ನಡೆಸುತ್ತಲೇ ಇದ್ದರು. ಆದರೆ ಸಂತೋಷ್ ತನಗೆ ಪ್ರತಿಸ್ಪರ್ಧಿಯಾಗಿ ಪಕ್ಷದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿದ್ದಾರೆ ಎಂದು ಯಡ್ಡಿಗೆ ಗೊತ್ತಾಗಿದ್ದೇ ತಾನು ಅಧಿಕಾರವನ್ನು ತ್ಯಾಗ ಮಾಡಬೇಕಾದ ಸಂದರ್ಭದಲ್ಲಿ.

ಯಡಿಯೂರಪ್ಪ ಮುಖ್ಯಮಂತ್ರಿ ಗದ್ದುಗೆಯಿಂದ ಇಳಿಯುವುದು ಖಚಿತವಾಗುತ್ತಿದ್ದಂತೆ ಅವರ ಸ್ಥಾನದಲ್ಲಿ ಯಾರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂಬ ಚರ್ಚೆ ಆರೆಸ್ಸೆಸ್ ವಲಯದಲ್ಲಿ ಪ್ರಾರಂಭವಾಯಿತು. ಅಂತಹ ಒಂದು ಚರ್ಚೆಯು ಗುಟ್ಟಾಗಿ ನಡೆದು ಆ ಸಭೆಯಲ್ಲಿ ಆರೆಸ್ಸೆಸ್ ಮುಖಂಡರು, ಸಂತೋಷ್, ಈಶ್ವರಪ್ಪ ಮತ್ತು ರಾಷ್ಟ್ರಮಟ್ಟದ ಇನ್ನಿಬ್ಬರು ನಾಯಕರು ಮಾತ್ರ ಭಾಗವಹಿಸಿದ್ದರು. ಆಶ್ಚರ್ಯವೆಂದರೆ ಆ ಸಭೆಯಲ್ಲಿ ಯಡ್ಡಿಯ ಸ್ಥಾನವನ್ನು ಸಮರ್ಪಕವಾಗಿ ತುಂಬಲು ಸಂತೋಷ್‌ರವರಿಂದ ಮಾತ್ರ ಸಾಧ್ಯ ಎಂಬ ಮಾತು ಅನೇಕ ಬಾರಿ ಪ್ರಸ್ತಾಪವಾಯಿತು. ಅಷ್ಟೇ ಅಲ್ಲ, ರಾಷ್ಟ್ರೀಯ ಮುಖಂಡರೂ ಸಂತೋಷ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರೆ ಅವರು 'ಕರ್ನಾಟಕದ ನರೇಂದ್ರ ಮೋದಿ'ಯಾಗಿ ಬೆಳೆಯುತ್ತಾರೆ ಎಂಬ ಭವಿಷ್ಯವನ್ನೂ ಆರೆಸ್ಸೆಸ್ ಮತ್ತು ಕೇಂದ್ರ ನಾಯಕರು ನುಡಿದಿದ್ದರು. ಸಂತೋಷ್ ಅವರಿಂದಾಗಿ ರಾಜ್ಯದಲ್ಲಿ ಕಳೆದುಹೋದ ಪಕ್ಷದ ವರ್ಚಸ್ಸು ಮತ್ತೆ ದೊರಕಿದಂತಾಗುತ್ತದೆ ಮತ್ತು ಮುಂದಿನ ಚುನಾವಣೆಯಲ್ಲೂ ಬಿಜೆಪಿ ಮತ್ತೆ ಭಾರೀ ಬಹುಮತದಿಂದ ಗೆಲ್ಲಲು ಸಹಕಾರಿಯಾಗುತ್ತದೆ ಎಂಬಿತ್ಯಾದಿಯಾಗಿಯೂ ಅಂದು ಚರ್ಚೆಯಾಯಿತು.

ಈ ಸುದ್ದಿ ಯಡಿಯೂರಪ್ಪನವರ ಕಿವಿಗೆ ಬಿದ್ದಿದ್ದೇ ತಡ, ಅವರು ಕೆಂಡಮಂಡಲವಾದರು. ತನ್ನ ಜಿಲ್ಲೆಯವರೇ ಆದ ಸಂತೋಷ್ ಶಾಸಕನಲ್ಲದಿದ್ದರೂ ನೇರವಾಗಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವ ವಿಚಾರ ಯಡ್ಡಿಯ ನಿದ್ದೆಯನ್ನು ಕೆಡಿಸಿತು. ಬರೀ ತಮ್ಮ ಶಿವಮೊಗ್ಗ ಜಿಲ್ಲೆಯವರು ಮಾತ್ರವಲ್ಲ, ಬ್ರಾಹ್ಮಣ ಜನಾಂಗಕ್ಕೆ ಸೇರಿದ ಈ ಸಂತೋಷ್ ಯಾವ ಕಾರಣಕ್ಕೂ ಆರೆಸ್ಸೆಸ್‌ನಿಂದ ಹೊರಬಂದು ಬಿಜೆಪಿ ಸರ್ಕಾರದ ಆಯಕಟ್ಟಿನ ಜಾಗದಲ್ಲಿ ಇರಲೇಬಾರದು ಎಂದು ಆ ದಿನವೇ ಯಡಿಯೂರಪ್ಪ ಪ್ರತಿಜ್ಞೆ ಮಾಡಿದರು.

ಈ ಕಾರಣಕ್ಕಾಗಿಯೇ ತನ್ನ ಜಿಲ್ಲೆಯವರಾದ ಸಂತೋಷ್ ಮತ್ತು ತನ್ನ ಜನಾಂಗದವರಾದ ಶೆಟ್ಟರ್ ಬದಲಿಗೆ ಮಂಗಳೂರಿನ ಬಡಪಾಯಿ ಸದಾನಂದ ಗೌಡರನ್ನು ಅತ್ಯಂತ ಜಾಣ್ಮೆಯಿಂದ ಯಡ್ಡಿ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳ್ಳಿರಿಸಿ ನೆಮ್ಮದಿಯ ನಿಟ್ಟುಸಿರು ಬಿಟ್ಟದ್ದು.

ಇದೆಲ್ಲ ನಡೆದದ್ದು ಎಂಟು ತಿಂಗಳ ಹಿಂದೆ. ಅದಾಗಿ ಈಗ ರಾಜ್ಯ ಬಿಜೆಪಿಯಲ್ಲಿ ಹಲವಾರು ಬದಲಾವಣೆಗಳು ನಡೆದಿವೆ. ಈಗ ಯಡ್ಡಿ ಜೈಲಿನತ್ತ ಮುಖ ಮಾಡಿ ನಿಂತಿದ್ದಾರೆ. ಆದರೂ ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ವಿಧಾನಪರಿಷತ್ ನಾಮಕರಣ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಸಂತೋಷ್‌ರವರನ್ನು ನಾಮಕರಣ ಮಾಡಬಾರದು ಎಂದು ಯಡ್ಡಿ ಅಬ್ಬರಿಸುತ್ತಿದ್ದಾರೆ.

ಇದಕ್ಕೆ ಇನ್ನೊಂದು ಕಾರಣವೂ ಇದೆ. ಯಡ್ಡಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ನಂತರ ಸರಕಾರದ ಕೆಲಸಗಳನ್ನು ಸುಸೂತ್ರವಾಗಿ ನಡೆಸುವ ಕುರಿತು ನಡೆಯುತ್ತಿದ್ದ ಉನ್ನತ ಮಟ್ಟದ ಸಭೆಗಳಲ್ಲಿ ಸದಾನಂದ ಗೌಡ, ಈಶ್ವರಪ್ಪ ಮತ್ತು ಸಂತೋಷ್ - ಈ ತ್ರಿಮೂರ್ತಿಗಳು ಮಾತ್ರ ಭಾಗವಹಿಸುತ್ತಿದ್ದರು. ಯಾವುದೇ ಕಾರಣಕ್ಕೂ ಈ ತ್ರಿಮೂರ್ತಿಗಳು ಸುಮಾರು 40 ವರ್ಷಗಳ ಕಾಲ ಪಕ್ಷವನ್ನು ಕಟ್ಟಿ ಬೆಳೆಸಿದ ಯಡಿಯೂರಪ್ಪನೊಂದಿಗೆ ಯಾವುದೇ ವಿಷಯವನ್ನು ಚರ್ಚಿಸುತ್ತಲೇ ಇರಲಿಲ್ಲ. ಅಂದರೆ ಒಂದು ಕಾಲದ ಈ ಮಿತ್ರರು ಈಗ ಜಂಟಿಯಾಗಿ ತನ್ನ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ ಎಂಬ ತೀರ್ಮಾನಕ್ಕೆ ಯಡಿಯೂರಪ್ಪ ಬಂದರು. ಒಂದು ವೇಳೆ ಸಂತೋಷ್ ವಿಧಾನ ಪರಿಷತ್ ಸದಸ್ಯರಾಗಿ ನಾಮಕರಣಗೊಂಡರೆ ಆತ ಖಂಡಿತವಾಗಿಯೂ ಸದಾನಂದ ಗೌಡರ ಮಂತ್ರಿಮಂಡಲದಲ್ಲಿ ಸ್ಥಾನವನ್ನು ಗಿಟ್ಟಿಸುತ್ತಾರೆ ಎಂಬುದು ಯಡ್ಡಿಯ ಲೆಕ್ಕಾಚಾರ. ಅದು ಒಂದು ರೀತಿಯಲ್ಲಿ ನಿಜವೂ ಹೌದು. ಡಾ. ವಿ.ಎಸ್. ಆಚಾರ್ಯರ ನಿಧನದ ನಂತರ ಸದಾನಂದ ಗೌಡರಿಗೆ ಮಾರ್ಗದರ್ಶನ ನೀಡುವಂತಹ ಮಂತ್ರಿಗಳು ಯಾರೂ ಇಲ್ಲ ಅವರ ಸಂಪುಟದಲ್ಲಿ. ಅಲ್ಲೊಮ್ಮೆ, ಇಲ್ಲೊಮ್ಮೆ ಸುರೇಶ್‌ಕುಮಾರ್ ಸದಾನಂದ ಗೌಡರ ಬಲಗೈ ಬಂಟರಂತೆ ಮಾರ್ಗದರ್ಶನ ನೀಡುವುದು ಕಾಣಿಸುತ್ತಿದ್ದರೂ ಆಚಾರ್ಯರಷ್ಟು ನಂಬಿಕೆಯ ವ್ಯಕ್ತಿ ಗೌಡರ ಬಳಿ ಯಾರೂ ಇಲ್ಲ. ಅಂದರೆ ನಾಳೆ ಸಂತೋಷ್ ಮಂತ್ರಿಯಾದರೆ ಸರಕಾರವನ್ನು ನಡೆಸುವಲ್ಲಿ ಕೂಡ ಸದಾನಂದ ಗೌಡರ ಜೊತೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತಾರೆ. ಆ ಮೂಲಕ ಗೌಡರ ಸರ್ಕಾರ ಭದ್ರವಾಗಲಿದೆ ಎಂಬುದು ಯಡ್ಡಿಯಲ್ಲಿ ನಡುಕ ಹುಟ್ಟಿಸಿದೆ. ಸಂತೋಷ್ ಮಂತ್ರಿಯಾದರೆ ಆತ ಸರಕಾರ ಮತ್ತು ಪಕ್ಷ ಎರಡರ ಮೇಲೆಯೂ ಏಕಪ್ರಕಾರವಾಗಿ ಹತೋಟಿ ಸಾಧಿಸುತ್ತ ಮುಂಬರುವ ದಿನಗಳಲ್ಲಿ ತನ್ನ ಅಸ್ತಿತ್ವಕ್ಕೆ ಅಪಾಯ ತರಲಿದ್ದಾರೆ ಎಂಬ ವಾಸನೆ ಯಡ್ಡಿ ಮೂಗಿಗೆ ಬಡಿದಿದೆ. ಈ ಕಾರಣಕ್ಕಾಗಿಯೇ ಯಾವ ಕಾರಣಕ್ಕೂ ಸಂತೋಷ್‌ರವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಬಾರದು ಎಂದು ಯಡ್ಡಿ ಹಠ ಹಿಡಿದಿರುವುದು.


ಸಂತೋಷ್ ಒಳ್ಳೆಯ ಸಂಘಟಕ ಎಂಬುದರಲ್ಲಿ ಎರಡು ಮಾತಿಲ್ಲ. ರಾಜ್ಯಮಟ್ಟದಲ್ಲಿ ಪಕ್ಷದ ಆಗುಹೋಗುಗಳಲ್ಲಿ ಇವರ ಮಾತೇ ಈಗ ವೇದವಾಕ್ಯವಾಗಿದೆ. ಆದರೆ ಇತ್ತೀಚೆಗೆ ಕೆಲವು ಶಾಸಕರನ್ನೂ ಕೂಡ ಸಂತೋಷ್ ಪರೋಕ್ಷವಾಗಿ ಹದ್ದುಬಸ್ತಿನಲ್ಲಿಡಲು ಆರಂಭಿಸಿದ್ದಾರೆ. ಬಹುಶಃ ಇದು ಕೇಂದ್ರದ ನಾಯಕರ ಸೂಚನೆಯ ಮೇರೆಗೆ ನಡೆಯುತ್ತಿರಲೂಬಹುದು. ಆದರೆ ಸಂತೋಷ್‌ರ ಈ ಹೊಸ ಕಸರತ್ತು ಹಲವು ಬಿಜೆಪಿ ಶಾಸಕರಲ್ಲಿ ಅಸಮಾಧಾನವನ್ನು ಹುಟ್ಟು ಹಾಕಿದೆ. ಪಕ್ಕಾ ಆರೆಸ್ಸೆಸ್ ಕ್ಯಾಡರ್‌ನಿಂದ ಬಂದಂತಹ ಶಾಸಕರು ಸಂತೋಷ್ ಅವರ ಕಾರ್ಯವೈಖರಿ ಬಗ್ಗೆ ಖುಷಿಯಾಗಿದ್ದರೆ, ಆಪರೇಷನ್ ಕಮಲದಿಂದ ಬಿಜೆಪಿಗೆ ವಲಸೆ ಬಂದಿರುವ ಶಾಸಕರೆಲ್ಲ ಸಂತೋಷ್‌ರ ಈ ಕಿರಿಕಿರಿಯಿಂದ ಬೇಸತ್ತಿದ್ದಾರೆ.. ಇತ್ತೀಚೆಗಂತೂ ಅನೇಕ ಶಾಸಕರಿಗೆ 'ನೀವು ಇದೇ ರೀತಿ ಮುಂದುವರಿದರೆ ಮುಂಬರುವ ಚುನಾವಣೆಯಲ್ಲಿ ನಿಮಗೆ ಟಿಕೆಟ್ ಕೊಡಲಾಗುವುದಿಲ್ಲ' ಎಂದು ಕೂಡ ಸಂತೋಷ್ ಹೇಳಿದ್ದಾರಂತೆ. ಹೀಗಾಗಿ ಈಗ ಶಾಸಕರೆಲ್ಲ ಸಂತೋಷ್ ಹೆಸರು ಕೇಳಿದಾಕ್ಷಣ ಬಹಳ ಗೌರವ ಮತ್ತು ಮರ್ಯಾದೆಯಿಂದ ನಡೆದುಕೊಳ್ಳುತ್ತಾರೆ. ಈತನಕ ಅಂತಹ ಗೌರವ ಸಿಗುತ್ತಿದ್ದುದು ಯಡಿಯೂರಪ್ಪನವರಿಗೆ ಮಾತ್ರ. ತನಗೆ ಸಮಾನಾಂತರವಾಗಿ ಮತ್ತೊಬ್ಬ ನಾಯಕ ಪಕ್ಷದಲ್ಲಿ ಹುಟ್ಟಿಕೊಂಡಿರುವುದನ್ನು ನೋಡಿ ಯಡ್ಡಿ ಕೆಂಡಾಮಂಡಲವಾಗಿದ್ದಾರೆ. ಹೀಗಾಗಿ ಸಂತೋಷ್ ಪಕ್ಷದ ವೇದಿಕೆಯಿಂದ ವಿಧಾನಸಭೆಯ ಆಖಾಡಕ್ಕೆ ಹಾರದಂತೆ ನೋಡಿಕೊಳ್ಳುವುದಕ್ಕೆ ಯಡ್ಡಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ.

ಯಡಿಯೂರಪ್ಪನ ವಿರೋಧದ ನಡುವೆಯೇ ಸಂತೋಷ್ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದರೆ ಅದು ಖಂಡಿತವಾಗಿಯೂ ಸದಾನಂದ ಗೌಡರು ಮತ್ತು ಈಶ್ವರಪ್ಪ ಬಣದ ಜಯವಾಗುತ್ತದೆ. ಅಷ್ಟೇ ಅಲ್ಲ, ಅಧಿಕಾರವನ್ನು ಸದಾನಂದ ಗೌಡರಿಗೆ ಬಿಟ್ಟುಕೊಟ್ಟ ಯಡ್ಡಿಗೆ ನುಂಗಲಾರದ ತುತ್ತಾಗುತ್ತದೆ.

ಯಡಿಯೂರಪ್ಪನವರ ಕಪಿಮುಷ್ಟಿಯಲ್ಲಿದ್ದ ಸರ್ಕಾರ ಮತ್ತು ಅವರ ಹಿಂಬಾಲಕರನ್ನು ಸಂಘಪರಿವಾರ ತುಂಬಾ ಜಾಣ್ಮೆಯಿಂದ ಸಂತೋಷ್ ಮುಖಾಂತರ ಹಾದಿಗೆ ತರಲು ಯತ್ನಿಸುತ್ತಿದೆ. ಇದು ಬಿಜೆಪಿ ಪಕ್ಷ ಮತ್ತು ಆರೆಸ್ಸೆಸ್ ವಲಯದ ಟಾಪ್ ಲೆವೆಲ್ ನಾಯಕರ ತಂತ್ರಗಾರಿಕೆ. ಈ ನಾಯಕರ ತಂತ್ರಗಾರಿಕೆಯ ಚಕ್ರವ್ಯೂಹದಲ್ಲಿ ಯಡಿಯೂರಪ್ಪ ಸಿಲುಕಿಬೀಳುತ್ತಾರೋ ಅಥವಾ ಗಾಯಗೊಂಡ ಒಂಟಿ ಸಲಗದಂತೆ ಪಕ್ಷಕ್ಕೆ ಇನ್ನೂ ಹೆಚ್ಚಿನ ನಷ್ಟ ಮಾಡುತ್ತಾರೋ ಕಾದು ನೋಡಬೇಕು. -ಶ್ರೆಗೈ

• ಮಾರಿಷಸ್ ರಹಸ್ಯ ಬ್ಯಾಂಕ್ ಅಕೌಂಟ್
• ಚೀನಾದ ಹೋಟೆಲ್

ಕಂಬಿ ಎಣಿಸುವ ಮುನ್ನ



ಕಂಗಾಲಾದ ಯಡ್ಡಿ

ಅಕ್ರಮ ಗಣಿಗಾರಿಕೆಯ ಕುಣಿಕೆಯಿಂದ ಯಡ್ಡಿ ಬಚಾವಾಗುವುದು ಸಾಧ್ಯವೇ ಇಲ್ಲ. ಕೋರ್ಟು ಬಂಧಿಸದಂತೆ ಜಾಮೀನು ಕೊಟ್ಟರೂ ತನಿಖೆಗೆ ಸಹಕರಿಸುವಂತೆ, ವಿಚಾರಣೆಗೆ ಹಾಜರಾಗುವಂತೆ ಆದೇಶಿಸಬೇಕು. ಒಮ್ಮೆ ವಿಚಾರಣೆಗೆಂದು ಯಡ್ಡಿ ಸಿಬಿಐ ಕಪಿಮುಷ್ಠಿಗೆ ಸಿಲುಕಿದರೆಂದರೆ ಅದು ಅಲ್ಲಿಗೇ ನಿಲ್ಲುವುದಿಲ್ಲ. ಯಡ್ಡಿಯ ಮಕ್ಕಳು, ಅಳಿಯಂದಿರು, ಚೇಲಾಗಳು ಪ್ರತಿಯೊಬ್ಬರನ್ನೂ ವಿಚಾರಣೆ ನಡೆಸದೆ ಸಿಬಿಐ ಸುಮ್ಮನಾಗುವುದಿಲ್ಲ. ಹಾಗೊಮ್ಮೆ ಮಾರಿಷಸ್ ಅಕೌಂಟು ಮತ್ತು ಚೈನಾ ಹೋಟೆಲ್‌ನ ಮರ್ಮವೇನಾದರೂ ಬಯಲಾಯಿತೆಂದರೆ ಯಡ್ಡಿ ಪಾಲಿಗೆ ಕಂಬಿ ಎಣಿಸುವುದರ ಹೊರತು ಬೇರೆ ವಿಧಿಯೇ ಇಲ್ಲ.

• ರಾ. ಸೋಮನಾಥ್

ಯಾವುದು ನಡೆಯಬಾರದೆಂದು ಯಡ್ಡಿ ದೇವರನ್ನು ಬೇಡುತ್ತಾರೋ. ಅವೆಲ್ಲವೂ ಅಕ್ಷರಶಃ ನಡೆದೇತೀರುತ್ತದೆ. ತನಗೆ ದ್ರೋಹ ಬಗೆಯಲಾರನೆಂದು ವಿಶ್ವಾಸವಿಟ್ಟು ಮುಖ್ಯಮಂತ್ರಿಯನ್ನಾಗಿಸಿದರೆ ನಂಬಿದ ಸದಾನಂದ ಗೌಡರೇ ಹೊರಹಾಕಿ ಚಿಲ್ಕಗಿರಿದುಬಿಟ್ಟರು. ಎಷ್ಟೇ ಮಸ್ಕಾ ಹೊಡೆದರೂ ಲೋಕಾಯುಕ್ತ ಸಂತೋಷ್ ಹೆಗ್ಡೆಯವರ ಕುಣಿಕೆ ಸಡಿಲಾಗಲಿಲ್ಲ. ಜೈಲು ಪಾಲಾಗದೇ ಬಚಾವಾಗುವ ಏನೆಲ್ಲ ಶತಪ್ರಯತ್ನ ನಡೆಸಿಯೂ ಜೈಲು ತಪ್ಪಲಿಲ್ಲ. ಇನ್ನು ಸೀಇಸಿ ದಯೆ ತೋರಬಹುದೆಂಬ ನಿರೀಕ್ಷೆಯೂ ನಿಜವಾಗಲಿಲ್ಲ, ಹೋಗಲಿ ಸುಪ್ರೀಂಕೋರ್ಟಿನ ಹಸಿರು ಪೀಠವಾದರೂ ತನ್ನ ನೆರವಿಗೆ ಬರಬಹುದೆಂಬ ಅಂತಿಮ ಆಕಾಂಕ್ಷೆಯೂ ಮಣ್ಣುಪಾಲಾಗಿ ಹೋಯಿತು!



ಈಗ ಯಡ್ಡಿ ಕೊರಳಿಗೆ ಸಿಬಿಐ ಉರುಳು ಬಿಗಿಯಾಗಿದೆ. ಪ್ರತಿಷ್ಠಿತ ವಕೀಲರನ್ನಿಟ್ಟು, ಲಕ್ಷಲಕ್ಷ ಫೀಜು ತೆತ್ತು ಏನೆಲ್ಲಾ ವಾದ, ಪ್ರತಿವಾದ, ದಾಖಲೆ ಇತ್ಯಾದಿಗಳನ್ನಿಟ್ಟರೂ ಸಿಬಿಐ ಬಲೆಯಿಂದ ಯಡ್ಡಿ ಬಚಾವಾಗುವುದು ಸಾಧ್ಯವಾಗಲೇ ಇಲ್ಲ. ಮೇ 16 ರ ಮಂಗಳವಾರದ ಬೆಳ್ಳಂಬೆಳಗ್ಗೆ ನಡೆದ ಸಿಬಿಐ ದಾಳಿಯೆಂಬುದು ಯಡ್ಡಿಯ ಅವನತಿಯ ಹಾದಿಯಲ್ಲಿ ಒಂದು ಮೈಲಿಗಲ್ಲು ಮಾತ್ರ ಎಂಬುದು ಸ್ವತಃ ಯಡ್ಡಿಗೇ ಮನದಟ್ಟಾಗಿದೆ. ಉಳಿದ ಒಂದೇ ಒಂದು ದಾರಿಯೆಂದರೆ ಬಂಧನದ ವಿರುದ್ಧ ನಿರೀಕ್ಷಣಾ ಜಾಮೀನು.

ಏನೇನು ಸಂಭವಿಸಬಾರದೆಂದು ಯಡ್ಡಿ ನಾಣ್ಯಬೇಕೊಳ್ಳಲಿ ತ್ತಿಸುತ್ತಾರೋ ಅದೇ ಬೆನ್ನತ್ತಿ ಬರುತ್ತಿದೆಯೆಂದಮೇಲೆ ಇನ್ನು ಸಿಬಿಐ ಬಂಧನದಿಂದ ಯಡ್ಡಿ ಬಚಾವಾಗುವುದುಂಟೆ?

ಇಂಥದೊಂದು ಸಾಧ್ಯತೆಯ ಮುನ್ಸೂಚನೆಯಂತೆ ನಡೆದದ್ದು ಮಂಗಳವಾರ ಸಿಬಿಐ ರೈಡು. ಬಹುಶಃ ದಾಳಿ ನಡೆಯುವುದು ಯಡ್ಡಿಗಾಗಲೇ ಖಚಿತವಾಗಿರಬೇಕು, ಮಂಗಳವಾರ ಬೆಳ್ಳಂಬೆಳಿಗ್ಗೆಯೇ ಸಿಬಿಐನ ಹೈದರಾಬಾದ್ ವಲಯದ ಜಂಟಿ ನಿರ್ದೇಶಕ ವಿ.ವಿ. ಲಕ್ಷ್ಮಿನಾರಾಯಣರ ನೇತೃತ್ವದಲ್ಲಿ ನೂರಕ್ಕೂ ಅಧಿಕ ಮಂದಿ ಅಧಿಕಾರಿಗಳ ತಂಡ ಯಡ್ಡಿಯ ಎಲ್ಲಾ ಅಡ್ಡೆಗಳಿಗೂ ರೈಡು ಬಿದ್ದಿತ್ತು, ಬೆಂಗಳೂರು ಸಿಬಿಐ ವಿಭಾಗದ ಡಿಐಜಿ ಆರ್. ಹಿತೇಂದ್ರರ ತಂಡ ಡಾಲರ್ಸ್ ಕಾಲನಿಯ ಯಡ್ಡಿ ಮನೆ ಧವಳಗಿರಿಯನ್ನು ಸುತ್ತುವರಿದಿದ್ದರೆ, ಸಿಬಿಐನ ಎಸ್ಪಿ ಡಾ. ಸುಬ್ರಹ್ಮಣ್ಯೇಶ್ವರ ರಾವ್ ನೇತೃತ್ವದ ಮತ್ತೊಂದು ತಂಡ ರೇಸ್‌ಕೋರ್ಸ್ ನಿವಾಸಕ್ಕೆ ಲಗ್ಗೆಯಿಟ್ಟಿತ್ತು.

ಗಣಿಕಳ್ಳ ಪ್ರವೀಣ್ ಚಂದ್ರ

ಬಹುಶಃ ಗಣಿ ರೆಡ್ಡಿಗಳ ಮೇಲೆ ನಡೆದ ದಾಳಿಗಿಂತಲೂ ಯಡ್ಡಿ ವಿರುದ್ಧ ದಾಳಿಯೇ ಹೆಚ್ಚು ವ್ಯವಸ್ಥಿತವಾಗಿತ್ತು. ಶೇಷಾದ್ರಿಪುರದ ಪ್ರೇರಣಾ ಟ್ರಸ್ಟ್ ಕಚೇರಿಗೆ, ವಿಜಯನಗರದ ಲೇಔಟ್ ಕೃಷ್ಣಪ್ಪನವರ ಮನೆ ಹಿಂಭಾಗದ ಮಗಳು ಉಮಾದೇವಿಯ ಬಂಗಲೆಗೆ, ಶಿವಮೊಗ್ಗದ ವಿನೋಬಾನಗರದ ಮತ್ತೊಬ್ಬ ಮಗಳು ಅರುಣಾ ದೇವಿಯ ನಿವಾಸಕ್ಕೆ, ಅರುಣಾ ದೇವಿಯ ಗಂಡ ಉದಯ್ ಕುಮಾರ್‌ನ ಬ್ಯಾಂಕ್ ಲಾಕರ್‌ಗಳಿಗೆ, ಡಾಲರ್ಸ್ ಕಾಲನಿಯ ಯಡ್ಡಿ ಪರಮಾಪ್ತ ಮತ್ತು ಬಿಜೆಪಿಯ ಖಜಾಂಚಿ ಲೆಹರ್ ಸಿಂಗ್‌ನ ಬಂಗಲೆಗೆ- ಹೀಗೆ ಸಕಲ ಚರಾಚರಗಳ ಮೇಲೂ ಸಿಬಿಐ ದಾಳಿಯಿಟ್ಟಿತ್ತು. ಶಿಕಾರಿಪುರದ ಮಾಳೇನಹಳ್ಳಿಯ ಯಡ್ಡಿಯ ತೋಟದ ಮನೆಯನ್ನೂ ಸಿಬಿಐ ಬಿಡಲಿಲ್ಲ.

ಒಂದೆಡೆ ಯಡ್ಡಿ ಅಳಿಯ ಮಕ್ಕಳ ಭಗತ್ ಹೋಮ್ಸ್, ಧವಳಗಿರಿ ಪ್ರಾಪರ್ಟೀಸ್ ಇತ್ಯಾದಿ ಅಡ್ಡೆಗಳಿಗೆ ನುಗ್ಗಿದ ಸಿಬಿಐ ಅಧಿಕಾರಿಗಳು ಸಿಕ್ಕಸಿಕ್ಕ ದಾಖಲೆಗಳನ್ನೆಲ್ಲ ವಶಪಡಿಸಿಕೊಳ್ಳುತ್ತಿದ್ದರೆ ಮತ್ತೊಂದೆಡೆ ಯಡ್ಡಿ ಪರಮಾಪ್ತ ಶಾಸಕ ಯಲಹಂಕದ ವಿಶ್ವನಾಥ್ ಮತ್ತು ಚಿಕ್ಕಪೇಟೆ ಶಾಸಕ ಹೇಮಚಂದ್ರ ಸಾಗರ್‌ರ ಬನ್ನೇರುಘಟ್ಟ ರಸ್ತೆಯ ನಿವಾಸಗಳಿಗೆ ವಿವಿಧ ತಂಡಗಳು ಲಗ್ಗೆ ಇಟ್ಟವು. ಅದೇ ಹೊತ್ತಿಗೆ ಬಳ್ಳಾರಿಯ ತೋರಣಗಲ್‌ನ ಸೌತ್ ವೆಸ್ಟ್ ಮೈನಿಂಗ್ ಕಂಪೆನಿಯ ಕಾರ್ಪೊರೇಟ್ ಕಚೇರಿ, ಅದರ ಸಿಇಓನ ಬಂಗಲೆ, ಜಿಂದಾಲ್ ಸ್ಟೀಲ್ಸ್ ಕಂಪೆನಿಯ ಆಡಳಿತ ಕಚೇರಿ, ಅದರ ಸಿಇಓ ವಿನೋದ್ ನಾವಲ್ ಮನೆ, ಯಡ್ಡಿ ಬಲಗೈ ಬಂಟ ಮಾಜಿ ಮಂತ್ರಿ ಕೃಷ್ಣಯ್ಯ ಶೆಟ್ಟಿಯ ರಾಜಾಜಿನಗರದ ಮನೆ, ಯಡ್ಡಿಯ ಮತ್ತೊಬ್ಬ ಬಂಟ ಪ್ರವೀಣ್ ಚಂದ್ರ ಎಂಬ ಕಂಟ್ರಾಕ್ಟರ್‌ನ ಶ್ರೀನಗರದ ಮನೆ ಹಾಗೂ ಕಚೇರಿಯ ಮೇಲೂ ಸಿಬಿಐ ಮುಗಿಬಿದ್ದಿತ್ತು.



ಕೇವಲ ತನ್ನ ಮತ್ತು ಮಕ್ಕಳು, ಅಳಿಯಂದಿರ ಮೇಲಷ್ಟೇ ದಾಳಿ ನಡೆಯಬಹುದೆಂದು ಲೆಕ್ಕಹಾಕಿದ ಯಡ್ಡಿಯ ಎಲ್ಲಾ ಲೆಕ್ಕಾಚಾರವೂ ತಲೆಕೆಳಗಾಗಿತ್ತು, ತನ್ನ ಪರಮಾಪ್ತ ಗಣಿ ಖದೀಮ ಪ್ರವೀಣ್ ಚಂದ್ರ ಮತ್ತು ಶಾಸಕರಾದ ಕೃಷ್ಣಯ್ಯ ಶೆಟ್ಟಿ, ವಿಶ್ವನಾಥ್, ಹೇಮಚಂದ್ರ ಸಾಗರ್, ಲೆಹರ್ ಸಿಂಗ್ ಮೇಲೆ ಒಟ್ಟಿಗೆ ಸಿಬಿಐ ಬಲೆ ಬೀಸಿತ್ತು.

ಅಲ್ಲಿಗೆ ಯಡ್ಡಿಯನ್ನು ಬಲಿಹಾಕುವ ಸಿಬಿಐನ ಅಭಿಯಾನದ ಅರ್ಧ ಕೆಲಸ ಮುಗಿದಂತಾಗಿತ್ತು, ಯಡ್ಡಿಯ ಡಾಲರ್ಸ್ ಕಾಲನಿಯ ಧವಳಗಿರಿ ಬಂಗಲೆಯೊಂದರಲ್ಲೇ ಬರೋಬ್ಬರಿ ಒಂದು ಮೂಟೆಯಷ್ಟು ದಾಖಲೆಗಳು, ಖಾ[illegible] ಚೆಕ್ಕುಗಳು, ಅಡವಿಟ್ಟುಕೊಂಡಿದ್ದ ಜಮೀನು ಪತ್ರಗಳು ಎಲ್ಲವೂ ಜಪ್ತಾಗಿತ್ತು, ಲೆಹರ್ ಸಿಂಗ್ ಮನೆಯಲ್ಲೂ ಅ[illegible] ಮೊತ್ತದ ದಾಖಲೆಗಳು ಸಿಕ್ಕವು.




ಮಾರಿಷಸ್‌ನ ಸೀಕ್ರೆಟ್ ಖಾತೆ

ಹೀಗೆ ಸಿಕ್ಕ ದಾಖಲೆಗಳ ಪೈಕಿ ಅತೀ ಮುಖ್ಯವಾದದ್ದು ಲೆಹರ್ ಸಿಂಗ್ ಮನೆಯಲ್ಲಿ ಜಪ್ತಾದ ಯಡ್ಡಿಯ ಚೈನಾ[illegible] ಪಂಚತಾರಾ ಹೋಟೆಲ್ ದಾಖಲೆಗಳು ಮತ್ತು ಮಾರಿಷಸ್[illegible] ಬ್ಯಾಂಕ್ ಒಂದರಲ್ಲಿ ಯಡ್ಡಿ ಜೋಪಾನವಾಗಿಟ್ಟಿರುವ ಐನೂ[illegible] ಕೋಟಿಗೂ ಅಧಿಕ ಮೊತ್ತದ ಕಪ್ಪುಹಣದ ವಿವರಗಳು[illegible]

ಬಹುಶಃ ಶೋಭಾ ಕರಂದ್ಲಾಜೆ, ಮಂತ್ರಿ ನಿರಾಣಿ ಮ[illegible] ಚೇಲಾ ಸಿದ್ಧಲಿಂಗಸ್ವಾಮಿ ಅಡ್ಡೆ[illegible] ಮೇಲೂ ಸಿಬಿಐ ದಾಳಿಯಿಟ್ಟಿದ್ದ[illegible] ಇನ್ನೂ ಅನೇಕ ಸತ್ಯಗಳ[illegible] ಹೊರಬರುತ್ತಿದ್ದವೇನೊ ಅಥ[illegible] ಎರಡನೇ ಹಂತದ ದಾಳಿ[illegible] ಅಣಿಯಾಗಲು ಸಿಬಿಐ ಕಾಟಾಚಾರ[illegible] ದಾಳಿನಿಮಿತ್ತ ಮೊದಲ ಹಂತವ[illegible] ಈ ಅಡ್ಡೆಗಳನ್ನಷ್ಟೇ ಆಯ[illegible] ಮಾಡಿಕೊಂಡಿತ್ತಾ?

ಇಲ್ಲಿಗೆ ವರ್ಷದ ಹಿಂ[illegible] ಗ್ಲೋಬಲ್ ಇನ್‌ವೆಸ್ಟರ್ಸ್ ಮೀ[illegible] ಅಂದರೆ ಜಾಗತಿಕ ಬಂಡವಾ[illegible] ಹೂಡಿಕೆದಾರರ ಸಮಾವೇ[illegible] ಬೆಂಗಳೂರಿನಲ್ಲಿ ನಡೆದಾಗ ಅದ[illegible] ನೆಪದಲ್ಲೇ ಯಡ್ಡಿ ತನ್ನ ಚೇಲಾ ಲೆಹರ್ ಸಿಂಗ್ ಸಮೇ[illegible] ಚೀನಾ ಯಾತ್ರೆ ಮುಗಿಸಿಬಂದರು. ಅದಕ್ಕೂ ಮುನ್ನ ವಿಶ್ವ[illegible] ಉಕ್ಕು ದೈತ್ಯ ಲಕ್ಷ್ಮಿ ಮಿತ್ತಲ್‌ಗೆಂದು ಬಳ್ಳಾರಿಯಲ್ಲಿ ಮೂ[illegible] ಸಾವಿರ ಎಕರೆ ಗಣಿ ಸಮೃದ್ಧ ಅರಣ್ಯ ಭೂಮಿಯನ್ನ[illegible] ಬಿಟ್ಟುಕೊಡುವ ನಿರ್ಧಾರಕ್ಕೆ ಯಡ್ಡಿ ಸರ್ಕಾರ ಸಹಿ ಹಾಕಿತ್ತ[illegible] ಇದೊಂದೇ ಬಾಬತ್ತಿನ ಲಂಚವಾಗಿ, ಸರಿಸುಮಾರು[illegible] ಸಾವಿರದೈನೂರು ಕೋಟಿ ರೂಪಾಯಿಗಳ ಡೀಲ್[illegible] ಕುದುರಿಸಿದ್ದು ಯಡ್ಡಿ ಬಂಟ ಲೆಹರ್ ಸಿಂಗ್!

ಈ ಪಾಟಿ ಲಂಚವನ್ನು ನಗದಾಗಿ ನೀಡುವುದೇ ದೊ[illegible] ಸಮಸ್ಯೆಯೆಂದು ಭಾವಿಸಿದ ಮಿತ್ತಲ್ ಕಂಪೆನಿ ಚೈನಾ[illegible] ಶಾಂಘೈ ನಗರದಲ್ಲಿದ್ದ ಐಷಾರಾಮಿ ಹೋಟೆಲೊಂದನ್ನ[illegible] ಕಾಣಿಕೆಯಾಗಿ ಯಡ್ಡಿಗೆ ನೀಡಿದ ಬಗ್ಗೆ ಸಿಬಿಐಗೆ ಸ್ಪ[illegible] ಮಾಹಿತಿಯಿತ್ತು. ಇದಲ್ಲದೆ ಯಡ್ಡಿ ಮತ್ತು ಲೆಹರ್ ಸಿಂ[illegible] ಚೈನಾಯಾತ್ರೆ ಮುಗಿಸಿ-ಬರುವುದಕ್ಕೆ ಬೇರೆ ಯಾವು[illegible] ಕಾರಣಗಳಿರಲಿಲ್ಲ, ಚೈನಾದಿಂದ ವಿಶೇಷ ಬಂಡವಾಳವಾಗ[illegible] ಕೈಗಾರಿಕೋದ್ಯಮಿಗಳಾಗಲಿ ಕರ್ನಾಟಕಕ್ಕೆ ಬರದೇ ಹೋದರ[illegible] ಲೆಹರ್ ಸಿಂಗ್ ಜೊತೆ ಚೈನಾ ಪ್ರವಾಸ ಮುಗಿಸಿಬಂ[illegible] ಮುಖ್ಯಮಂತ್ರಿ, ಯಡ್ಡಿ ತನ್ನ ವಿದೇಶ ಪ್ರವಾಸ[illegible] ಸಾಧಕ-ಬಾಧಕದ ಬಗ್ಗೆ ಜನತೆಗೆ ಯಾವ ವಿವರಗಳನ್[illegible]



ಪ್ರೇರಣಾ ಟ್ರಸ್ಟ್ ಅಡ್ಡೆಗೆ ಸಿಬಿಐ ದಾಳಿ





ದಾಳಿಗೀಡಾದ ಡಾಲರ್ಸ್ ಕಾಲನಿ ಮನೆ



ರೇಸ್‌ಕೋರ್ಸ್ ಬಂಗಲೆಯಲ್ಲಿ ಸಿಬಿಐ ತಪಾಸಣೆ

...ರಲಿಲ್ಲ.

...ಂಗೆ ಶಾಂಘೈ ಭೇಟಿ ಮುಗಿಸಿ ಬಂದನಂತರವೇ ...ಸ್ ಕಂಪೆನಿ ಜೊತೆ ಉಕ್ಕು ಘಟಕದ ಒಪ್ಪಂದಕ್ಕೆ ಸಹಿ ಹಾಕಿದ್ದು.

ಗಣಿ ವರದಿಗೂ ಮುನ್ನ

...ದು ಯಡ್ಡಿಯ ಚೈನಾ ಭೇಟಿಯ ನಿಗೂಢವಾದರೆ ...ತರ ನಡೆದ ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್‌ನಲ್ಲಿ ಅನೇಕಾನೇಕ ಡೀಲುಗಳಿಗೆ ನಿರಾಣಿ ಮತ್ತು ಯಡ್ಡಿ ...ಯೇ ಸಹಿ ಹಾಕಿದ್ದರು. ಗ್ಲೋಬಲ್ ಇನ್‌ವೆಸ್ಟರ್ಸ್ ...ಟ್ ಮುಗಿಯುತ್ತಿದ್ದಂತೆಯೇ ಯಡ್ಡಿ ಮತ್ತೆ ಮಾರಿಷಸ್ ...ಗೆ ತೆರಳಿದರು. ಈ ಬಾರಿ ಲೆಹರ್ ಸಿಂಗ್‌ನನ್ನು ...ಗೊಯ್ಯದೇ ಕೆಲದಿನಗಳ ಮೊದಲೇ ಆತನನ್ನು ...ರಿಷಸ್‌ನಲ್ಲಿರುವಂತೆ ಯಡ್ಡಿ ಏರ್ಪಾಡು ಮಾಡಿದ್ದರು. ...ಬನೋಟಕ್ಕೆ ಕುಟುಂಬ ಸಮೇತ ಬಿಡುವಿಗಾಗಿ ಯಡ್ಡಿ ...ರಿಷಸ್‌ಗೆ ಹೋದಂತಿತ್ತು. ಅದು 2011 ರ ಜುಲೈ ...ಳು. ಅದೇ ತಿಂಗಳಲ್ಲಿ ...ಕಾಯುಕ್ತ ಸಂತೋಷ್ ಹೆಗ್ಡೆ ... ಅಕ್ರಮ ಗಣಿಗಾರಿಕೆ ಕುರಿತ ...ಯನ್ನು ನೀಡಬೇಕಾಗಿತ್ತು. ...1 ರ ಜುಲೈ 19 ರಿಂದ ...ರವರೆಗೆ ಮಾರಿಷಸ್ ...ಸಕ್ಕೊಂದು ಹೋದ ಯಡ್ಡಿ ...ಕೆ ಮಗ ರಾಘವೇಂದ್ರ, ...ಯ ಸೋಹನ್ ಕುಮಾರ್, ...ಗಳು ಉಮಾದೇವಿ ...ಬ್ದಿಗಳೆಲ್ಲ ಇದ್ದರಾದರೂ ...ಕಾಯುಕ್ತರ ಗಣಿ ವರದಿ ...ಪಿಸುತ್ತಿದ್ದಂತೆಯೇ ಯಡ್ಡಿ ಮಾರಿಷಸ್‌ಗೆ ಹೋಗಿದ್ದಕ್ಕೆ ... ಯಾವುದೇ ಕಾರಣಗಳಿರಲಿಲ್ಲ.

...ಮಾರಿಷಸ್ ಹೇಳಿಕೇಳಿ ತೆರಿಗೆ ಕಳ್ಳರ ಸ್ವರ್ಗ. ಅಕ್ರಮ ...ಲೂಟಿ ಕುರಿತಂತೆ ತನಿಖೆ ಶುರುವಿಟ್ಟುಕೊಂಡ ಸಿಬಿಐ ಗಾಲಿ ಜನಾರ್ದನ ರೆಡ್ಡಿ, ಆಂಧ್ರದ ಜಗನ್ ಮೋಹನ್ ರೆಡ್ಡಿ ಮಾತ್ರವಲ್ಲದೆ 2 ಜಿ ತರಂಗಾಂತರ ಹಗರಣದ ರೂವಾರಿ ಮಾಜಿ ಕೇಂದ್ರ ಮಂತ್ರಿ ರಾಜಾ ಕೂಡ ಹೊಡೆದ ಕೊಳ್ಳೆಯ ದೊಡ್ಡ ಮೊತ್ತವನ್ನು ಮಾರಿಷಸ್‌ನ ಬ್ಯಾಂಕುಗಳಿಗೆ ಸಾಗಿಸಿದ್ದರು. ಮಾರಿಷಸ್‌ನಂತೆ ಕೇಯರ್‌ಮನ್ ಐಲ್ಯಾಂಡ್ ಮತ್ತು ಸೆಂಟ್ ಕೀಟ್ಸ್ ದ್ವೀಪಗಳೂ ಇಂಥ ಕಪ್ಪುಹಣದ ಗುಪ್ತ ನಿಧಿಗಳೆ. ಆದರೆ ಭಾರತದ ಕಪ್ಪುಹಣ ಅಲ್ಲಿಗೆ ಹೋಗಬೇಕೆಂದರೂ ಅದಕ್ಕೂ ಮಾರಿಷಸ್ ಮೂಲಕವೇ ರವಾನಿಸಬೇಕು.

ಇಂಥ ಯಾವ ಬ್ಯಾಂಕುಗಳಿಗೆ ಯಡ್ಡಿ ದುಡ್ಡು ಸಾಗಿಸಿರಬಹುದೆಂಬುದು ಸಿಬಿಐ ಅಧಿಕಾರಿಗಳನ್ನು ಕಾಡುತ್ತಿರುವ ಮೂಲಪ್ರಶ್ನೆ. ಹಾಗೆ ನೋಡಿದರೆ ಅಕ್ರಮ ಗಣಿಗಾರಿಕೆ ಕುರಿತಂತೆ ಜಿಂದಾಲ್ ಕಂಪೆನಿಯ ಜೊತೆಗಿನ ಯಡ್ಡಿ ಸಂಬಂಧಕ್ಕೆ ಸ್ಪಷ್ಟ ದಾಖಲೆಗಳಿವೆ. ಸೌತ್ ವೆಸ್ಟ್ ಮೈನಿಂಗ್ ಕಂಪೆನಿಯಿಂದ ಯಡ್ಡಿಯ ಟ್ರಸ್ಟ್‌ಗಳಿಗೆ ದಾಖಲೆ ಪ್ರಕಾರವೇ ದುಡ್ಡು ಬಂದಿದೆ. ಗಣಿ ಖದೀಮ ಪ್ರವೀಣ್ ಚಂದ್ರನಿಗೆ ಅಕ್ರಮ ಗಣಿಯ ಲೈಸೆನ್ಸ್ ಕೊಟ್ಟಿದ್ದಕ್ಕೂ ಅದಕ್ಕೆ ಪ್ರತಿಫಲವಾಗಿ ಯಡ್ಡಿ ಮಕ್ಕಳ ಕಂಪೆನಿಗೆ 2.5 ಕೋಟಿ ಮತ್ತು 3.5 ಕೋಟಿಯಷ್ಟು ದುಡ್ಡು ಸಂದಾಯವಾಗಿರುವುದಕ್ಕೂ ದಾಖಲೆಗಳಿವೆ.



ಮಗಳು ಉಮಾದೇವಿ

ಜಿಂದಾಲ್ ಸ್ಟೀಲ್ಸ್‌ನಿಂದ ಪ್ರೇರಣಾ ಎಜುಕೇಷನ್ ಸೊಸೈಟಿಗೆ ಬಂದ 10 ಕೋಟಿಯ ಬಗ್ಗೆಯಾಗಲಿ, ಜೆಎಸ್‌ಡಬ್ಲ್ಯೂ ಸ್ಟೀಲ್ ಕಂಪನಿಯಿಂದ ಸಂದಾಯವಾದ 20 ಕೋಟಿಗಾಗಲಿ ಹೊಸ ದಾಖಲೆಗಳನ್ನೇನೂ ಸಿಬಿಐ ಕಲೆ ಹಾಕಬೇಕಿಲ್ಲ. ಈ ಬಗ್ಗೆ ಲೋಕಾಯುಕ್ತವೇ ದಾಖಲೆಗಳನ್ನೊದಗಿ ಸಿರುವಾಗ, ವಿವಿಧ ಕೋರ್ಟುಗಳಲ್ಲಿ ಈ ಬಗ್ಗೆಯೇ ಕೇಸುಗಳಿರು ವಾಗ ಸಿಬಿಐ ಹೊಸ ದಾಖಲೆಗಳನ್ನೇನೂ ಹುಡುಕುವ ಅಗತ್ಯವಿರಲಿಲ್ಲ. ಮೊದಲೇ ಸಿಬಿಐ ದಾಳಿ ಮುನ್ಸೂಚನೆಯಿದ್ದ ಯಡ್ಡಿ ಯಾಮಾರುವಷ್ಟು ದಡ್ಡನಲ್ಲ ಎಂದು ಗೊತ್ತಿದ್ದ ಸಿಬಿಐ ಏಕೆ ಇಷ್ಟೊಂದು ಮಹತ್ವಾಕಾಂಕ್ಷೆ ಹೊತ್ತು ದಾಳಿ ನಡೆಸಿತು?



ಮತ್ತೊಂದು ದಾಳಿ?

ಹಕೀಕತ್ತೇನೆಂದರೆ ಮಾರಿಷಸ್ ಮತ್ತು ಚೈನಾ ಸುತ್ತಿ ಬಂದ ಯಡ್ಡಿ ದೊಡ್ಡ ಮೊತ್ತದ ಕೊಳ್ಳೆಯನ್ನು ಈ ದೇಶಗಳಲ್ಲಿ ಬಚ್ಚಿಟ್ಟಿರಬಹುದೆಂಬ ಅನುಮಾನದಿಂದಲೇ ಸಿಬಿಐ ದಾಳಿಯಿಟ್ಟಿದೆ. ಅಳಿಯಂದಿರು, ಆಪ್ತರು, ಬೇನಾಮಿಗಳು, ಬಂಟರು ಯಾರನ್ನೂ ಬಿಡದೆ ಜಾಲಾಡಿದೆ. ಬ್ಯಾಂಕ್ ಲಾಕರ್‌ಗಳನ್ನು ತಡಕಾಡಿದೆ. ಶಾಂಘೈನ ಐಷಾರಾಮಿ ಹೋಟೆಲ್ ಖರೀದಿ ಮತ್ತು ಮಾರಿಷಸ್ ಬ್ಯಾಂಕುಗಳ ನಿಗೂಢ ಕೆದಕುವುದೇ ಸಿಬಿಐನ ಮುಖ್ಯ ಉದ್ದೇಶವಾಗಿರಬೇಕು.

ಮಂಗಳವಾರದ ದಾಳಿಯಲ್ಲಿ ಸಿಬಿಐ ಎಷ್ಟು ಸಫಲಗೊಂಡಿದೆಯೋ ಗೊತ್ತಿಲ್ಲ. ಆದರೆ ಮೂಲ ಕೆದಕುವ ತನಕ ಸಿಬಿಐ ಸುಮ್ಮನಾಗುವುದಿಲ್ಲ. ಈಗ ಜಪ್ತಾಗಿರುವ ದಾಖಲೆಗಳೇನಿದ್ದರೂ ಅದು ಕಡಲಾಳದ ಹಿಮಗಡ್ಡೆಯ ತುದಿಮಾತ್ರ. ಇಲ್ಲಿಗೆ ಎರಡು ತಿಂಗಳ ಹಿಂದೆಯೇ ಯಡ್ಡಿಯ ಶಿಕಾರಿಪುರದ ತೋಟದ ಮನೆಯಲ್ಲಿದ್ದ ದುಡ್ಡು ದಾಖಲೆಗಳನ್ನು ನಿಗೂಢ ಸ್ಥಳವೊಂದಕ್ಕೆ ಸಾಗಿಸಿದ ಬಗ್ಗೆ ಸಿಬಿಐಗೆ ಮಾಹಿತಿಯಿದೆ. ಹಾಗಿದ್ದೂ ಯಡ್ಡಿಯ ಅಧಿಕೃತ ಅಡ್ಡೆಗಳ ಮೇಲಷ್ಟೇ ಮಂಗಳವಾರ ದಾಳಿ ನಡೆದಿದೆಯೆಂದರೆ ಸಿಬಿಐ ಮಟ್ಟಿಗೆ ಇದೇ ಕೊನೆಯ ದಾಳಿಯೇನಲ್ಲ. ಇಷ್ಟಕ್ಕೇ ಪ್ರಳಯವಾದಂತೆ ನಡುಗಿದ ಯಡ್ಡಿ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ ಮಾತ್ರಕ್ಕೇ ಸಿಬಿಐ ತಣ್ಣಗಾಗುವುದಿಲ್ಲ.

ಹೆಚ್ಚೆಂದರೆ ಸಿಬಿಐ ಇನ್ನೊಂದು ವಾರ ತಡೆಯಬಹುದು. ಅಕ್ರಮ ಗಣಿಗಾರಿಕೆಯ ಕುಣಿಕೆಯಿಂದ ಯಡ್ಡಿ ಬಚಾವಾಗುವುದು ಸಾಧ್ಯವೇ ಇಲ್ಲ. ಕೋರ್ಟು ಬಂಧಿಸದಂತೆ ಜಾಮೀನು ಕೊಟ್ಟರೂ ತನಿಖೆಗೆ ಸಹಕರಿಸುವಂತೆ, ವಿಚಾರಣೆಗೆ ಹಾಜರಾಗುವಂತೆ ಆದೇಶಿಸಬೇಕು. ಒಮ್ಮೆ ವಿಚಾರಣೆಗೆಂದು ಯಡ್ಡಿ ಸಿಬಿಐ ಕಪಿಮುಷ್ಟಿಗೆ ಸಿಲುಕಿದರೆಂದರೆ ಅದು ಅಲ್ಲಿಗೇ ನಿಲ್ಲುವುದಿಲ್ಲ. ಯಡ್ಡಿಯ ಮಕ್ಕಳು, ಅಳಿಯಂದಿರು, ಚೇಲಾಗಳು ಪ್ರತಿಯೊಬ್ಬರನ್ನೂ ವಿಚಾರಣೆ ನಡೆಸದೆ ಸಿಬಿಐ ಸುಮ್ಮನಾಗುವುದಿಲ್ಲ. ಹಾಗೊಮ್ಮೆ ಮಾರಿಷಸ್ ಅಕೌಂಟು ಮತ್ತು ಚೈನಾ ಹೋಟೆಲ್‌ನ ಮರ್ಮವೇನಾದರೂ ಬಯಲಾಯಿತೆಂದರೆ ಯಡ್ಡಿ ಪಾಲಿಗೆ ಕಂಬಿ ಎಣಿಸುವುದರ ಹೊರತು ಬೇರೆ ವಿಧಿಯೇ ಇಲ್ಲ.


ಪ್ರತ್ಯೇಕ ಕಚೇರಿ, ಪ್ರತ್ಯೇಕ ಪಂಗಡವೆಂದರೆ ಏನರ್ಥ?

'ಸುಪ್ರೀಂಕೋರ್ಟಿನ ಹಸಿರುಪೀಠ ಸಿಬಿಐ ತನಿಖೆಗೆ ಆದೇಶಕೊಟ್ಟ ...ನೇ ದಿನಕ್ಕೇ ಯಡ್ಡಿ ಮುಖ್ಯಮಂತ್ರಿ ಸದಾನಂದ ಗೌಡರ ವಿರುದ್ಧ ...ತ್ತೊಂದು ಸುತ್ತಿನ ದಾಳಿಗಿಳಿಯುವುದಕ್ಕೂ ಕಾರಣವಿತ್ತು. ಅದು ಒಂದೇ ...ಗೆ ಎರಡು ಕಾಯಿ ಉದುರಿಸುವ ತಂತ್ರ!

...ಒಂದೋ ಸಿಎಂ ಸದಾನಂದ ಗೌಡರನ್ನು ಇಳಿಸಿ ಆ ಜಾಗಕ್ಕೆ ಅಶೋಕ್ ...ವಾ ಶೆಟ್ಟರ್‌ರನ್ನು ತರುವುದು. ಆ ಮೂಲಕ ತನ್ನ ವಿರುದ್ಧದ ಸಿಬಿಐ ...ಖೆಯ ಧಗೆಯನ್ನು ಮರೆಮಾಚಿ ಮಾಧ್ಯಮಗಳ ಗಮನವನ್ನು ಬೇರೆಡೆಗೆ ...ಯುವುದು. ಜೊತೆಗೇ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿಯ ...ವೊಲಿಸಿ ತನ್ನ ವಿರುದ್ಧದ ಸಿಬಿಐ ದಾಳಿಯ ತೀವ್ರತೆಯನ್ನು ಕುಂದಿಸುವುದು.

...ಯಡ್ಡಿಯ ದುರಂತವೆಂದರೆ ಈ ಯಾವುದೂ ನೆರವೇರಲೇ ಇಲ್ಲ. ...ೕ 12 ರ ಸೋಮವಾರವೇ ಯಡ್ಡಿ ಬಿಜೆಪಿಗೆ ರಾಜೀನಾಮೆ ...ಡುತ್ತಾರೆಂಬುದು ಬಹುತೇಕ ಮಾಧ್ಯಮಗಳ ನಿರೀಕ್ಷೆಯಾಗಿತ್ತು. ...ವಾರದಿಂದಲೇ ತಮ್ಮ ಬೆಂಬಲಿಗ ಮಂತ್ರಿಗಳ ...ಜೀನಾಮೆ ಪ್ರಹಸನವನ್ನು ಶುರು ಹಚ್ಚಿಕೊಂಡ ...ಡ್ಡಿ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ... ವಿರುದ್ಧ ಒಂದು ಟೈಪಿನ ದಾಳಿ ಶುರು ...ರೆ ಮತ್ತೊಂದೆಡೆ ತನ್ನನಿಷ್ಠ ಮಂತ್ರಿಗಳ ...ರುದ್ಧ ಸದಾನಂದ ಗೌಡರು ಹೈಕಮಾಂಡಿಗೆ ...ದ ಪತ್ರವನ್ನೇ ದೊಡ್ಡ ರಾದ್ಧಾಂತವನ್ನಾಗಿಸಿ ...ರು.

...ಕರಂದ್ಲಾಜೆ, ಬೊಮ್ಮಾಯಿ, ಸೋಮಣ್ಣ ...ಕಾಚಾರ್ಯ ಸೇರಿದಂತೆ ಎಲ್ಲಾ ಯಡ್ಡಿ ...ಮಂತ್ರಿಗಳು ರಾಜೀನಾಮೆ ... ಎಂಬ ...ಗಿಳಿದದ್ದು ಒಂದೆಡೆಯಾದರೆ ...ಂದೆಡೆ ಒಬ್ಬೊಬ್ಬರೇ ಶಾಸಕರ ರಾಜೀ... ...ಘೋಷಿಸಿದರು. ಅಲ್ಲಿಗೆ ಯಡ್ಡಿಯ ... [illegible] ... ... ಯಡ್ಡಿ ವಿರುದ್ಧದ ತನ್ನ ... [illegible]



ಶೆಟ್ಟರ್

ನನ್ನನ್ನು ಬೈದರೂ ಅದು ಆಶೀರ್ವಾದವಿದ್ದಂತೆ. ಅವರೇ ನಮ್ಮ ನಾಯಕರು. ಅವರೇ ಪಕ್ಷ ಕಟ್ಟಿದ ನಾಯಕರು....' ಎಂಬಂತೆ ಪೂಸಿಗಿಳಿದದ್ದು ಹೆಚ್ಚೂಕಮ್ಮಿ ಸದಾನಂದ ಗೌಡರ ಜಂಘಾಬಲವನ್ನೇ ಉಡುಗಿಸಿಬಿಟ್ಟಿತ್ತು.

ಆದರೆ ಯಡ್ಡಿಯ ನಿರೀಕ್ಷೆಯೇ ತಲೆಕೆಳಗಾಗಿತ್ತು. ಭೀತಿಗೆ ಬಿದ್ದು ಮಣಿಯುತ್ತದೆಯೆಂದು ನಿರೀಕ್ಷಿಸಿದ್ದ ಹೈಕಮಾಂಡ್ ಮಣಿಯಲೇ ಇಲ್ಲ. ಜೈಟ್ಲಿಯಾಗಲಿ, ಪ್ರಧಾನ್ ಆಗಲಿ ಯಾರೂ ಬೆಂಗಳೂರಿಗೆ ಬರಲಿಲ್ಲ. ದೆಹಲಿಗೆ ಹೋದ ಶೋಭಾ ಕರಂದ್ಲಾಜೆಗೂ ಅಂಥಾ ಮಹತ್ವ ಸಿಗಲಿಲ್ಲ. ಜೈಟ್ಲಿ ಫೋನಿನಲ್ಲಿ ಅದೇನೆಂದರೋ ಅದಕ್ಕೆ ಪ್ರತಿಯಾಗಿ ಯಡ್ಡಿ ಏನಂದರೋ ಗೊತ್ತಿಲ್ಲ. ಸೋಮವಾರ ಸಂಜೆ 4 ಕ್ಕೆ ಎರಡರಲ್ಲೊಂದು ಗ್ಯಾರಂಟಿ ಎಂದಿದ್ದ ಯಡ್ಡಿ ಏಕಾಏಕಿ ತಣ್ಣಗಾಗಿದ್ದು ಇಡೀ ಪಟಾಕಿಯೇ ಠುಸ್ ಎಂದಂತಾಯ್ತು. ಅದಕ್ಕೂ ಮುನ್ನ ಏಕಾಏಕಿ ಸೋನಿಯಾ ಗಾಂಧಿಯನ್ನು ಹೊಗಳಿ ತಮ್ಮ ಹೈಕಮಾಂಡ್ ಅನ್ನು ಕುಟುಕಿದ ಯಡ್ಡಿಗೆ ಅದೇ ಮುಳುವಾಗಿತ್ತು.



ಸಿಬಿಐ ಉರುಳಿಗೆ ಹೆದರಿ ಯಡ್ಡಿ ಪಕ್ಷವನ್ನು ಒಡೆಯುತ್ತಾರೆಂಬ ನಿರೀಕ್ಷೆಗೆ ಬಿದ್ದ ಹೈಕಮಾಂಡ್ ಯಡ್ಡಿ ವಿಷಯದಲ್ಲಿ ಇನ್ನಷ್ಟು ನಿಷ್ಠುರವಾಗಿತ್ತು. ಹಾಗಂತ ಸಿಬಿಐ ಕುಣಿಕೆಯಾದರೂ ಸಡಿಲ ಗೊಂಡಿತೇ. ಇಲ್ಲೂ ಯಡ್ಡಿಗೆ ನಿರಾಶೆಯೇ ಕಾದಿತ್ತು. ಸೋಮವಾರಕ್ಕೆ ಎಫ್‌ಐಆರ್ ದಾಖ ಲಾಗುತ್ತಿದ್ದಂತೆಯೇ ಮಂಗಳವಾರ ಬೆಳಗ್ಗೆ ಹಿಂದೆಂದೂ ಕಂಡರಿಯದ ಸಿಬಿಐ ದಾಳಿ ನಡೆದಿತ್ತು. ಹೆದರಿದ ಯಡ್ಡಿ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೊರೆ ಹೊಕ್ಕರೆ ಅಲ್ಲೂ ಫಲ ಕಾಣಲಿಲ್ಲ. ವಿಚಾರಣೆ ನಡೆಸದೆ ಕೋರ್ಟಾದರೂ ಏಕೆ ಮತ್ತು ಹೇಗೆ ನಿರೀಕ್ಷಣಾ ಜಾಮೀನು ನೀಡಲು ಸಾಧ್ಯ?


ಈ ಎಲ್ಲಾ ಭಾನಗಡಿಗಳ ಮಧ್ಯೆ ಯಡ್ಡಿ ಅದೆಷ್ಟು ಹೈರಾಣಾದರೆಂದರೆ ಕೇಂದ್ರದ ಕಾಂಗ್ರೆಸ್ ಸರ್ಕಾರವನ್ನು ಒಲೈಸಿದರಷ್ಟೇ ಸಿಬಿಐ ಕುಣಿಕೆ ಯಿಂದ ತಾನು ಬಚಾವಾಗಬಹುದೆಂದು ಬಿಜೆಪಿ ನಾಯಕ ಅನಂತ್, ರಾಜ್ಯಾಧ್ಯಕ್ಷ ಈಶ್ವರಪ್ಪ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಸಂತೋಷ್‌ಜಿಯೇ ತನ್ನೆಲ್ಲಾ ದುರ್ಗತಿಗೆ ಮೂಲ ಎಂಬಂತೆ ದಾಳಿಗಿಳಿದರು. ಯಾವತ್ತು ತನ್ನದೇ ಪಕ್ಷದ ನಾಯಕರ ವಿರುದ್ಧ ಯಡ್ಡಿ ಕಿಡಿಕಾರಿದ್ದು ಗೊತ್ತಾಯಿತೋ ಅತ್ತ ದೆಹಲಿಯಲ್ಲಿ ಯಡ್ಡಿ ವಿರುದ್ಧ ಹೈಕಮಾಂಡ್ ಅಸಹನೆ ಇಮ್ಮಡಿಗೊಂಡಿತ್ತು. ಅಲ್ಲಿಗೆ ಪಕ್ಷದಿಂದಾಚೆಗೆ ಒಂದು ಕಾಲಿಟ್ಟೇ ಯಡ್ಡಿ ಕಾಂಗ್ರೆಸ್ ಓಲೈಕೆಗಿಳಿದಿದ್ದಾರೆಂಬುದು ನಿಚ್ಚಳವಾಗಿತ್ತು.

ಇದು ಸಾಬೀತಾಗಿದ್ದು ಮೇ 17 ರ ಗುರುವಾರ. ತಾನು ರೇಸ್‌ಕೋರ್ಸ್ ರಸ್ತೆಯ ನಿವಾಸವನ್ನೇ ಬದಲಾಯಿಸುತ್ತೇನೆಂದು ಯಡ್ಡಿ ಮಲ್ಲೇಶ್ವರದ ಹಳೇ ಬಿಜೆಪಿ ಕಚೇರಿಯನ್ನು ತನ್ನ ಹೊಸ ಅಡ್ಡೆಯನ್ನಾಗಿ ಮಾಡಿಕೊಂಡಿದ್ದು ಬಿಜೆಪಿ ವಿರುದ್ಧದ ಯಡ್ಡಿಯ ಅಸಹನೆಯನ್ನು ಮತ್ತೊಮ್ಮೆ ಬಯಲುಗೊಳಿಸಿತ್ತು. ಪಕ್ಷದ ಕಚೇರಿಯಿದ್ದೂ ತನ್ನದೇ ಪ್ರತ್ಯೇಕ ಕಚೇರಿ ತೆರೆಯುತ್ತಾರೆಂದರೆ, ರೇಸ್‌ಕೋರ್ಸ್ ರಸ್ತೆಯ ತನ್ನ ನಿವಾಸವನ್ನೇ ಖಾಲಿ ಮಾಡುತ್ತಾರೆಂದರೆ ಅದು ಮುಖ್ಯಮಂತ್ರಿ, ಸದಾನಂದ ಗೌಡರ ವಿರುದ್ಧದ ಯಡ್ಡಿಯ ಕೊನೆಯ ರಣತಂತ್ರವಲ್ಲದೆ ಮತ್ತೇನು?

ಯಡ್ಡಿ ಮತ್ತು ಬಿಜೆಪಿ ಮಧ್ಯೆ ಉಳಿದಿರುವುದು ಎಳೆಯಷ್ಟು ಮಾತ್ರದ ಸಂಬಂಧ. ತುಂಡಾಗುವುದು ಎಷ್ಟು ಹೊತ್ತು?

ಧಾರವಾಡ: ಶೆಟ್ಟರ್, ಬಸು ಜಗಳದಲ್ಲಿ ಬಡವಾಗಿರುವ ಬಿಜೆಪಿ ಶಾಸಕರು

"ಇತ್ತ ದರಿ ಅತ್ತ ಹುಲಿ ಎಂಬಂತಾಗಿದೆ ಧಾರವಾಡ ಜಿಲ್ಲೆಯ ಬಿಜೆಪಿ ಶಾಸಕರ ಪರಿಸ್ಥಿತಿ. ಕಳೆದ ನಾಲ್ಕು ವರ್ಷಗಳನ್ನು ಆಂತರಿಕ ಹಗ್ಗಜಗ್ಗಾಟದಲ್ಲೇ ಕಳೆದ ಬಿಜೆಪಿ ಸರಕಾರ ಈವಾಗ ಬೀಳುತ್ತೆ, ನಾಳೆ ಬೀಳುತ್ತೆ ಎಂಬ ಸ್ಥಿತಿಯಲ್ಲೇ ಮುಂದುವರೆದಿರುವುದರಿಂದ ಚಡ್ಡಿ ಶಾಸಕರು ಬರುವ ಚುನಾವಣೆಯಲ್ಲಿ ಸೋಲುವ ಭಯದಿಂದ ತತ್ತರಿಸುತ್ತಿದ್ದಾರೆ. ಅದರಲ್ಲೂ ಪ್ರಥಮ ಬಾರಿಗೆ ವಿಧಾನ ಸಭೆಯ ಬಾಗಿಲು ತಟ್ಟಿರುವವರ ಸ್ಥಿತಿಯಂತೂ ಚಿಂತಾಜನಕವಾಗಿದೆ. ಇತ್ತ ಆರಾಮವಾಗಿ ಕುಳಿತು ಅಧಿಕಾರ ಅನುಭವಿಸುವಂತಿಲ್ಲ, ಅತ್ತ ಅಧಿಕಾರವನ್ನು ಬಿಸಾಕಿ ಹೊರನಡೆಯುವ ಧೈರ್ಯವೂ ಇಲ್ಲದೆ ಅವರೆಲ್ಲ ವಿಲವಿಲ ಒದ್ದಾಡುತ್ತಿದ್ದಾರೆ.




ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಕಡೆಗೆ ವಾಲಿದರೆ ಮುಖ್ಯಮಂತ್ರಿ ಆಕಾಂಕ್ಷಿ ಜಗದೀಶ್ ಶೆಟ್ಟರ್‌ಗೆ ಸಿಟ್ಟು, ಶೆಟ್ಟರ್ ಕಡೆಗೆ ವಾಲಿದರೆ ಯಡ್ಡಿಗೆ ಕೋಪ. ಇವರಿಬ್ಬರ ಮಧ್ಯೆ ಬಸವರಾಜ್ ಬೊಮ್ಮಾಯಿ ಎಂಬ ಶಕುನಿಯ ಆಟ. ಹೈರಾಣಾಗುವುದಕ್ಕೆ ಇದಕ್ಕಿಂತ ಇನ್ನೇನು ಬೇಕು?

ಧಾರವಾಡ ಜಿಲ್ಲೆಯಲ್ಲಿ ಶೆಟ್ಟರ್ ಗುಂಪಿಗೆ ಸರಿಸಾಟಿಯಾಗಿ ನಿಂತಿದೆ ಯಡ್ಡಿಯ ಗುಂಪು. ಶೆಟ್ಟರ್ ಲಿಂಗಾಯತ ಸಮುದಾಯದಲ್ಲಿ ಬೆಳೆಯುವುದು ಯಡ್ಡಿಗೆ ಬೇಕಿಲ್ಲ, ಆದರೆ ಅದೇ ಶೆಟ್ಟರ್‌ಅನ್ನು ಅಸ್ತ್ರವಾಗಿ ಉಪಯೋಗಿಸಿಕೊಂಡು ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕೆ ಯಡ್ಡಿ ಹಿಂಜರಿಯುವುದಿಲ್ಲ, ಯಾವ ಕ್ಷಣದಲ್ಲಿ ಶೆಟ್ಟರ್‌ಗೆ ಯಡ್ಡಿ ಬತ್ತಿ ಇಡುತ್ತಾರೆ ಎಂಬುದು ಗೊತ್ತಿಲ್ಲದಿದ್ದರೂ ಇವರಿಬ್ಬರ ನಡುವಿನ ಸ್ನೇಹ ತಾತ್ಕಾಲಿಕವಾದದ್ದು ಎಂಬುದು ಎಲ್ಲರಿಗೂ ಗೊತ್ತು, ಆ ಕಾರಣಕ್ಕೆ ಶೆಟ್ಟರ್ ಒಂದು ಕಾಲನ್ನು ಯಡ್ಡಿ ಮನೆಯಲ್ಲೂ ಇನ್ನೊಂದು ಕಾಲನ್ನು ಅನಂತಕುಮಾರ್ ಮನೆಯಲ್ಲೂ ಇಟ್ಟಿದ್ದಾರೆ.




ಹಿಂದಿನಿಂದಲೂ ಯಡ್ಡಿ ಧಾರವಾಡದಲ್ಲಿ ತನ್ನ ಸ್ಥಾನವನ್ನು ಗಟ್ಟಿಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇದ್ದಾರೆ. ಆ ನಿಟ್ಟಿನಲ್ಲಿ ಶೆಟ್ಟರ್‌ಗೆ ಪರ್ಯಾಯ ನಾಯಕನಾಗಿ ಬಸು ಬೊಮ್ಮಾಯಿಯನ್ನು ಬೆಳೆಸಿತ್ತು, ಜೊತೆಜೊತೆಗೆ ಕುಂದಗೋಳ ಶಾಸಕ ಎಸ್.ಐ. ಚಿಕ್ಕನಗೌಡನ ಕುಟುಂಬದೊಂದಿಗೆ ಸಂಬಂಧ ಬೆಳೆಸಿದ್ದು, ಹಾಗೇ ಧಾರವಾಡ ಶಹರ ಶಾಸಕ ಬೆಲ್ಲದ ಅಜ್ಜನೊಂದಿಗೆ ಯಡ್ಡಿಯ ಕುಟುಂಬದ ಸಂಬಂಧ ಗಟ್ಟಿಗೊಳಿಸಿದ್ದು. ಈ ಮಧ್ಯೆ ಎಂಎಲ್‌ಸಿ ಮೋಹನ ಲಿಂಬಿಕಾಯಿ, ಧಾರವಾಡ ಗ್ರಾಮೀಣ ಶಾಸಕಿ ಸೀಮಾ ಮಸೂತಿ, ಮಾಜಿ ಶಾಸಕ ಹಾಗೂ ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧ್ಯಕ್ಷ ಅಶೋಕ ಕಾಟವೆ ಹಾಗೂ ಕಲಘಟಗಿಯ ಮಾಜಿ ಅಧ್ಯಕ್ಷ ಲಿಂಬಣ್ಣನವರ ಅವರನ್ನೆಲ್ಲ ಯಡ್ಡಿ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾನೆ.

ಬಸವರಾಜು ಬೊಮ್ಮಾಯಿ ಉರ್ಫ್ ಬಸು ಬೊಮ್ಮಾಯಿ ಯಡ್ಡಿಗೆ ಬಕೆಟು ಹಿಡಿಯುತ್ತಲೆ ಮಂತ್ರಿಗಿರಿ ಗಿಟ್ಟಿಸಿಕೊಂಡಿದ್ದು ಸುಳ್ಳಲ್ಲ, ಅಷ್ಟೇ ಅಲ್ಲದೆ, ತನ್ನೊಂದಿಗೆ ಜೆಡಿಯು ಪಕ್ಷದಿಂದ ಬಿಜೆಪಿಗೆ ವಲಸೆ ಬಂದಿದ್ದ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆರು ಜನ ಸದಸ್ಯರ ನೆರವು ಪಡೆದು ಪ್ರಸ್ತುತ ಪಾಲಿಕೆಯ ಕೊನೆಯ ಅವಧಿಯಲ್ಲಿ ತನ್ನ ಗುಂಪಿನ ಪಾಂಡುರಂಗ ಪಾಟೀಲರಿಗೆ ಮೇಯರ್ ಸ್ಥಾನ ದೊರೆಯುವಂತೆ ಬಸು ನೋಡಿಕೊಂಡಿದ್ದಾನೆ. ಜೊತೆಗೆ ತನ್ನ ಗುಂಪಿನ ಚಂದ್ರಶೇಖರ ಮನಗುಂಡಿಗೆ ಉಪಮೇಯರ್ ಸ್ಥಾನವನ್ನೂ, ಅಶ್ವಿನಿ ಮಜ್ಜಗಿ, ರಾಮಣ್ಣ ಬಡಿಗೇರ, ವಿಜಯಲಕ್ಷ್ಮಿ ಹೊಸಕೋಡಿ ಮುಂತಾದವರಿಗೆ ಫಲವತ್ತಾದ ಸ್ಥಾಯಿ ಸಮಿತಿಗಳನ್ನೂ ಕೊಟ್ಟಿದ್ದಾನೆ ಬಸು. ಅಂದರೆ ಬಸು ಬೊಮ್ಮಾಯಿ ಜೊತೆ ಬಿಜೆಪಿಗೆ ವಲಸೆ ಬಂದವರೆಲ್ಲರಿಗೂ ಮಹತ್ವದ ಹುದ್ದೆಗಳೇ ದೊರೆತಿದ್ದರೆ ಶೆಟ್ಟರ್ ಗುಂಪಿಗೇ ಏನೂ ಸಿಕ್ಕಿಲ್ಲ, ಸಹಜವಾಗಿಯೇ ಇದು ಶೆಟ್ಟರ್ ಗುಂಪಿನ ನಿದ್ದೆ ಕೆಡಿಸಿದೆ.


ನಿರಾಣಿ

ಆದರೆ ಶೆಟ್ಟರ್ ಸುಮ್ಮನೆ ಕೂತಿಲ್ಲ, ತಮ್ಮ ಅಡುಗೆಮನೆಯ ಶಿಷ್ಯ ಸಾವಕಾರ್ ಎಂಬಾತನಿಗೆ ವಾಯುವ್ಯ ಸಾರಿಗೆ ಸಂಸ್ಥೆಯ ಅಧ್ಯಕ್ಷ ಗಾದಿಯನ್ನೂ, ಮತ್ತೊಬ್ಬ ಹಿಂಬಾಲಕ ಲಿಂಗರಾಜ ಪಾಟೀಲನಿಗೆ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ದ ಅಧ್ಯಕ್ಷಗಿರಿಯನ್ನೂ ಶೆಟ್ಟರ್ ದಯಪಾಲಿಸಿದ್ದಾರೆ. ಸಾವಕಾರ್ ಈಗ ಸಾರಿಗೆ ಸಂಸ್ಥೆಯಲ್ಲಿರುವ ಎಲ್ಲಾ ಜಾಗಗಳಲ್ಲಿ ಮೇಯಲು ಶುರುವಿಟ್ಟುಕೊಂಡಿದ್ದ, ಅಷ್ಟಕ್ಕೆ ಸುಮ್ಮನಾಗದೆ ಸಾರಿಗೆ ಇಲಾಖೆಯ ಕೆಲಸಗಾರರಿಗೆ ಅನಗತ್ಯ ಕಿರುಕುಳ ನೀಡಲಾರಂಭಿಸಿದ್ದ. ತನಗೆ 'ಜೀ ಹುಜೂರ್' ಎನ್ನದಿರುವವರಿಗೆ ಟ್ರಾನ್ಸ್‌ಫರ್, ಅಮಾನತ್ ಎಂಬ ಶಿಕ್ಷೆ ವಿಧಿಸುತ್ತಿದ್ದ. ಸಾವಕಾರ್‌ನ ಕಿರುಕುಳ ತಾಳಲಾರದೆ ಸಾರಿಗೆ ಸಂಸ್ಥೆಯಲ್ಲಿರುವ ಎಲ್ಲಾ ಕಾರ್ಮಿಕ ಸಂಘಟನೆಗಳು ಒಂದಾಗಿ ಇವನ ವಿರುದ್ಧ ಸೆಡ್ಡುಹೊಡೆದವು. ಪರಿಣಾಮವಾಗಿ ಈಗ ಸಾವಕಾರ್ ಬಾಲ ಮುರಿದುಕೊಂಡು ಮನೆ ಸೇರಿದ್ದಾನೆ.

ಶೆಟ್ಟರ್ ಅವರ ಮತ್ತೊಬ್ಬ ಹಿಂಬಾಲಕ ಲಿಂಗರಾಜ ಪಾಟೀಲ ಹುಡಾದಲ್ಲ ಮಾಡಿದ ಅವಾಂತರಗಳಿಗೆ ಲೆಕ್ಕವಿಲ್ಲ, ಆತ ಹುಡಾದ ಅಧ್ಯಕ್ಷನಾಗಿದ್ದಾಗ ಆರು ತಿಂಗಳ ಹಿಂದೆ ಸುಳ್ಳು ದಾಖಲೆ ನೀಡಿ ಹುಡಾದಿಂದ ನಿವೇಶನವನ್ನು ಅಕ್ರಮವಾಗಿ ಪಡೆದಿದ್ದು, ಈ ಗೋಲ್‌ಮಾಲ್ ಬಹಿರಂಗವಾಗುತ್ತಲೆ ಆ ನಿವೇಶನವನ್ನು ಹುಡಾಗೆ ಹಿಂದಿರುಗಿಸಿದ್ದ, ಶೆಟ್ಟರ್ ಅವರ ಕೃಪೆಯಿಂದಾಗಿ ಈ ಅಕ್ರಮ ಸೈಟು ಗಿರಾಕಿ ಈಗ ಮತ್ತೆ ಹುಡಾದ ಅಧ್ಯಕ್ಷ ಗಾದಿಗೆ ಒಕ್ಕರಿಸಿದ್ದಾನೆ. ಈ ಮಧ್ಯೆ ಯಡ್ಡಿ ತನ್ನ ಸಂಬಂಧಿಗಳಾದ ಕುಂದಗೋಳದ ಶಾಸಕ ಚಿಕ್ಕನಗೌಡ್ರ ಮತ್ತು ಧಾರವಾಡ ಶಹರ ಶಾಸಕ ಬೆಲ್ಲದ ಅವರುಗಳಿಗೆ ನಿಗಮದ ಅಧ್ಯಕ್ಷಗಿರಿ ನೀಡಿ ತೃಪ್ತಿಪಡಿಸಿದ್ದಾನೆ.


ಚಂದ್ರಶೇಖರ್ ಬೆಲ್ಲದ

ಈ ಹಿಂದೆ ಶೆಟ್ಟರ್ ಗುಂಪಿನೊಂದಿಗೆ ಗುರುತಿಸಿಕೊಳ್ಳುವ ಮೂಲಕ ಪ್ರಥಮ ಬಾರಿಗೆ ಶಾಸಕನಾಗಿರುವ ದಲಿತ ಯುವಕ ವೀರಭದ್ರಪ್ಪ ಹಾಲಹರವಿ ಇವತ್ತು ಸ್ವತಂತ್ರವಾಗಿ ಯಾವುದೇ ನಿರ್ಣಯ ಕೈಗೊಳ್ಳದ ಪರಿಸ್ಥಿತಿಯಲ್ಲಿ ಒದ್ದಾಡುತ್ತಿದ್ದಾರೆ. ಅದಕ್ಕೆ ಮೂಲಕಾರಣ ಹಿರಿಯ ಚಡ್ಡಿ ಕಂ ಸಂಸದ ಪ್ರಹ್ಲಾದ್ ಜೋಶಿ. ಈ ಜೋಶಿ ಈ ಪ್ರದೇಶದ ಎಲ್ಲಾ ಶಾಸಕರ ಮೇಲೆ ಹಿಡಿತ ಸಾಧಿಸಲು ಯತ್ನಿಸಿ ಎಲ್ಲಾ ವಿಷಯಗಳಲ್ಲಿ ತಲೆ ತೂರಿಸಲಾರಂಭಿಸಿದ. ಅದನ್ನು ಕಂಡು ಶಾಸಕ ಹಾಲಹರವಿಗೆ ಕಿರಿಕಿರಿಯಾಗಿದೆ. ಆದರೆ ಇದನ್ನು ಬಹಿರಂಗವಾಗಿ ಹೇಳಲು ಆಗದೆ ಸುಮ್ಮನಿದ್ದಾನೆ.

ಶಾಸಕರಾದ ಚಿಕ್ಕನಗೌಡ್ರ, ಬೆಲ್ಲದ, ಶಂಕರಪಾಟೀಲ ಮುನೇನಕೊಪ್ಪ - ಈ ಮೂವರು ಶೆಟ್ಟರ್‌ಗಾಗಲಿ, ಜೋಶಿಗಾಗಲಿ ಡೋಂಟ್ ಕೇರ್ ಎನ್ನುತ್ತಿದ್ದಾರೆ. ಅದರಲ್ಲೂ ನವಲಗುಂದದಿಂದ ಪ್ರಥಮ ಬಾರಿಗೆ ಆಯ್ಕೆಗೊಂಡಿರುವ ಶಾಸಕ ಪಾಟೀಲ ಮುನೇನಕೊಪ್ಪ ಹೇಳಿಕೇಳಿ ಬಸು ಬೊಮ್ಮಾಯಿ ಕೃಪೆಯಿಂದಲೇ ಬಿಜೆಪಿ ಟಿಕೇಟು ಗಿಟ್ಟಿಸಿಕೊಂಡು ಆಯ್ಕೆಗೊಂಡಿದ್ದು. ಪ್ರಭಾವಿ ಲಿಂಗಾಯತ ಸಮುದಾಯದಲ್ಲೇ ಅತಿಹೆಚ್ಚಿನ ಸಂಖ್ಯಾಬಲವನ್ನು ಹೊಂದಿರುವ ಪಂಚಮಶಾಲಿ ಜನಾಂಗಕ್ಕೆ ಈ ಮುನೇನಕೊಪ್ಪ ಸೇರಿದ್ದಾನೆ. ತನ್ನ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಲು ಈತ ಯಡ್ಡಿಯ ನೆರವು ಪಡೆದಿದ್ದ. ತಥಾಸ್ತು ಎಂದಿದ್ದ ಯಡ್ಡಿ ಇಡೀ ಧಾರವಾಡ ಜಿಲ್ಲೆಯಲ್ಲಿಯೇ ಅತಿ ಹೆಚ್ಚಿನ ಆರ್ಥಿಕ ನೆರವನ್ನು ನೀಡಿದ್ದು ನವಲಗುಂದ ಕ್ಷೇತ್ರಕ್ಕೆ. ಈಗ ಈ ಹಿಂದುಳಿದ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಗಳು ಆಗಿವೆ. ಅಷ್ಟೇ ಅಲ್ಲದೆ, ಇಡೀ ನವಲಗುಂದ ಕ್ಷೇತ್ರದಲ್ಲಿರುವ ಎಲ್ಲಾ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿಗಳನ್ನು ತನ್ನ ತೆಕ್ಕೆಗೆ ಮುನೇನಕೊಪ್ಪ ತೆಗೆದುಕೊಂಡಿದ್ದಾನೆ. ಮುನೇನಕೊಪ್ಪನಿಗೆ ಸಂಘಪರಿವಾರದ ಹಿನ್ನೆಲೆ ಇಲ್ಲದಿದ್ದರೂ ಆತ ವೈಯಕ್ತಿಕ ಬಲವರ್ಧನೆ ಮಾಡಿಕೊಳ್ಳುತ್ತಾ ಸಾಗಿದ್ದಾನೆ. ಇದೆಲ್ಲವೂ ಆತ ಶೆಟ್ಟರ್ ಹಾಗೂ ಜೋಶಿಗೆ ಡೋಂಟ್ ಕೇರ್ ಎನ್ನಲು ಕಾರಣವಾಗಿದೆ.

ದಿನೇದಿನೇ ಯಡಿಯೂರಪ್ಪ ಮುಖ್ಯಮಂತ್ರಿ ಹುದ್ದೆಯಿಂದ ದೂರವಾಗುತ್ತಾ ಜೈಲು ಬಾಗಿಲುಗಳಿಗೆ ಹತ್ತಿರಾಗುತ್ತಾ ಇರುವ ಇವತ್ತಿನ ಸಂದರ್ಭದಲ್ಲಿ ಆತನ ತಲೆಗೆ ಮಾಲಿಷ್ ಮಾಡುತ್ತ ಬೆಂಗಳೂರಿನಿಂದ ದೆಹಲಿತನಕ ಪಾದರಸದಂತೆ ಓಡಾಡುತ್ತಿರುವ ಬಸು ಬೊಮ್ಮಾಯಿ ಮತ್ತು ಶೋಭಾ ಕರಂದ್ಲಾಜೆ ಈಗ ತಾವೇ ತಲೆದಂಡ ತೆರುವ ಪರಿಸ್ಥಿತಿಯನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಆದ್ದರಿಂದ ಅವರಿಬ್ಬರು ಈಗ ಸಿಸಿ ಪಾಟೀಲ, ಸಿ.ಎಂ. ಉದಾಸಿ, ಮುರುಗೇಶ ನಿರಾಣಿ ಜೊತೆ ಸೇರಿಕೊಂಡು ಹೊಸ ಆಟ ಶುರುಹಚ್ಚಿಕೊಂಡಿದ್ದಾರೆ. ಅದೇನೆಂದರೆ ಹಾಲಿ ಸಿ.ಎಂ. ಸದಾನಂದ ಗೌಡರ ವಿರುದ್ಧ ಜಗದೀಶ ಶೆಟ್ಟರ್ ಅನ್ನು ಎತ್ತಿಕಟ್ಟುವುದು. ಆದರೆ ಇವರ ಆಟವನ್ನು ಬಲ್ಲ ಶೆಟ್ಟರ್ ಬಹಳ ಎಚ್ಚರಿಕೆಯಿಂದ ತಾನು ಪಕ್ಷ ಬಿಟ್ಟು ಹೊರಬರಲಾರೆ ಎಂದರು. ಇದು ಯಡ್ಡಿಗೆ ಮರ್ಮಾಘಾತವನ್ನುಂಟುಮಾಡಿತು.


ಬಸವರಾಜು...


ಶೆಟ್ಟರ್‌ಗೆ ಕೂಡಾ ಬಸು ಬೊಮ್ಮಾಯಿ ಮಂತ್ರಿಯಾಗಿ ಮುಂದುವರೆಯುವುದು ಬೇಕಿಲ್ಲ. ಅದೇ ಹೊತ್ತಿಗೆ ಸದಾನಂದ ಗೌಡರ ವಿರುದ್ಧ ವೈರತ್ವ ಕಟ್ಟಿಕೊಳ್ಳಲೂ ಇಷ್ಟವಿಲ್ಲ. ತಾನು ತಟಸ್ಥನಾಗಿದ್ದು ಒಂದು ವೇಳೆ ಅಧಿಕಾರವು ಅನಾಯಾಸವಾಗಿ ಸಿಕ್ಕರೆ ಸಿಗಲಿ ಎನ್ನುವ ಆಲೋಚನೆ ಶೆಟ್ಟರ್ ಅವರದ್ದು. ಈ ಹಿನ್ನೆಲೆಯಲ್ಲಿ ಶೆಟ್ಟರ್‌ಗೆ ಮುಖ್ಯಮಂತ್ರಿ ಗಾದಿ ತೋರಿಸಿಯೇ ಅವರನ್ನು ಎದುರಿಗೆ ಇಟ್ಟುಕೊಂಡು ಆಟ ಆಡಲು ಹೊರಟಿದ್ದ ಯಡ್ಡಿ, ಬಸು ಮತ್ತು ಶೋಭಾಳ ಗೇಮ್ ಪ್ಲಾನ್ ಫೇಲ್ ಆಯಿತು.

ಅದೇನೇ ಇರಲಿ, ಧಾರವಾಡ ಜಿಲ್ಲೆಯ ಅದರಲ್ಲೂ ಹುಬ್ಬಳ್ಳಿಯವರೇ ಆದ ಜಗದೀಶ ಶೆಟ್ಟರ್ ಹಾಗೂ ಬಸು ಬೊಮ್ಮಾಯಿ ನಡುವಿನ ಜಗಳದಿಂದಾಗಿ ಈ ಪ್ರದೇಶದ ಬಿಜೆಪಿ ಶಾಸಕರು ಮತ್ತು ಸಾಮಾನ್ಯ ಜನರೂ ಬೇಸತ್ತಿರುವುದು ಸುಳ್ಳಲ್ಲ.

• ಹುಬ್ಬಳ್ಳಿಯಾಂವ

ಕಲಬುರ್ಗಿ ವಿವಿ: ವಿದ್ಯಾರ್ಥಿಗಳಿಗೆ ಮೋಸ

ಕಲಬುರ್ಗಿ ವಿಶ್ವವಿದ್ಯಾಲಯವು ಈ ಭಾಗದ ಜನಗಳ ಬೌದ್ಧಿಕ ವಿಕಾಸ ಹಾಗೂ ಇಲ್ಲಿನ ಎಲ್ಲಾ ಮಕ್ಕಳು ಉನ್ನತ ಶಿಕ್ಷಣ ಪಡೆಯಲಿ ಎಂಬ ಮಹದಾಸೆಯೊಂದಿಗೆ ಆರಂಭಗೊಂಡಿತು. ಆದರೆ ಇದುವರೆಗೆ ಈ ವಿಶ್ವವಿದ್ಯಾಲಯ ಮಾಡಿದ ಘನಂದಾರಿ ಕೆಲಸಗಳನ್ನು ಗಮನಿಸಿದರೆ ಯಾರಿಗಾದರೂ ಗುಲ್ಬರ್ಗಾ ವಿವಿಯ ಬಗ್ಗೆ ಕ್ರೋಧ ಹಾಗೂ ಜಿಗುಪ್ಸೆ ಒಮ್ಮೆಗೆ ಮೂಡುತ್ತವೆ. ಇಲ್ಲಿನ ನೆಲದ ಗುಣವೋ ಅಥವಾ ಏನೂ ಅರಿಯದ ಮುಗ್ಧ ಜನರನ್ನು ಹೇಗಾದರೂ ಯಾಮಾರಿಸಬಹುದು ಎಂಬ ಉಮೇದೋ ಗೊತ್ತಿಲ್ಲ, ಆದರೆ ಇದುವರೆಗೆ ಈ ವಿವಿಗೆ ಬಂದಿರುವ ಎಲ್ಲಾ ಕುಲಸಚಿವರು (ಎಸ್. ರುದ್ರಯ್ಯ ಅವರನ್ನು ಹೊರತು ಪಡಿಸಿ) ಒಂದಿಲ್ಲೊಂದು ಹಗರಣಗಳನ್ನು ಮಾಡಿ ಎದ್ದು ಹೋದವರೇ ಆಗಿದ್ದಾರೆ.


ಈ.ಟಿ.ಪುಟ್ಟಯ್ಯ


ಡಾ. ಹಾಮಾ ನಾಯಕ ಅವರಂಥ ವಾಗ್ಮಿಗಳು, ಸಾಹಿತಿಗಳು, ಪಂಡಿತರೂ ಇಲ್ಲಿಯ ನೆಲಗುಡಿಸಿ ರಂಗೋಲಿ ಹಾಕಿ ಹೋಗಿದ್ದಾರೆಂದರೆ ನೀವೇ ಊಹಿಸಿ. ಹೀಗಾಗಿ ಹಲವಾರು ಸಲ ಈ ವಿಶ್ವವಿದ್ಯಾಲಯವನ್ನು ಗುಲಬರ್ಗಾ ಯುನಿವರ್ಸಿಟಿ ಎಂಬುದಕ್ಕೆ ಬದಲಾಗಿ ಗುಲಬರ್ಗಾ ಜಾನುವರ ಸಿಟಿ ಎಂದೇ ಪತ್ರಿಕೆ ಗೇಲಿ ಮಾಡಿದೆ. ಆದರೂ ಇಲ್ಲಿ ಬಿಲ ತೋಡಿಕೊಂಡು ಹೆಗ್ಗಣಗಳಂತೆ ಕುಂತಿರುವವರಿಗೆ ಇದು ಅರ್ಥವೇ ಆಗಿಲ್ಲ, ಆಗುವುದೂ ಇಲ್ಲ.

ಈ.ಟಿ.ಪುಟ್ಟಯ್ಯ ಎಂಬಾತ ಇಲ್ಲಿಗೆ ಉಪಕುಲಸಚಿವನಾಗಿ ಬಂದಾಗಿನಿಂದಲೂ ಲಕ್ಷಾಂತರ ರೂಪಾಯಿ ನೀರಿನಂತೆ ವಿಶ್ವವಿದ್ಯಾಲಯಕ್ಕೆ ಹರಿದು ಬಂದಿದೆ. ಈ ಹಣವನ್ನು ತಾವೇ ಹೇಗೆ ಬಳಸಿಕೊಳ್ಳಬಹುದು ಎಂಬ ಚಾಲಾಕಿತನವನ್ನು ಇಲ್ಲಿನ ಬೋಧಕ ಸಿಬ್ಬಂದಿ ಹಾಗೂ ಕಚೇರಿಯ ಎಲ್ಲ ನೌಕರರೂ ಮೈಗೂಡಿಸಿಕೊಂಡಿದ್ದಾರೆ. ಹೀಗಾಗಿ ಎಲ್ಲರೂ ಇಲ್ಲಿ ಸಂಪನ್ನರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ.


ಕಳೆದ 2010-2011ನೇ ಸಾಲಿನ ವಿವಿಯ ಘಟಿಕೋತ್ಸವದಲ್ಲಿ ನೀಡಲಾದ ಗೌರವ ಡಾಕ್ಟರೇಟ್‌ಗಳನ್ನು ಬಿಕರಿ ಮಾಡಲಾಗಿತ್ತು, ಸಮಾಜಕ್ಕೆ ನಿತ್ಯವೂ ಮಟ್ಕಾ ನಂಬರ ಹೇಳುವ ನಟೋರಿಯಸ್ ಸ್ವಾಮೀಜಿಗಳಿಗೆ, ಧೂಮ್ ಮಚಾಲೆ ಹಾಡಿನೊಂದಿಗೆ ತನ್ನ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವ ಉಲಿಕೋಚಿಗಳಿಗೆ, ದುಡ್ಡು ಕೊಟ್ಟವರಿಗೆಲ್ಲ ಗೌರವ ಡಾಕ್ಟರೇಟ್ ನೀಡಿ ತನ್ನ ಮಾನವನ್ನು ಹಾದುಹಗಲೇ ಮುಂದಾಮುಚ್ಚಿಕೊಂಡಿತ್ತು ವಿವಿ.

ಮತ್ತೊಂದು ದುಗುಡದ ಹಾಗೂ ದಿಗ್ಭ್ರಮೆ ಮೂಡಿಸುವ ಸಂಗತಿಯೆಂದರೆ ಕಳೆದ ವರ್ಷ 29-3-2011 ರಂದು ಕಾನೂನಾತ್ಮಕವಾದ ಯಾವುದೇ ಚೌಕಟ್ಟುಗಳಿಗೆ ಒಳಗಾಗದೆ ದೇಶದಾದ್ಯಂತ 70 ಸಂಸ್ಥೆಗಳಿಗೆ ಎಂಬಿಎ, ಎಂಸಿಎ, ಬಿಸಿಎ, ಬಿಬಿಎ ಹಾಗೂ ಪಿಜಿಡಿಬಿಎ ಕೋರ್ಸ್‌ಗಳನ್ನು ಕಲಿಸಲು ಮಾನ್ಯತೆ ನೀಡಿ ವಿವಿ ಸರ್ಟಿಫಿಕೇಟ್ ನೀಡಿತ್ತು, ಔಟ್‌ರೀಚ್ ಪ್ರೋಗ್ರಾಮ್‌ನ (ಸೆಕ್ಷನ್: 5, ಸೆಕ್ಷನ್ 29 (2), (ಟಿ), ಸೆಕ್ಷನ್ 40 (1), ಮತ್ತು ಸೆಕ್ಷನ್ 66 ಕೆ.ಎಸ್.ಯು ಆ್ಯಕ್ಟ್ 2000) ಅಡಿಯಲ್ಲಿ ಇದಕ್ಕೆ ಮಾನ್ಯತೆ ನೀಡಿದ್ದಾಗಿ ವಿಶ್ವವಿದ್ಯಾಲಯ ಹೇಳಿಕೊಂಡಿತ್ತು, ಆದರೆ ಈ ಬಗೆಗೆ ರಾಜ್ಯಪಾಲರ ಒಪ್ಪಿಗೆಯನ್ನೂ ಪಡೆದಿಲ್ಲ, ಅಂದರೆ 'ಹಾಲಿಲ್ಲ ಬಟ್ಟಲಿಲ್ಲ ಗುಟುಕ್' ಎಂದರು ಎಂಬಂತೆ ಕಾನೂನಿನ ಯಾವುದೇ ಸಮ್ಮತಿ ಪಡೆಯದೆ ರಾಜ್ಯದ ಹಾಗೂ ಹೊರರಾಜ್ಯದ ಶಿಕ್ಷಣ ಸಂಸ್ಥೆಗಳಿಗೆ ಮೇಲ್ಕಾಣಿಸಿದ ಕೋರ್ಸ್‌ಗಳನ್ನು ಕಲಿಸಲು ಮಾನ್ಯತೆ ನೀಡಿ, ಸಾಕಷ್ಟು ಹಣವನ್ನು ಹೊಡಕೊಂಡದ್ದು ಅಂಗೈಯಲ್ಲಿನ ಹುಣ್ಣಿನಂತೆ ಸ್ಪಷ್ಟವಾಗಿದೆ.

ಯಾವಾಗ ಗುಲ್ಬರ್ಗಾದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಬಿಜಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಕಲಿಕೆ ಆರಂಭಿಸಿದ ವಿದ್ಯಾರ್ಥಿಗಳು ತಮ್ಮ ಸಂಸ್ಥೆ ವರ್ಷದ ಕೊನೆಯಲ್ಲಿ ಪರೀಕ್ಷೆಯನ್ನೂ ತೆಗೆದುಕೊಳ್ಳಲು ತಯಾರಾಗಲಿಲ್ಲವೋ ಆಗಲೆ ಅವರಿಗೆಲ್ಲ ಅನುಮಾನ ಬಂದು ಈ.ಟಿ.ಪುಟ್ಟಯ್ಯ ಎಂಬ ಉಪಕುಲಪತಿಗೆ, ರಜಿಸ್ಟ್ರಾರ್ ಎಸ್.ಎಲ್. ಹಿರೇಮಠ ಹಾಗೂ ಔಟ್‌ರೀಚ್ ಪ್ರೋಗ್ರಾಮ ಡೈರೆಕ್ಟರ್ ಆದ ಡಾ. ಚಂದ್ರಕಾಂತ ವೈ. ಯಾತನೂರ ಅವರಿಗೆ ಕಿರಿಕಿರಿ ಕೊಟ್ಟರು. ಆ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಏನೇನೋ ಸಬೂಬು ಹೇಳಿ ದಾಟಿ ಹಾಕಿದರು. ಯಾವಾಗ ಈ ಸಂಗತಿ ಮಾಜಿ ಮಂತ್ರಿ ಎಸ್.ಕೆ.ಕಾಂತಾ ಎಂಬ ಹೋರಾಟಗಾರನಿಗೆ ಗೊತ್ತಾಯಿತೋ ಆಗ ಈ ಇಡೀ ಹಗರಣ ಬಯಲಾಯಿತು.


ಹಿರೇಮಠ

ಗುಲಬರ್ಗಾ ವಿವಿ ಕೊಟ್ಟಿದ್ದ ಖೊಟ್ಟಿ ಮಾನ್ಯತೆಯನ್ನಾಧರಿಸಿ ಭಾರತದಾದ್ಯಂತ 70 ಖಾಸಗಿ ಸಂಸ್ಥೆಗಳು ಸುಮಾರು 80,000 ವಿದ್ಯಾರ್ಥಿಗಳಿಂದ ಫೀ ಹಾಗೂ ಡೊನೇಷನ್ ಪಡೆದುಕೊಂಡಿವೆ. ಒಂದು ವರ್ಷ ಇಂಥ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ್ದಾರೆ. ಇನ್ನೇನು ತಮ್ಮ ವ್ಯಾಸಂಗ ಮುಗಿಯಿತು ಎಂದು ನಂಬಿ ನಿರುಮ್ಮಳವಾಗಿ ಅವರೆಲ್ಲರೂ ಪರೀಕ್ಷೆಗಳನ್ನು ನೋಡುತ್ತಿದ್ದರು. ಆಗ ಒಮ್ಮಿಂದೊಮ್ಮೆ ತಮ್ಮ ಸಂಸ್ಥೆ ಪಡೆದ ವಿಶ್ವವಿದ್ಯಾಲಯದ ಮಾನ್ಯತಾ ಪತ್ರವೇ ಖೊಟ್ಟಿ ಎಂದು ಗೊತ್ತಾದಾಗ ಅವರಿಗೆ ಹೇಗಾಗಿರಬೇಡ? ವಿದ್ಯಾರ್ಥಿಗಳ ಒಂದು ವರ್ಷದ ಅಮೂಲ್ಯ ಸಮಯ ಹಾಗೂ ಹಣವನ್ನು ಕಿತ್ತುಕೊಂಡ ಸಂಸ್ಥೆಗಳಿಗೆ ಹಾಗೂ ಅದಕ್ಕೆಲ್ಲ ಪರವಾನಗಿ ನೀಡಿದ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಯಾವ ಶಿಕ್ಷೆ ವಿಧಿಸಬೇಕು? ಯಾವುದರಿಂದ ಬಾರಿಸಬೇಕು? ಯುವಕರ ಬದುಕಿನೊಂದಿಗೆ ಚೆಲ್ಲಾಟವಾಡುವ, ಅವರ ಹಣವನ್ನು ಕಿತ್ತುಕೊಳ್ಳುವ ಅಧಿಕಾರ ಈ ವಿವಿಯ ನಾಮರ್ದರಿಗೆ ಯಾರು ಕೊಟ್ಟರು?


ಗುಲ್ಬರ್ಗಾ ವಿ.ವಿ.ಯ ಚಿತ್ರ

ಸಮಾಧಾನದ ಸಂಗತಿಯೆಂದರೆ ಊರೆಲ್ಲ ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ನಮ್ಮ ರಾಜ್ಯದ ರಾಜ್ಯಪಾಲರು ಇದೇ ಮೇ 7 ರಂದು ಗುಲ್ಬರ್ಗಾ ವಿವಿಯ ಈ ಕಿತಾಪತಿಗೆ ತಡೆಒಡ್ಡಿದ್ದಾರೆ ಮತ್ತು ಜೊತೆಗೆ ಕರ್ನಾಟಕ ವಿಶ್ವವಿದ್ಯಾಲಯ ಸ್ಟೇಟ್ ಆ್ಯಕ್ಟ್ -2000 ಪ್ರಕಾರ ಸೆಕ್ಷನ್ 8(1) ರ ಅಡಿಯಲ್ಲಿ ತನಿಖೆಗೆ ಆದೇಶಿಸಿದ್ದಾರೆ.


ಆದರೆ ಅಷ್ಟು ಸಾಲದು. ಚಾಪೆಯ ಕೆಳಗೆ ತೂರಿದರೆ ರಂಗೋಲಿಯ ಕೆಳಗೆ ಅವುಚಿಕೊಳ್ಳುವ "ಉಪಕುಲಪತಿ ಈ.ಟಿ.ಪುಟ್ಟಯ್ಯ, ರಜಿಸ್ಟ್ರಾರ್ ಪ್ರೊ. ಎಸ್.ಎಲ್. ಹಿರೇಮಠ ಹಾಗೂ ಔಟ್‌ರೀಚ್ ಪ್ರೋಗ್ರಾಮ್ ಡೈರೆಕ್ಟರ್ ಆಗಿರುವ ಡಾ. ಚಂದ್ರಕಾಂತ ವೈ ಯಾತನೂರ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಇಲ್ಲಿನ ಭಾನಗಡಿ ಗಳನ್ನು ಸಂಪೂರ್ಣವಾಗಿ ಸಿಬಿಐ ಮೂಲಕವೇ ತನಿಖೆ ನಡೆಸಬೇಕು" ಎಂದು ವಿವಿಯ ವಿರುದ್ಧ ಹೋರಾಟ ನಡೆಸುತ್ತಿರುವ ಕಾಂತಾ ಅವರು ಆಗ್ರಹಿಸುತ್ತಿದ್ದಾರೆ.

ಆದರೆ ಸರಕಾರವನ್ನು ಸರಿಯಾಗಿ ನಡೆಸಲಿಕ್ಕಾಗದೆ ಬರೀ ಸರ್ಕಸ್ ನಡೆಸಿರುವ ಭಾಜಪ ಸರಕಾರದಿಂದ ಇಂಥ ವಿವೇಚನೆಯ ಕಿಡಿ ಹೊಮ್ಮಬಹುದೆ? ಇಂಥ ಸಂದರ್ಭದಲ್ಲಿ ರಾಜ್ಯಪಾಲರೇ ನೇರವಾಗಿ ತಮಗೆ ದತ್ತವಾದ ಅಧಿಕಾರದ ಮೂಲಕ ಗುಲ್ಬರ್ಗಾ ವಿಶ್ವವಿದ್ಯಾಲಯದತ್ತ ಇಣುಕಿ ನೋಡಬೇಕಿದೆ.

• ವಿಶ್ವಾರಾಧ್ಯ ಸತ್ಯಂಪೇಟೆ

ಸಾಹಿತ್ಯವನ್ನು ಆರಾಧಿಸುವ ಹಾರುವ ಓತಿಕ್ಯಾತಗಳು!

• ಸರ್ಜಾಶಂಕರ ಹರಳಿಮಠ



ನಮ್ಮದೊಂದು ಕೈಮಗ್ಗದ ಅಂಗಿ ಬಟ್ಟೆಗಳಿರುವ ...ಸಿ ಸಂಸ್ಕೃತಿ' ಎಂಬ ಅಂಗಡಿಯಿದೆ. ನನ್ನ ಗೆಳೆಯ ...ಬುದ್ದಿ(ಷಾಹಬುದ್ದೀನ್)ದೊಂದು ಸಾಹಿತ್ಯ ಪುಸ್ತಕಗಳ ...ಗಡಿಯಿತ್ತು. ನಾವಿಬ್ಬರು ಆಗಾಗ ಹೊರ ಊರುಗಳಲ್ಲಿ ...ಯುವ ಸಾಹಿತ್ಯ ಸಮ್ಮೇಳನ, ಕೃಷಿ ಮೇಳ ಇತ್ಯಾದಿಗಳಿಗೆ ...ಗಿ ಅಲ್ಲಿ ತಾತ್ಕಾಲಿಕ ಟೆಂಟ್ ಹಾಕಿ ಹಲವು ದಿನಗಳ ...ಲ ನಮ್ಮ ಈ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದೆವು.



...ಹಾರುವ ಓತಿಕ್ಯಾತ

...ಗ ನಮ್ಮ ಸೇಲ್ಸ್‌ಮನ್‌ಗಳಾಗಿ ಬರುತ್ತಿದ್ದವರು ...ಬುದ್ದಿಯ ಅಕ್ಕನ ಮಕ್ಕಳಾದ ಅಲ್ಲಾಭ್ ಮತ್ತು ಅಶ್ಫಾಕ್ ...ಬ ಹುಡುಗರು. ನನ್ನದೂ, ಶಾಬುದ್ದಿಯದೂ ಒಂದೇ ...ಳ್ಳಿಯಾದ್ದರಿಂದ ಈ ಮಕ್ಕಳು ಹುಟ್ಟಿದಂದಿನಿಂದಲೂ ...ಮ್ಮ ಮನೆಯ ಮಕ್ಕಳಂತೇ ಇದ್ದವರು. 'ವ್ಯವಹಾರಪ್ರಜ್ಞೆ...ಲ್ಲಿ' ಈ ಇಬ್ಬರು ಹುಡುಗರೂ ನನ್ನನ್ನೂ ಮತ್ತು ...ಬುದ್ದಿಯನ್ನೂ ಮೀರಿಸುತ್ತಿದ್ದರು! ಕನ್ನಡ ಸಾಹಿತ್ಯ ...ಲೋಕದ ಜನರನ್ನು ನಂಬಿ ಶಾಬುದ್ದಿ ತನ್ನ ಸಾಹಿತ್ಯಕೃತಿಗಳ ...ಂಗಡಿಯನ್ನು ಮುಚ್ಚಿ ಹಳ್ಳಿಗೆ ವಾಪಾಸು ಹೋಗುವುದ...ಲ್ಲಿ ಆತನ 'ವ್ಯವಹಾರಪ್ರಜ್ಞೆ' ಹಾಗು ಕನ್ನಡ ಸಾಹಿತ್ಯ ...ಲೋಕದ ಜನರ 'ಪ್ರೋತ್ಸಾಹ' ಕಾರಣವಾದಂತೆ ಈ ಅಪ್ರತಿಮ ಸೇಲ್ಸ್‌ಮನ್‌ಗಳ ಪಾತ್ರವೂ ಗಣನೀಯವಾದದ್ದೆಂದು ನಾನು ಬಲವಾಗಿ ನಂಬಿದ್ದೇನೆ!

ಅಲ್ಲಾಭ್ ಮತ್ತು ಅಶ್ಫಾಕ್ ಇಬ್ಬರೂ ನಮ್ಮ ಮಳಿಗೆಗಳಿಗೆ ಬಂದ ತಕ್ಷಣ ಮಾಡುತ್ತಿದ್ದ ಕೆಲಸವೆಂದರೆ ಅಲ್ಲಿ ಮಾರಾಟಕ್ಕೆ ಟೇಬಲ್ಲುಗಳ ಮೇಲೆ ಹರಡಲ್ಪಟ್ಟ ಪುಸ್ತಕಗಳಲ್ಲಿ ಒಂದಷ್ಟು ಪುಸ್ತಕಗಳನ್ನು ಎತ್ತಿಟ್ಟುಕೊಂಡು ಬೆಳಗಿನಿಂದ ವ್ಯಾಪಾರ ಮುಗಿಯುವವರೆಗೂ ತಲೆಯೆತ್ತದೆ ಓದುತ್ತಿದ್ದುದು. ಅದರಲ್ಲೂ ಪೂರ್ಣಚಂದ್ರ ತೇಜಸ್ವಿ ಅವರ ಪುಸ್ತಕಗಳೆಂದರೆ ಇವರು ಊಟವನ್ನೂ ಮರೆತು ಓದುತ್ತಿದ್ದರು.

ಆನಂತರ ಊರಿಗೆ ಹೋದಾಗಲೆಲ್ಲ ಈ ಹುಡುಗರು ಕಾಡಿಗೆ ಹೋಗಿ ತಾವು ಮೊಲ ಹಿಡಿದದ್ದು, ಗಾಳ ಹಾಕಿ ಮೀನಿನ ಬದಲು ಹಾವು ಹಿಡಿದಿದ್ದು ಇತ್ಯಾದಿ ಸಾಧನೆಗಳನ್ನೆಲ್ಲ ಹೇಳುತ್ತಿದ್ದರು.

ಮೊನ್ನೆ ಬೆಳಿಗ್ಗೆ ಅಶ್ಫಾಕ್ ನನ್ನ ಮೊಬೈಲಿಗೆ ಕರೆ ಮಾಡಿ 'ಮಾವ, ನಾವೊಂದು ಹಾರುವ ಓತಿಕ್ಯಾತವನ್ನು ಹಿಡಿದಿದ್ದೇವೆ' ಎಂದ.

ನಾನು ಅಚ್ಚರಿ ವ್ಯಕ್ತಪಡಿಸುವ ಮುನ್ನವೇ ಆತನೇ ಮುಂದುವರಿಸಿದ 'ಅದೇ.. ತೇಜಸ್ವಿ ಕರ್ವಾಲೋ ಕಾದಂಬ್ರೀಲಿ ಬರುತ್ತಲ್ಲ, ಆ ಅದೇ ಓತಿಕ್ಯಾತ...'

ತೇಜಸ್ವಿ ಅವರ 'ಕರ್ವಾಲೋ' ಕಾದಂಬರಿಯಲ್ಲಿ ಬರುವ ಹಾರುವ ಓತಿಕ್ಯಾತ ಭೂಮಿಯ ಮೇಲೂ ಇದೆ ಎಂದು ನನಗೆ ಗೊತ್ತಾದದ್ದೇ ಆಗ. 'ಆಯಿತು, ಅದು ತಪ್ಪಿಸಿಕೊಂಡು ಹೋಗದಂತೆ ಸುರಕ್ಷಿತವಾಗಿ ಇಡಿ' ಎಂದು ಹೇಳಿದವನು, ಪತ್ರಕರ್ತ ಮಿತ್ರ ರವಿ ಬಿದನೂರಿಗೆ ದೂರವಾಣಿ ಮಾಡಿ ಈ ವಿಚಾರ ತಿಳಿಸಿದೆ. ಹಾಗೆಯೇ ಟಿ.ವಿಯ ಗೆಳೆಯರಿಗೂ ತಿಳಿಸಿದೆ.

ಆನಂತರ ಈ ಹುಡುಗರ ಬಳಿಯೇ ಹಾರುವ ಓತಿಕ್ಯಾತದ ಬಗ್ಗೆ ಕೇಳಿದೆ.

ಸಾಮಾನ್ಯ ಓತಿಗಿಂತ ಇದು ಸ್ವಲ್ಪ ಸಣ್ಣಗಾತ್ರವಿರುತ್ತದೆ. ಬಾಲ ಸೇರಿ 6 ಇಂಚು ಉದ್ದ ಹಾಗು ರೆಕ್ಕೆಬಿಚ್ಚಿದಾಗ 4.5 ಇಂಚು ಅಗಲವಿರುತ್ತದೆ. ಮೇಲ್ಭಾಗದಲ್ಲಿ ಬೂದು ಬಣ್ಣ, ಕಪ್ಪು ಅಂಚು ಹೊಂದಿದ್ದು ರೆಕ್ಕೆಯ ಮಧ್ಯಭಾಗ ತಿಳಿಗೆಂಪು ಕಂದು ಮಿಶ್ರಿತ ಹಳದಿ ಬಣ್ಣದ ಚುಕ್ಕೆಗಳಿರುತ್ತವೆ. ಇದು ಡೈನೋಸಾರಸಿನ ಕೊನೆಯ ಸಂತತಿ. ಇದು ಈಗ ಅಳಿವಿನ ಹಂತದಲ್ಲಿದೆ. ಇಡೀ ವಿಶ್ವದಲ್ಲಿ ಈ ಓತಿಕ್ಯಾತಗಳ ಸಂಖ್ಯೆ ಕೇವಲ 800 ರಿಂದ 1000 ಮಾತ್ರವೆಂದು ವನ್ಯಜೀವಿ ಸಂಶೋಧಕರು ಹೇಳುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕೆ ಕೋಟ್ಯಾಂತರ ರೂಪಾಯಿಗಳ ಬೆಲೆಯಿದೆಯಂತೆ ಎಂದು ಅಶ್ಫಾಕ್ ಬೆರಗಿನಿಂದ ಹೇಳಿದ.

ನಾನು ಬಿಡುವು ಮಾಡಿಕೊಂಡು ಈ ಹುಡುಗರು ಹಿಡಿದ ಓತಿಕ್ಯಾತವನ್ನು ನೋಡಿಕೊಂಡು ಬರೋಣ ಎಂದು ಅಂದುಕೊಳ್ಳುತ್ತಿರುವಾಗಲೇ ಅಶ್ಫಾಕ್‌ನ ಫೋನ್ ಬಂತು. ಅವರು ಓತಿಕ್ಯಾತವನ್ನು ಮರಳಿ ಕಾಡಿಗೆ ಬಿಟ್ಟುಬಂದಿದ್ದರು. ಹುಡುಗರ ಕಾಳಜಿ ಖುಷಿ ನೀಡಿತು.




ಅಶ್ಫಾಕ್ ಮತ್ತು ಅಲ್ಲಾಭ್ ಸೋದರರು

ಆದರೆ ನಾನು ಇಲ್ಲಿ ಮುಖ್ಯವಾಗಿ ಹೇಳಲು ಹೊರಟಿದ್ದು ಓತಿಕ್ಯಾತಗಳ ಬಗ್ಗೆಯಲ್ಲ, ಈ ಎಳೆಯ ಹುಡುಗರ ಓದುವ ಹುಚ್ಚಿನ ಬಗ್ಗೆ. ಇವರಿಗಾಗಲೇ ಸರಿಸುಮಾರು ತೇಜಸ್ವಿಯವರ ಎಲ್ಲಾ ಕೃತಿಗಳನ್ನು ಓದಿಬಿಟ್ಟಿದ್ದಾರೆ. ಕಿರಿಯನಾದ ಅಲ್ಲಾಭ್ ಅನೇಕ ವರ್ಷಗಳಿಂದ ಕತೆಯನ್ನೂ ಬರೆಯುತ್ತಿದ್ದಾನೆ. ಈ ಹುಡುಗರ ಓದುವ ಹವ್ಯಾಸ ಮತ್ತು ಓದಿದ್ದನ್ನು ಪ್ರಕೃತಿಯಲ್ಲಿ ಹುಡುಕಿ ಹೊರಡುವ ಆಸಕ್ತಿ ಕನ್ನಡ ಸಾಹಿತ್ಯದ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿರುವವರಿಗೆ ಸ್ವಲ್ಪ ನೆಮ್ಮದಿಯನ್ನು ನೀಡಬಹುದು. ಇಂತಹ ಅದೆಷ್ಟು ಮಕ್ಕಳು ಸಾಹಿತ್ಯವನ್ನು ಆರಾಧಿಸುತ್ತಿದ್ದಾರೆಯೊ? ಕನ್ನಡ ಸಾಹಿತ್ಯವನ್ನು ಸಾಹಿತ್ಯ ಪರಿಷತ್ತು ಕನ್ನಡ ಸಂಘ, ಇತ್ಯಾದಿ ಸಂಘ ಸಂಸ್ಥೆಗಳ ಒಣ ವಿಚಾರಗೋಷ್ಠಿಗಳಿಂದ ಪಾರು ಮಾಡಿ ಈ ಹುಡುಗರ ಹಳ್ಳಿಗಳತ್ತ ಕೊಂಡೊಯ್ಯಬೇಕು ಅನ್ನಿಸುತ್ತಿದೆ. ಹಾಗೆಯೇ ನಮ್ಮ ಮಕ್ಕಳು ಓದುವುದೇ ಇಲ್ಲವೆಂದು ಕೊರಗುತ್ತ ಅವರನ್ನು ಹೂಡೋಟುವ ಬೇಸಿಗೆ ಶಿಬಿರಗಳಿಗೆ ಅಟ್ಟುವ ಪೋಷಕರಾದರೂ ಓತಿಕ್ಯಾತ ಹಿಡಿದ ಮಕ್ಕಳತ್ತ ನೋಡಬೇಕು ಅಲ್ಲವೇ?

ಸುರಸುಂದರಾಂಗಿ ಮತ್ತು ಪೇಜಾವರ ಶ್ರೀಗಳ ಜಾಣ ಮರೆವು

...ಕರ್ನಾಟಕದ ಇತರೆಡೆಗಳಂತೆ ಉಡುಪಿಯಲ್ಲೂ ಗೀತಾಂಜಲಿ ಥೇಟರಿನಲ್ಲಿ ...ಶುಕ್ರವಾರ ಬಹು ನಿರೀಕ್ಷಿತ ಚಲನಚಿತ್ರ 'ಕಠಾರಿವೀರ ಸುರಸುಂದರಾಂಗಿ' ...ಡುಗಡೆಗೊಂಡಿತು. ಆದರೆ ಅದರ ಮಾರನೆ ದಿನ ಬೆಳಗ್ಗೆಯ ಶೋಗೆ ...ಟರಿನ ಎದುರು ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರಿಗೆ ನಿರಾಸೆ ಕಾದಿತ್ತು. ...ರಂಗದಳದ ಸುಮಾರು 60 ಯುವಕರು ಒಟ್ಟಾಗಿ ಚಲನಚಿತ್ರದ ...ಸ್ಟರುಗಳನ್ನು ಹರಿದು, ಬೊಬ್ಬೆ ಹಾಕಿ ಚಿತ್ರಪ್ರದರ್ಶನವನ್ನು ...ದ್ದುಪಡಿಸಲು ಒತ್ತಾಯಿಸಿದರು. ದೊಂಬಿಯ ನೇತೃತ್ವವನ್ನು ...ಡುಪಿಯ ಎಂಟು ಮಾಧ್ವಮಠಗಳಲ್ಲಿ ಒಂದಾಗಿರುವ ಶಿರೂರು ...ದ ಸ್ವಾಮೀಜಿಯವರೇ ವಹಿಸಿದ್ದರು. ಈ 'ಪ್ರತಿಭಟನೆ' ಪೊಲೀಸರ ...ಮ್ಮುಖದಲ್ಲೇ ನಡೆಯಿತು; ಮತ್ತು ಯಥಾಪ್ರಕಾರ ಅವರು ...ಮ್ಮನಿದ್ದರು. ಹಾಗಾಗಿ ಚಲನಚಿತ್ರ ಪ್ರದರ್ಶನವನ್ನು ರದ್ದುಪಡಿಸಿ, ...ಟ್ ಕೊಂಡವರಿಗೆ ಹಣ ವಾಪಸು ಮಾಡಲಾಯಿತು. ಮಂಗಳೂರು, ...ಮಗಳೂರುಗಳಲ್ಲೂ ಇದೇ ವಿದ್ಯಮಾನ ಸಂಭವಿಸಿದೆ.





'-ಸುರಸುಂದರಾಂಗಿ' ವಿರುದ್ಧ ನಡೆದ ಗುಂಪು ದೊಂಬಿಗೆ ...ರ್ತಿ ನೀಡಿರುವುದು ಆ ಚಲನಚಿತ್ರ ಕುರಿತು ಪೇಜಾವರ ಶ್ರೀಗಳು ವ್ಯಕ್ತಪಡಿಸಿದ ...ಕ್ಷೇಪ. ಚಲನಚಿತ್ರ ಬಿಡುಗಡೆಯಾಗುವ ಮೊದಲೇ ಪೌರಾಣಿಕ ಪಾತ್ರಗಳನ್ನು ...ತ್ರದಲ್ಲಿ ಕೆಟ್ಟದಾಗಿ ಚಿತ್ರಿಸಲಾಗಿದೆ ಎಂಬ ಪುಕಾರು ಹಬ್ಬಿತ್ತು. ನಂತರ ಅದು





...ದೂ ದೇವತೆಗಳ ಅವಹೇಳನ ಎಂಬ ತಿರುವನ್ನು ...ಡುಕೊಂಡಿತು. ಮತ್ತು ಮಾಮೂಲಿನಂತೆ ಅದು, ...ನ್ ಮತ್ತು ಬೈಬಲ್‌ಗಳನ್ನು ಹೀಗೆ ಚಿತ್ರಿಸಿದರೆ ... ಧರ್ಮದವರು ಸಹಿಸಿಕೊಳ್ಳುತ್ತಾರಾ ಎಂಬ ...ವಾದವಾಗಿ ಮಾರ್ಪಾಡುಗೊಳ್ಳತೊಡಗಿತು. ...ಗೆ ಈ ವಿವಾದ, ಚಲನಚಿತ್ರ ಪ್ರದರ್ಶನದ ...ರುದ್ಧ ಫ್ಯಾಸಿಸ್ಟ್ ಗುಂಪೊಂದರ ಯಶಸ್ವೀ ಬಲಪ್ರದರ್ಶನದಲ್ಲಿ ತನ್ನ ತಾರ್ಕಿಕ ...ತ್ಯ ಕಂಡಿತು. ಈ ನಡುವೆ, ವಿವಾದವನ್ನು ಪರಿಹರಿಸಲು ಮಧ್ಯಸ್ಥಿಕೆದಾರರಾಗಿ ...ಜಾವರ ಶ್ರೀಗಳ ಪ್ರವೇಶವಾಯಿತು. ಶ್ರೀಗಳು ಸ್ವಇಚ್ಛೆಯಿಂದ ಈ ವಿವಾದದಲ್ಲಿ ...ಾಗು ತೂರಿಸಿದರೋ ಅಥವಾ ಚಿತ್ರ ನಿರ್ಮಾಪಕರ ವಿನಂತಿ ಮೇರೆಗೆ ...ಗು ತೂರಿಸಿದರೋ ನನಗೆ ತಿಳಿಯದು. ಅದು ಹೇಗೂ ಇರಲಿ, ಚಲನಚಿತ್ರವೊಂದು ಸಾರ್ವಜನಿಕ ಪ್ರದರ್ಶನಕ್ಕೆ ಯೋಗ್ಯವೋ ಹೇಗೆ ಎಂದು ತೀರ್ಪು ಕೊಡುವುದು ಯತಿಗಳ ಕೆಲಸವಲ್ಲ, ಅವರಿಗೆ ಆ ಹಕ್ಕೂ ಇಲ್ಲ. ಆ ತೀರ್ಮಾನ ತೆಗೆದುಕೊಳ್ಳಲು ಸಾಂವಿಧಾನಿಕ ಸಂಸ್ಥೆಯಾಗಿರುವ ಸೆನ್ಸಾರ್ ಮಂಡಳಿ ಇದೆ. ಅದರ ಅನುಮತಿ ಇಲ್ಲದೆ ಯಾವ ಚಲನಚಿತ್ರ ಪ್ರದರ್ಶನಗೊಳ್ಳುವಂತಿಲ್ಲ. '-ಸುರಸುಂದರಾಂಗಿ' ಚಿತ್ರದ ಕುರಿತು ತಮ್ಮ ಅಭಿಪ್ರಾಯ ಹೇಳುವ ಪೇಜಾವರ ಶ್ರೀಗಳ ಸ್ವಾತಂತ್ರ್ಯವನ್ನು ಯಾರೂ ಪ್ರಶ್ನಿಸುತ್ತಿಲ್ಲ. ಆದರೆ, ಚಿತ್ರಪ್ರದರ್ಶನವನ್ನು ಬಲಾತ್ಕಾರದಲ್ಲಿ ರದ್ದುಪಡಿಸಿದ ಭಜರಂಗಿಗಳ 'ಪ್ರತಿಭಟನೆ' ಒಂದು ಕ್ರಿಮಿನಲ್ ಕೃತ್ಯ. ರಾಜ್ಯದಲ್ಲಿ ಸದ್ಯಕ್ಕೆ ಇವರದ್ದೇ ಸರ್ಕಾರವಿದ್ದರೂ ಚಿತ್ರಪ್ರದರ್ಶನಕ್ಕೆ ಅಡ್ಡಿಪಡಿಸಿದ ಭಜರಂಗಿಗಳಿಗೆ ಶಿಕ್ಷೆ ಆಗಲಿ ಎಂದು ಆಗ್ರಹಿಸುವುದು ನಮ್ಮೆಲ್ಲರ ಕರ್ತವ್ಯ.

ಗೀತಾಂಜಲಿ ಥೇಟರಿನ ಎದುರು ಮೊನ್ನೆ ಗಲಾಟೆ ಎಬ್ಬಿಸಿದ ಉಡುಪಿಯ ಭಜರಂಗಿಗಳ ಕುರಿತು ಯೋಚಿಸುವಾಗ ನನಗೆ, ಸುಮಾರು 45 ವರ್ಷಗಳ ಹಿಂದೆ ಉಡುಪಿಯ ಕೇಂದ್ರಭಾಗದಲ್ಲಿ ಆ ಥೇಟರು ಪ್ರಾರಂಭಿಸಿದ ಕಾಣಿಯೂರು ಮಠದ (ಇಲ್ಲಿನ ಎಂಟು ಮಠಗಳಲ್ಲಿ ಒಂದು) ಹಿರಿಯ ಸ್ವಾಮೀಜಿಯವರ ನೆನಪಾಗುತ್ತಿದೆ. ಈಗ ಅವರು ತೀರಿಕೊಂಡಿದ್ದಾರೆ. ಹೆಚ್ಚಿನ ಮಠಾಧೀಶರುಗಳಂತೆ ಅವರ ಕುರಿತು ಸಹ ಸ್ವಾರಸ್ಯಕರ ಕತೆಗಳಿದ್ದವು; ಅವು ಇಲ್ಲಿ ಅಪ್ರಸ್ತುತ. ಒಮ್ಮೆ ಆಗ ಪ್ರಜಾವಾಣಿ ಪತ್ರಕರ್ತರಾಗಿದ್ದ ಗೆಳೆಯ ಜಿ.ಪಿ. ಬಸವರಾಜು ಜೊತೆ ಶ್ರೀಗಳ ಸಂದರ್ಶನ ಮಾಡುವ ಅವಕಾಶ ನನಗೆ ದೊರೆತಿತ್ತು. "ಓರ್ವ ಮಠಾಧೀಶರಾಗಿದ್ದುಕೊಂಡು ತಾವು ಸಿನಿಮಾ ಥೇಟರು ನಡೆಸುತ್ತಿರುವುದರ ಬಗ್ಗೆ ಟೀಕೆಗಳಿವೆ. ಆ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು?" ಎಂದು ನಾನು ವಿನಯದಿಂದಲೇ ಅವರನ್ನು ಕೇಳಿದೆ. ನನ್ನ ಪ್ರಶ್ನೆಗೆ ಶ್ರೀಗಳು ಚೂರೂ ಮುಜುಗರವಿಲ್ಲದೆ "ಮಠ ನಡೆಸಲು ತುಂಬ ಖರ್ಚು ಬರುತ್ತದೆ. ನಮ್ಮದು ಬಡ ಮಠ. ಬೇರೆ ಮಠಗಳ ಹಾಗೆ ನಮಗೆ ಆಸ್ತಿ, ಭೂಮಿ, ಕಟ್ಟಡ ಮುಂತಾದ್ದು ಏನೂ ಇಲ್ಲ, ಥೇಟರು ನಮಗೆ ಒಂದು ವರಮಾನದ ಮೂಲ. ಏನು ತಪ್ಪಿದೆ ಅದರಲ್ಲಿ?" ಎಂದು ನನ್ನನ್ನೇ ಕೇಳಿದರು. ಇನ್ನೊಂದು ಸಂದರ್ಭದಲ್ಲಿ ಉಡುಪಿಯ ರಥಬೀದಿಯಲ್ಲಿ ನಡೆದ ಒಂದು ಸಭೆಯ ವೇದಿಕೆಯಲ್ಲಿ ಕಾಣಿಯೂರು ಸ್ವಾಮೀಜಿಯವರ ಜೊತೆಗೆ ನಾನು ಸಹ ವಿರಾಜಮಾನನಾಗಿದ್ದೆ; ಅದು ಬಾಬರಿ ಮಸೀದಿ ಧ್ವಂಸದ ವಿರುದ್ಧ ಯೂತ್ ಕಾಂಗ್ರೆಸ್ ಏರ್ಪಡಿಸಿದ್ದ ಸಭೆಯಾಗಿತ್ತು. ಆ ಸಭೆಯಲ್ಲಿ ಮಾತಾಡುತ್ತ ಶ್ರೀಗಳು "ಬಾಬರಿ ಮಸೀದಿಯೂ ಒಂದು ದೇವಾಲಯವೇ. ಹಾಗಾಗಿ ಅದನ್ನು ಧ್ವಂಸ ಮಾಡಿದ್ದು ಪಾಪಕೃತ್ಯ ಎಂದು ನಾವು ಭಾವಿಸುತ್ತೇವೆ" ಎಂದು ಹೇಳಿದರು. ಪ್ರಾಯಶಃ ಉಡುಪಿಯ ಮಠಾಧೀಶರುಗಳಲ್ಲಿ ಸಾರ್ವಜನಿಕವಾಗಿ ಹಾಗೆ ಹೇಳಿದವರು ಅವರೊಬ್ಬರೇ. ಉಳಿದವರಲ್ಲಿ ಕೆಲವರು ಭಜರಂಗದಳದ ಬೆಂಬಲಿಗರು; ಇನ್ನು ಕೆಲವರು ಈಗ ಬಹಿರಂಗವಾಗಿಯೇ ಆ ಸಂಘಟನೆಯ ಜೊತೆ ಗುರುತಿಸಿಕೊಂಡಿದ್ದಾರೆ. ಪೇಜಾವರ ಶ್ರೀಗಳಂತೂ ಬಾಬರಿ ಮಸೀದಿ ಉರುಳಿದಾಗ ಸ್ಥಳದಲ್ಲೇ ಹಾಜರಿದ್ದವರು.

ತನಗೆ ಒಪ್ಪಿಗೆಯಾಗದಿರುವುದು ಅಸ್ತಿತ್ವದಲ್ಲೇ ಇರತಕ್ಕದ್ದಲ್ಲ ಎಂಬ ಪೇಜಾವರ ಶ್ರೀಗಳ ಧೋರಣೆಗೆ '-ಸುರಸುಂದರಾಂಗಿ' ಚಿತ್ರದ ಬಗ್ಗೆ ಅವರು ತೋರುತ್ತಿರುವ ಅಸಹನೆ ಇತ್ತೀಚಿಗಿನ ಉದಾಹರಣೆ. ತಾನು ಆಕ್ಷೇಪಾರ್ಹ ಎಂದು ಭಾವಿಸುವುದನ್ನು ಇತರರು ಯಾರೂ ಓದಬಾರದು, ನೋಡಬಾರದು, ಕೇಳಬಾರದು ಎಂದು ನಿಷೇಧಿಸುವುದು ಪ್ರಜಾಪ್ರಭುತ್ವದಲ್ಲಿ ಸಲ್ಲದು. ಪೇಜಾವರ ಶ್ರೀಗಳಿಗೂ ಒಮ್ಮೊಮ್ಮೆ ಈ ದೇಶ ಸಂವಿಧಾನದ ಕಾನೂನಿನ ಆಳ್ವಿಕೆಗೆ ಒಳಪಟ್ಟಿದೆ ಎಂಬ ಸತ್ಯ ನೆನಪಾಗುವುದಿದೆ. ಹಲವು ಬಾರಿ ಅವರು ರಾಜ್ಯದ ಬಿಜೆಪಿ ಸರ್ಕಾರವನ್ನೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನೂ ವಹಿಸಿಕೊಂಡು ಮಾತಾಡಿದ್ದಾರೆ. "ನ್ಯಾಯಾಲಯ ಯಡಿಯೂರಪ್ಪನವರನ್ನು ಅಪರಾಧಿ ಎಂದು ತೀರ್ಮಾನಿಸುವವರೆಗೂ ಅವರನ್ನು ನಿರಪರಾಧಿ ಎಂದೇ ಪರಿಗಣಿಸಬೇಕು" ಎಂದು ಅವರು ಇತ್ತೀಚೆಗೆ ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಶ್ರೀಗಳ ಮಾತು ಯುಕ್ತವಾಗಿಯೇ ಇದೆ. ಆದರೆ ಕಾನೂನಿನ ರಕ್ಷಣೆ ಮತ್ತು ಕಾನೂನಿನ ಆಳ್ವಿಕೆಯ ಸಂವಿಧಾನಾತ್ಮಕ ವಿಚಾರಗಳು '-ಸುರಸುಂದರಾಂಗಿ' ಪ್ರದರ್ಶನದ ಸಂದರ್ಭದಲ್ಲಿ ಮಾತ್ರ ಶ್ರೀಗಳಿಗೆ ಯಾಕೆ ಮರವೆಯಾಗುತ್ತದೆ ಎಂಬುದು ಯಕ್ಷಪ್ರಶ್ನೆ. ಹಾಗೆಯೇ ಸದಾ ಜಾಗೃತವಾಗಿರುವ ಪೇಜಾವರ ಶ್ರೀಗಳ ಧಾರ್ಮಿಕ ಪ್ರಜ್ಞೆ ಬಿಜೆಪಿ ನಾಯಕರ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಮಾತ್ರ ಯಾಕೆ ಗಾಢನಿದ್ರೆಯಲ್ಲಿದೆ? ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ದಿನದಿಂದಲೂ, ಪೇಜಾವರ ಶ್ರೀಗಳು ಅದರ ವಿರುದ್ಧ ಕಾಲದಿಂದ ಕಾಲಕ್ಕೆ ನಡೆದ ಜನಾಂದೋಲನದ ಶಾಕ್ ಅಬ್ಸಾರ್ಬರ್‌ನಂತೆ ಕೆಲಸ ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅದಕ್ಕೂ ಅವಕಾಶವಿದೆ. ಆದರೆ ಪೇಜಾವರ ಶ್ರೀಗಳು, ಶಿರೂರು ಶ್ರೀಗಳು ಹಾಗೂ ಅವರ ಒಟ್ಟಿಗಿರುವ ಭಜರಂಗಿಗಳು ತಾವೇ ನಿರಂಕುಶ ಸೆನ್ಸಾರ್ ಮಂಡಳಿಯಂತೆ ಚಲನಚಿತ್ರ ಪ್ರದರ್ಶನಗಳನ್ನು ನಿರ್ಬಂಧಿಸುವುದು ಮಾತ್ರ ಅಪರಾಧವಲ್ಲದೆ ಮತ್ತೇನೂ ಅಲ್ಲ.


• ಜಿ. ರಾಜಶೇಖರ

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡ ಮೇಲೆ ಬರೆಯುವುದು ಅಸಾಧ್ಯವೇನೋ ಎಂದೆನಿಸಿತ್ತು. ಆದರೆ ಮಾಂಟೋನ ಮನದಾಳದ ತಲ್ಲಣಗಳು ಬಿಡಬೇಕಲ್ಲ. ಮಾಂಟೋ ಮತ್ತೆ ಮತ್ತೆ ಸ್ವಯಂಘೋಷಿತ ಸಭ್ಯ ಸಮಾಜದ ಮುಖವಾಡದ ಹಿಂದಿರುವ ಲಂಪಟತೆಯನ್ನು ತನ್ನ ಕತ್ತಿಯ ಅಲಗಿಗಿಂತಲೂ ಮೊನಚಾದ ಬರಹಗಳಲ್ಲಿ ಹರಿದು ಹಾಕಿದ. ಸಭ್ಯ ಸಮಾಜ (?) ಮಾಂಟೋನಿಗೆ 'ಹುಚ್ಚ' ಎಂಬ ಪಟ್ಟ ಕಟ್ಟಿತು.

ವಿಶೇಷ ಲೇಖನ

ಇಸ್ಮತ್ ಫಜೀರ್

ಸಭ್ಯ(?)ರ ಮುಖವಾಡ ಹರಿದೊಗೆದ ಅಮರ ಕತೆಗಾರ: ಮಾಂಟೋ



ಒಂದು ಲಕ್ಷ ಹಿಂದೂಗಳ ಕೊಲೆಯಾಯಿತು ಮತ್ತು ಒಂದು ಲಕ್ಷ ಮುಸ್ಲಿಮರು ಕೊಲ್ಲಲ್ಪಟ್ಟರು ಎಂದೇಕೆ ಹೇಳಬೇಕು? ಎರಡು ಲಕ್ಷ ಅಮಾಯಕರ ಮಾರಣಹೋಮ ವಾಯಿತೆಂದು ಏಕೆ ಹೇಳಬಾರದು (ಸಾದತ್ ಹಸನ್ ಮಾಂಟೋ: ಅಲ್‌ವಿದಾ)

ನಿಷ್ಕಾರಣವಾಗಿ ಹೀಗೆ ಹರಿಯುತ್ತಿದ್ದ ರಕ್ತ ಯಾರದ್ದು? ಧರ್ಮವನ್ನು ಸಂಕೇತಿಸುವ ಮಾಂಸವನ್ನು ಗಿಡುಗ, ರಣಹದ್ದುಗಳು ಕುಕ್ಕಿ ಹೆಕ್ಕಿಕೊಂಡು ನಗ್ನಗೊಳಿಸಿ ಉಳಿಸಿದ ಎಲುಬುಗಳನ್ನು ಎಲ್ಲಿ ಹೂಳುತ್ತಾರೆ ಅಥವಾ ಸುಡುತ್ತಾರೆ? (ಸಾದತ್ ಹಸನ್ ಮಾಂಟೋ: ಮುರಲೀ ಕೀ ಧುನ್)

ಈ ಮೇಲಿನ ಸಾಲುಗಳು ಧರ್ಮದ ಹೆಸರಿನಲ್ಲಿ ನಡೆಯುವ ಮಾನವ ಹತ್ಯೆಯ ಕುರಿತಂತೆ ಸಾದತ್ ಹಸನ್ ಮಾಂಟೋ ಎಂಬ ಅಪ್ರತಿಮ ಮಾನವತಾವಾದಿಯ ವಿಷಾದ ಎಂತಹದ್ದು ಎಂಬುವುದಕ್ಕೆ ರೂಪಕದಂತಿವೆ. ಸಾದತ್ ಹಸನ್ ಬರೆದ ಹೆಚ್ಚಿನೆಲ್ಲಾ ಕತೆಗಳು ಮನುಷ್ಯರ ಸತ್ತು ಹೋದ ಮಾನವೀಯ ಪ್ರಜ್ಞೆಯನ್ನು ಅಣಕಿಸುವಂತಿದೆ. ಮಾಂಟೋನ ಕತೆಗಳ ಅಂತ್ಯವು ಸದಾ ವಿಷಾದದಿಂದಲೇ ಕೂಡಿರುತ್ತದೆ. ಯಾಕೆಂದರೆ ಮಾಂಟೋನ ಹೆಚ್ಚಿನೆಲ್ಲಾ ಕತೆಗಳು ದೇಶವಿಭಜನೆಯ ಕಾಲದ ಸಮೂಹ ಸನ್ನಿಯ ಬೆಂಕಿಯಲ್ಲಿ ಆಹುತಿಯಾದವರ ಮತ್ತು ಆಹುತಿಯಾದ ಮಾನವೀಯ ಅಂತಃಕರಣಗಳ ಕುರಿತೇ ಆಗಿತ್ತು. ಅವು ಎಂದೂ ಸುಖಾಂತ್ಯ ಕಾಣುವ ಸಾಧ್ಯತೆಗಳೇ ಇದ್ದಿರಲಿಲ್ಲ, ಅವುಗಳು ಸದಾ ವಿಷಾದವನ್ನು ಮಡುವುಗಟ್ಟಿಸಿಯೇ ಕೊನೆಯಾಗುತ್ತಿತ್ತು.

ಸಾದತ್ ಹಸನ್ ಮಾಂಟೋ...! ಈ ಹೆಸರಿಗೆ ಜಾಗತಿಕ ಸಾಹಿತ್ಯದಲ್ಲಿ ಎಂದೆಂದೂ ಕುಗ್ಗದ ಮಣ್ಣನೆಯಿದೆ. ಉರ್ದು ಸಾಹಿತ್ಯಕ್ಕೆ ಜಾಗತಿಕ ಮಟ್ಟದಲ್ಲಿ ಶ್ರೇಷ್ಠ ಸ್ಥಾನ ಕಲ್ಪಿಸಿಕೊಟ್ಟ ದಿಗ್ಗಜರಲ್ಲಿ ಸಾದತ್ ಹಸನ್ ಮಾಂಟೋ ಅಗ್ರಗಣ್ಯ. ಸುಮಾರು ಮುನ್ನೂರರಷ್ಟು ಸಣ್ಣಕತೆಗಳು ಮತ್ತು ಅತೀ ಸಣ್ಣಕತೆಗಳು, ಒಂದು ಕಿರುಕಾದಂಬರಿ, ನೂರರ ಹತ್ತಿರ ಹತ್ತಿರ ರೇಡಿಯೋ ನಾಟಕಗಳು, ಕೆಲವು ಚಿಂತೋದ್ದೀಪಕ ಪ್ರಬಂಧಗಳು, ವ್ಯಕ್ತಿಚಿತ್ರಗಳು, ಕಿರುಬರಹಗಳು, ಹಿಂದಿ ಸಿನಿಮಾಗಳಿಗೆ ಸಂಭಾಷಣೆ-ಸಾಹಿತ್ಯ ಹೀಗೆ ಮಾಂಟೋ ತನ್ನ ಕಿರುಬದುಕಿನಲ್ಲಿ ವಿಪುಲ ಸಾಹಿತ್ಯ ಕೃಷಿ ಮಾಡಿದ.

ಮೇ 11 ಮಾಂಟೋ ಜನ್ಮ ಶತಾಬ್ದಿ. ಪಂಜಾಬ್ ರಾಜ್ಯದ ಲೂಧಿಯಾನದಿಂದ 22 ಮೈಲು ದೂರವಿರುವ ಸಮರ್ಥಾಲ ಎಂಬ ಪಟ್ಟಣದ ನಿವಾಸಿ, ಕಾಶ್ಮೀರಿ ಮೂಲದ ಮ್ಯಾಜಿಸ್ಟ್ರೇಟ್ ಗುಲಾಂ ಹಸನ್ ಮಾಂಟೋ ಎಂಬ ಸಂಪ್ರದಾಯಸ್ಥ ಮತ್ತು ಶ್ರದ್ಧಾವಂತ ಮುಸ್ಲಿಮನ ಎರಡನೇ ಹೆಂಡತಿಯ ಕಿರಿಯ ಪುತ್ರನಾಗಿ ಮಾಂಟೋ ಜನಿಸಿದ.

ತನ್ನ ಹದಿಹರೆಯದ ದಿನಗಳನ್ನು ಪೋಲಿಯಂತೆ ಕಳೆದ ಮಾಂಟೋ ಇಂಟರ್ ಮೀಡಿಯೆಟ್‌ನಲ್ಲಿ ಉತ್ತೀರ್ಣನಾಗಿದ್ದು ಮೂರನೇ ಯತ್ನದಲ್ಲಿ, ಆತ ಎರಡು ಬಾರಿ ಅನುತ್ತೀರ್ಣನಾಗಿದ್ದು ಉರ್ದು ಭಾಷಾ ವಿಷಯದಲ್ಲಿ..!! ಉರ್ದು ಭಾಷೆಯಲ್ಲಿ ಅಂತಹ ಶತದಡ್ಡನಾಗಿದ್ದ ಮಾಂಟೋ ಮುಂದೆ ಉರ್ದು ಸಾಹಿತ್ಯ ಲೋಕದ ಸಾಮ್ರಾಟನಾದ.

ಟಪೋರಿಯಂತಿದ್ದ ಮಾಂಟೋ ತನ್ನ ತಂದೆಯಿಂದ ತೀರಾ ಅಸಡ್ಡೆಗೊಳಗಾಗಿದ್ದ ಮಾತ್ರವಲ್ಲ, ತೀರಾ ಅನಾದರಕ್ಕೂ ಗುರಿಯಾಗಿದ್ದ. ಮಾಂಟೋನ ಮಲ ಸಹೋದರರು ಉನ್ನತ ವಿದ್ಯಾಭ್ಯಾಸವನ್ನು ಪಡೆದು ಉನ್ನತ ಹುದ್ದೆಗಳಲ್ಲಿದ್ದರೂ ಮಾಂಟೋ ಮಾತ್ರ ಅವರೆಲ್ಲರಿಗಿಂತ ವ್ಯತಿರಿಕ್ತವಾಗಿ ಎಳೆಯಪ್ರಾಯದಲ್ಲೇ ಸಿಗರೇಟು, ಗಾಂಜಾ, ಚರಸ್‌ನಂತಹ ಅಮಲು ಪದಾರ್ಥಗಳ ದಾಸನಾದ. ಜೂಜುಕೋರನಾದ. ಒಟ್ಟಾರೆಯಾಗಿ "ಸಭ್ಯ ಸಮಾಜ(?)ದ" ಕಣ್ಣಲ್ಲಿ ಮಾಂಟೋ ಓರ್ವ ಅಪಾಪೋಲಿಯಾಗಿದ್ದ.

ಆದರೆ ಮಾಂಟೋ ಒಂದು ವಿಧದ ಮಾನಸಿಕ ಚಾಂಚಲ್ಯದಿಂದ ಬಳಲುತ್ತಿದ್ದ. ಆ ದಿನಗಳಲ್ಲಿ ಮನಶ್ಶಾಂತಿಯನ್ನು ಅರಸಿ ಸೂಫಿಗಳ ಸಮಾಧಿಗಳಿಗೆ ಭೇಟಿ ಕೊಡುತ್ತಿದ್ದ, ಫಕೀರರ ಸನ್ನಿಧಾನದಲ್ಲಿ ಕಾಲಕಳೆಯುತ್ತಿದ್ದ. ಪದೇಪದೇ ಕಬರ್‌ಸ್ಥಾನಗಳಿಗೆ ತೆರಳಿ ಅಲ್ಲೇ ಗಂಟೆಗಟ್ಟಲೆ ಒಬ್ಬಂಟಿಯಾಗಿ ಕಳೆಯುತ್ತಿದ್ದ, ಹರೆಯದ ಬಾಲಕಿಯರನ್ನು ನೋಡುತ್ತಾ ಸುಖಿಸುತ್ತಿದ್ದ ಅವರಲ್ಲಿ ಪ್ರೇಮವನ್ನು ಹುಡುಕುತ್ತಿದ್ದ. ಇಂತಹ ಚಂಚಲತೆಯ ಮನೋಸ್ಥಿತಿಯಲ್ಲಿ ಅಖ್ತರ್ ಶೆರಾನಿಯವರ "ಏ ಇಶ್, ರಹೀಂ ಲೇಚಲ್" ಎಂಬ ಹಾಡನ್ನು ಆವರ್ತಿಸಿ ಆವರ್ತಿಸಿ ಆಲಿಸುತ್ತಿದ್ದ.

ಇಂತಹ ಸಂಕೀರ್ಣ ಮನೋಸ್ಥಿತಿಯಲ್ಲಿದ್ದ ಮಾಂಟೋನಿಗೆ ಆ ಕಾಲದ ಪ್ರಸಿದ್ಧ ಲೇಖಕ, ಪತ್ರಕರ್ತ ಅಬ್ದುಲ್ ಬಾರಿ ಅಲಿಯವರ ಪರಿಚಯವಾಯಿತು. ಅಬ್ದುಲ್ ಬಾರಿ ಅಲಿಯವರ ಸಂಪರ್ಕ ಅಪಾಪೋಲಿ ಮಾಂಟೋನ ಬದುಕಿನ ದಿಕ್ಕನ್ನೇ ಬದಲಿಸಿತು. ಜೂಜುಕಟ್ಟೆಯಲ್ಲಿ ವ್ಯರ್ಥವಾಗಿ ಕಳೆಯುತ್ತಿದ್ದ ಸಮಯವನ್ನು ಮಾಂಟೋ ಎಡೆಬಿಡದ ಓದಿನಲ್ಲಿ ಕಳೆಯತೊಡಗಿದ. ಮುಸಾವತ್ ಎಂಬ ಪತ್ರಿಕೆಯಲ್ಲಿ ಅಬ್ದುಲ್ ಬಾರಿ ಅಲಿಯವರು ಮಾಂಟೋನಿಗೆ ಉದ್ಯೋಗ ಕೊಟ್ಟರು. ಅದರ ಸಿನಿಮಾ ಪುಟಗಳಿಗೆ ಮಾಂಟೋನ ಪ್ರವೇಶವಾಯಿತು.

ಬರೀ ಮೂರು ತಿಂಗಳ ಅವಧಿಯಲ್ಲಿ ಕಟ್ಟರ್ ಎಡಪಂಥೀಯ ಒಲವಿನವರಾದ ಬಾರಿ ಸಾಹೇಬರು ಮಾಂಟೋನಿಗೆ ಆಸ್ಕರ್ ವೈಲ್ಡ್, ದಾಸ್ತೋವಸ್ಕಿ, ವಿಕ್ಟರ್ ಹ್ಯೂಗೋ, ಮ್ಯಾಕ್ಸಿಂ ಗಾರ್ಕಿ, ಚೆಕೋವ್, ಪುಷ್ಕಿನ್, ಮೊಪಾಸಾ ಮುಂತಾದ ಎಡಪಂಥೀಯ ಲೇಖಕರನ್ನು ಓದಿಸಿದರು. ಮೊದಲಿನ ಚಿತ್ತ ಚಾಂಚಲ್ಯತೆಯಿಂದ ಸ್ವಲ್ಪ ಹೊರಬಂದ ಮಾಂಟೋ ಆ ಬಳಿಕ ಕ್ರಾಂತಿಯ ಕನಸಿನಲ್ಲಿ ಲೀನನಾಗಿ ಬಿಟ್ಟ. ಮುಸಾವ್ವತ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಲೇ ವಿಕ್ಟರ್ ಹ್ಯೂಗೋನ 'ಲಾಸ್ಟ್ ಡೇಸ್ ಆಫ್ ಕಂಡೆಮ್ಡ್' ಕೃತಿಯನ್ನು 'ಸರ್‌ಗುರುಸ್ತೆ ಅಸೀರ್' ಎಂಬ ಹೆಸರಿನಲ್ಲಿ ಅನುವಾದಿಸುವ ಮೂಲಕ ಮಾಂಟೋ ಓರ್ವ ಲೇಖಕನಾದ. ಆ ಬಳಿಕ ಆಸ್ಕರ್ ವೈಲ್ಡ್ ರಷ್ಯನ್ ಕ್ರಾಂತಿಕಾರಿಗಳ ಕುರಿತಂತೆ ರಚಿಸಿದ 'ವೆರಾ' ಎಂಬ ನಾಟಕವನ್ನು ಉರ್ದುವಿಗೆ ಭಾಷಾಂತರಿಸಿದ. 1931ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ಮಾಂಟೋ ತನ್ನ ಪ್ರಥಮ ಕತೆ 'ತಮಾಷಾ' ಬರೆದ. ಆ ಬಳಿಕ ರಷ್ಯನ್ ಕತೆಗಳ ಅನುವಾದ 'ರೂಸೀ ಅಫ್ಸಾನೆ' ಪ್ರಕಟವಾಯಿತು. ಮಾಂಟೋ ಹೀಗೆ ಮೂರು ಅನುವಾದ, ಒಂದು ಸ್ವಂತ ಕತೆ ರಚಿಸಿದ ಬಳಿಕ ಪದವಿ ಪೂರ್ಣ ಗೊಳಿಸುವ ನಿಟ್ಟಿನಲ್ಲಿ ಅಲಿಘರ್ ಮುಸ್ಲಿಂ ಯೂನಿವರ್ಸಿಟಿಗೆ ದಾಖಲಾದ. ಅಲ್ಲಿ ಖ್ಯಾತ ಲೇಖಕ ಸರ್ದಾರ್ ಅಲಿ ಜಾಫ್ರಿಯವರ ಪರಿಚಯವಾಯಿತು. ಯೂನಿವರ್ಸಿಟಿ ವಿದ್ಯಾರ್ಥಿಯಾಗಿರುವಾಗಲೇ **Indian Progressive writers Association** ಎಂಬ ಸಂಘಟನೆಯನ್ನು ಗೆಳೆಯರೊಂದಿಗೆ ಸೇರಿ ಹುಟ್ಟು ಹಾಕಿದ. 1935ರ ಮಾರ್ಚ್ ತಿಂಗಳಲ್ಲಿ ಯೂನಿವರ್ಸಿಟಿ ಮ್ಯಾಗಝಿನ್‌ನಲ್ಲಿ ಮಾಂಟೋನ ಎರಡನೇ ಕತೆ 'ಇಂಕ್ವಲಾಬ್ ಪಸಂದ್' ಪ್ರಕಟವಾಯಿತು.

1932ರಲ್ಲಿ ಮಾಂಟೋನ ತಂದೆ ಮರಣ ಹೊಂದಿದ್ದರಿಂದ ತಾಯಿಯನ್ನು ನೋಡಿಕೊಳ್ಳುವ ಹೊಣೆಯೂ ಮಾಂಟೋನ ಹೆಗಲ ಮೇಲೆ ಬಿದ್ದಿತು. ಆಗ ತುತ್ತು ಕೂಳಿಗೂ ತತ್ವಾರ ಎದುರಿಸುವ ಪರಿಸ್ಥಿತಿ ಎದುರಾಯಿತು. ಆದಾಗ್ಯೂ ಪದವಿ ಪೂರೈಸಲು ಯೂನಿವರ್ಸಿಟಿ ಸೇರ್ಪಡೆಯಾಗಿದ್ದ ಮಾಂಟೋ ಪದವಿಯನ್ನು ಪೂರೈಸಲಾಗಲಿಲ್ಲ, 1935ರಲ್ಲಿ ಲಾಹೋರಿನ 'ಪಾರಸ್' ಎಂಬ ಪತ್ರಿಕೆಯಲ್ಲಿ ಮಾಂಟೋ ನೌಕರಿಗೆ ಸೇರಿದ. ಅಲ್ಪಾವಧಿಯಲ್ಲೇ ಸಹೋದ್ಯೋಗಿಯೊಬ್ಬರೊಂದಿಗೆ ವೈಮನಸ್ಸುಂಟಾಗಿ ನೌಕರಿ ತೊರೆದ ಮಾಂಟೋ 1936ರಲ್ಲಿ ಮುಂಬೈಗೆ ತೆರಳಿ ಅಲ್ಲಿ 'ಮುಸವ್ವಿರ್' ಎಂಬ ಸಿನಿಮಾ ಪತ್ರಿಕೆಗೆ ಸಂಪಾದಕನಾದ. ಒಂದಾದ ಮೇಲೊಂದರಂತೆ ಕತೆಗಳನ್ನು ಬರೆಯುತ್ತಲೇ ಉರ್ದು ಕಥಾ ಜಗತ್ತಿನಲ್ಲಿ ಒಂದು ನೆಲೆ ಕಂಡುಕೊಂಡ ಮಾಂಟೋನ ಮೊದಲ ಕಥಾಸಂಕಲನ 'ಆತಿಶ್ ಪರೇ' 1936ರಲ್ಲಿ ಪ್ರಕಟವಾಯಿತು. ಮುಂಬಯಿಯಲ್ಲಿ ಮಾಂಟೋನಿಗೆ ಹಿಂದಿ ಸಿನಿಮಾ ಜಗತ್ತಿನ ಖ್ಯಾತನಾಮರಾಗಿದ್ದ ಅಶೋಕ್‌ಕುಮಾರ್‌ರ ಗೆಳೆತನವಾಯಿತು. 1934ರಲ್ಲಿ 'ಕಿಶನ್ ಕನ್ಹೈಯ್ಯಾ' ಚಿತ್ರಕ್ಕೆ ಸಂಭಾಷಣೆ ಬರೆಯುವ ಮೂಲಕ ಮಾಂಟೋ ಸಿನಿಮಾ ಜಗತ್ತಿಗೆ ಎಂಟ್ರಿಕೊಟ್ಟ. 1936ರಲ್ಲಿ 'ಅಪ್ನಿ ನಗರಿಯಾ' ಎಂಬ ಇನ್ನೊಂದು ಚಿತ್ರಕ್ಕೂ ಸಂಭಾಷಣೆ ಬರೆದ. ಹೀಗೆ ಮಾಂಟೋನ ಕೈಗೆ ಸ್ವಲ್ಪ ಹಣ ಬಂತು. 1939ರ ಎಪ್ರಿಲ್ 26ರಂದು ಸಫಿಯಾ ಬೇಗಂರನ್ನು ಮಾಂಟೋ ವರಿಸಿದ. ಒಂದು ಗಂಡು ಮೂರು ಹೆಣ್ಮಕ್ಕಳ ತಂದೆಯೂ ಆದ. 1941ರಲ್ಲಿ ದೆಹಲಿಯ ಆಲ್ ಇಂಡಿಯಾ ರೇಡಿಯೊದ ಉರ್ದು ವಿಭಾಗದಲ್ಲಿ ಮಾಂಟೋ ನೌಕರಿ ಗಿಟ್ಟಿಸಿಕೊಂಡ. ಆಲ್ ಇಂಡಿಯಾ ರೇಡಿಯೋದಲ್ಲಿ ನೌಕರಿಯಲ್ಲಿದ್ದಾಗ ರೇಡಿಯೋ ನಾಟಕಗಳಿಗೆ ಬಹಳಷ್ಟು ಬೇಡಿಕೆ ಇತ್ತು, ಮಾಂಟೋನ ನಾಟಕಗಳಿಗೆ ಎಂತಹ ಬೇಡಿಕೆ ಶುರುವಾಯಿತೆಂದರೆ ಮಾಂಟೋ ಆ ದಿನಗಳಲ್ಲಿ ಕತೆಗಳಿಗಿಂತಲೂ ಹೆಚ್ಚು ಮತ್ತು ನಿರಂತರವಾಗಿ ಒಂದರ ಮೇಲೊಂದರಂತೆ ನಾಟಕಗಳನ್ನು ಬರೆದ. ಹಲವಾರು ಪ್ರಬಂಧಗಳನ್ನೂ ರಚಿಸಿದ. ಆದರೆ ಮಾಂಟೋ ಆಲ್ ಇಂಡಿಯಾ ರೇಡಿಯೋದಲ್ಲೂ ಹೆಚ್ಚು ಕಾಲ ನೆಲೆಯೂರಲೇ ಇಲ್ಲ, ಅಲ್ಲಿಯೂ ವಿಕ್ಷಿಪ್ತ ಮನಸ್ಸಿನ ಮಾಂಟೋಗೆ ಅಲ್ಲಿನ ಮುಖ್ಯಸ್ಥರೊಂದಿಗೆ ಮನಸ್ತಾಪವುಂಟಾಗಿ ಮಾಂಟೋ ಕೆಲಸ ತೊರೆದ. ಆದರೆ ಮಾಂಟೋ ಆ ದಿನಗಳಲ್ಲಿ ಜನಪ್ರಿಯತೆಯ ಉತ್ತುಂಗಕ್ಕೇರಿದ್ದ.

ದೇಶ ವಿಭಜನೆಯ ಕಾಲಕ್ಕೆ ಮಾಂಟೋ ಹಿಂದಿ ಚಿತ್ರ ಜಗತ್ತಿನಲ್ಲಿ ಜನಪ್ರಿಯ ಸಂಭಾಷಣೆ ಬರಹಗಾರನಾಗಿ ಬಹಳಷ್ಟು ಹೆಸರು ಗಳಿಸಿದ್ದ. ಮಾಂಟೋನ ಮಾನಸಿಕ ಸ್ಥಿತಿ ಅವನು ಎಲ್ಲೂ ಗಟ್ಟಿಯಾಗಿ ತಳವೂರದಂತೆ ಮಾಡಿತ್ತು. ಅಮಲು ಪದಾರ್ಥಗಳ ದಾಸನಾಗಿದ್ದ ಮಾಂಟೋ ತನ್ನ ಆರೋಗ್ಯವನ್ನು ಕೆಡಿಸಿಕೊಂಡಿದ್ದ. ತನ್ನ ಏಕೈಕ ಗಂಡು ಮಗು ಆರಿಫ್ ಇನ್ನೇನು ಒಂದೂವರೆ ವರ್ಷ ತುಂಬಬೇಕೆನ್ನುವಷ್ಟರಲ್ಲಿ ಇಹದ ಪಯಣ ಮುಗಿಸಿದ್ದು ಮಾಂಟೋನ ಮಾನಸಿಕ ಕ್ಷೋಭೆ ಮತ್ತಷ್ಟು ಹೆಚ್ಚಾಗುವಂತೆ ಮಾಡಿತ್ತು. ಆ ಬಳಿಕ ಮಾಂಟೋ ವಿಪರೀತವಾಗಿ ಕುಡಿಯಲಾರಂಭಿಸಿದ. ತನ್ನ ಪತ್ನಿ ಮತ್ತು ಹೆಣ್ಮಕ್ಕಳನ್ನು ಆತ ಅತಿಯಾಗಿ ಪ್ರೀತಿಸುತ್ತಿದ್ದರೂ ಆತನ ಮನಸ್ಸಿನ ಬೇಗುದಿಗಳು ಆತನ ಬದುಕಿನ ಲಗಾಮು ತಪ್ಪಿಸಿತ್ತು. ಅಂತಹ ದಿನಗಳಲ್ಲಿ ಕೆಂಪು ದ್ವೀಪಗಳಿಗೆ ತೆರಳಲೂ ಮಾಂಟೋ ಹೇಸಲಿಲ್ಲ, ದೇಶವಿಭಜನೆಯ ಕಾಲದ ಕರಾಳ ಘಟನೆಗಳಾದ ನರಮೇಧ, ಅತ್ಯಾಚಾರ, ಹಲ್ಲೆ, ದೊಂಬಿ ಇವೆಲ್ಲವನ್ನೂ ಕಂಡ ಸೂಕ್ಷ್ಮಮನಸ್ಸಿನ ಮಾಂಟೋ ಜರ್ಝರಿತನಾದ. ನಿನ್ನೆಯವರೆಗೆ ಗೆಳೆಯರಾಗಿದ್ದವರು, ಪರಸ್ಪರ ಕೊಡುಕೊಳ್ಳುತ್ತಾ ಸಾಮಾಜಿಕ ಜೀವನದಲ್ಲಿ ಧರ್ಮ ಎಂಬ ಗೋಡೆಯ ತಡೆಯಿಲ್ಲದೆ ಸೌಹಾರ್ದತೆಯಿಂದ ಬದುಕುತ್ತಿದ್ದ ಜನಗಳು ಏಕಾಏಕಿ ಧರ್ಮದ ಹೆಸರಿನಲ್ಲಿ ಅತಿಮಾನುಷ ಕ್ರೌರ್ಯಕ್ಕಿಳಿದುದನ್ನು ಕಂಡ ಮಹಾಮಾನವತಾವಾದಿ ಮಾಂಟೋನಿಗೆ ತನ್ನ ಮನಸ್ಸಿನ ಹತೋಟಿ ತಪ್ಪಿ ಹೋಯಿತು. ಈತನ್ಮಧ್ಯೆ ಆತನಿಗೆ ಕ್ಷಯರೋಗವೂ ಬಾಧಿಸಿತು. ದೈಹಿಕವಾಗಿಯೂ, ಮಾನಸಿಕವಾಗಿಯೂ ತೀರಾ ಕುಗ್ಗಿ ಹೋದ ಮಾಂಟೋ ಎರಡೂ ವಿಧದ ನೋವಿನ ತಾತ್ಕಾಲಿಕ ಶಮನಕ್ಕಾಗಿ ವಿಪರೀತವಾಗಿ ಕುಡಿಯಲಾರಂಭಿಸಿದ.

ದೇಶ ವಿಭಜನೆಯ ಬಳಿಕ ಮಾಂಟೋ ಎಂದ
ಪಾಕಿಸ್ತಾನಕ್ಕೆ ಹೋಗಲು ನಿರ್ಧರಿಸಿದವನೇ ಆ
ಪಂಜಾಬ್‌ನಲ್ಲಿ ಹುಟ್ಟಿದ ಕಾಶ್ಮೀರಿ ಮೂಲದ ಮಾಂಟೋ
ಜನಪ್ರಿಯತೆಯ ಉತ್ತುಂಗಕ್ಕೇರಿದ್ದು ಬದುಕು ಕಟ್ಟಿಕೊಂಡ
ಮುಂಬೈನಲ್ಲಿ, ಅಲ್ಲಿ ಮಾಂಟೋನಿಗೆ ಚಿತ್ರಸ
ಅಶೋಕ್‌ಕುಮಾರ್, ಶ್ಯಾಂ ಮುಂತಾದ ಜೀವ
ಗೆಳೆಯರಿದ್ದರು. ಆತ ಮುಂಬೈಯನ್ನು ಅತಿಯಾ
ಪ್ರೀತಿಸುತ್ತಿದ್ದ, ದೇಶವಿಭಜನೆಯಾಗಿ ಒಂದು ವರ್ಷದವರೆ
ಮುಂಬೈಯಲ್ಲೇ ಇದ್ದ ಮಾಂಟೋ ಏಕಾಏಕಿಯಾ
ಲಾಹೋರ್‌ಗೆ ತೆರಳಲು ನಿರ್ಧರಿಸಿದ.

ಆತನ ಜೀವನ ಚರಿತ್ರಕಾರರು ಅದಕ್ಕೆ ಹಲ
ಕಾರಣಗಳನ್ನು ಕೊಡುತ್ತಾರೆ. ಆದರೆ ಆತ ಬರೆದ 'ಅಲ್‌ವಿದ
(ಕನ್ನಡದಲ್ಲಿ ಪುರುಷಾರ್ಥ) ಕತೆಯ ವಿವರಗಳು ಆತ
ಸ್ವಂತ ಬದುಕಿನ ಘಟನೆಗಳೆಂದು ವಿವರಿಸುವಾಗ ಅನೇ
ಲೇಖಕರು ಮಾಂಟೋನ ಜೀವದ ಗೆಳೆಯ ಶ್ಯಾಂನಿ
ಕೇಳಿದ ಆಘಾತಕಾರಿ ಮಾತೊಂದು ಮಾಂಟೋ ದೇ
ತೊರೆಯಲು ಕಾರಣ ಎಂದು ದಾಖಲಿಸಿದ್ದಾರೆ.

"ದೇಶ ವಿಭಜನೆಯಾದಾಗ ಪಾಕಿಸ್ತಾನ
ರಾವಲ್ಪಿಂಡಿಯಿಂದ ಸಿಖ್ ಪರಿವಾರವೊಂದು ಜೀವ
ಹಂಗು ತೊರೆದು ಓಡಿಬಂದಿತ್ತು, ಆ ಪರಿವಾರದ ಮುಖ
ತಾನು ಕಂಡಿದ್ದ ಭೀಕರ ಹಿಂಸಾಚಾರದ ಘಟನೆಗಳ
ನಿರೂಪಿಸಿದ್ದನ್ನು ಕೇಳಿದ ಮಾಂಟೋನ ಗೆಳೆಯ ಶ್ಯಾ
ಸಹ ರೋಷದಿಂದ ಕುದಿಯತೊಡಗಿದ. ಎಷ್ಟೋ ಹೊತ್ತ
ಬಳಿಕ ಸಿಖ್ ನಿರಾಶ್ರಿತರು ಹೊರಟುಹೋದ ಮೇ
ಮಾಂಟೋ 'ನಾನು ಒಬ್ಬ ಮುಸಲ್ಮಾನ, ನನ್ನನ್ನು ಕೊಲ್ಲಬೇ
ಅಂತ ನಿನಗೆ ಅನಿಸುವುದಿಲ್ಲವೇ?' ಎಂದು ಕೇಳಿದ.

ಶ್ಯಾಂ ತುಂಬಾ ಗಂಭೀರವಾಗಿ 'ಇಲ್ಲ ಈಗ ಕೊಲ್ಲಲಾ
ಆ ಸಿಖ್‌ನ ಬಾಯಿಂದ ಮುಸಲ್ಮಾನರು ಸಿಖ್ಖರ ಮೇ
ದೌರ್ಜನ್ಯವೆಸಗಿದ್ದನ್ನು ಕೇಳುತ್ತಿದ್ದಾಗ ನಿನ್ನನ್ನು ನಾನು ಕೊಲ್ಲ
ಸಾಧ್ಯತೆಗಳೇ ಹೆಚ್ಚಿತ್ತು.' ಇದರಿಂದ ಆದ ಆಘಾತ ಮಾಂಟೋ
ದೇಶ ತೊರೆಯಲು ಕಾರಣ ಎಂದೂ ಮಾಂಟೋನ ಜೀವ
ಚರಿತ್ರಗಾರ ಡಾ. ಬ್ರಿಜ್ ಪ್ರೇಮಿಯವರು ದಾಖಲಿಸಿದ್ದಾ
ಮಾಂಟೋ ಕುರಿತ ವ್ಯಕ್ತಿ ಚಿತ್ರ ಕೃತಿಯೊಂದನ್ನು ರಚಿಸಿ
ವಾರಿಸ್ ಅಲ್ವಿಯವರೂ ಇದೇ ಅಭಿಪ್ರಾಯಕ್ಕೆ ಹೆಚ್ಚ
ಒತ್ತು ನೀಡಿದ್ದಾರೆ.

ಮಾಂಟೋ ತನ್ನ ಮಾತಿನಿಂದಾಗಿಯೇ ದೇಶ ತೊರೆದ
ಎಂಬ ಸತ್ಯವನ್ನು ಶ್ಯಾಂಗೆ ಅರಗಿಸಿಕೊಳ್ಳಲಾಗಲಿಲ್ಲ, ಶ
ತನ್ನ ಜೀವನದುದ್ದಕ್ಕೂ ತಾನು ಕಳೆದುಕೊಂಡ ಮಾಂಟೋ
ಎಂಬ ಜೀವದ ಗೆಳೆಯನ ನೆನಪಿನಲ್ಲಿ ಕೊರಗಿದ್ದರಂ
ಮಾಂಟೋ ಲಾಹೋರಿನಲ್ಲಿ ತುತ್ತು ಕೂಳಿಗೂ ತತ್ವಾ
ಪಡುತ್ತಿದ್ದಾಗ, ಆತ ಗೆಳೆಯರಿಗೆ ದುಡ್ಡಿಗಾಗಿ ಎಡತಾಕುತ್ತಿದ
ಶ್ಯಾಂ ಮಾಂಟೋನಿಗೆ ಆ ಕಾಲದಲ್ಲಿ 500 ರೂಪಾಯಿಗಳ
ಕಳುಹಿಸಿದ್ದರಂತೆ. (ಮಾಂಟೋನ ಬವಣೆಯನ್ನು ಯಾರೋ
ಗೆಳೆಯರ ಮೂಲಕ ಶ್ಯಾಂ ಅರಿತಿದ್ದರಂತೆ)

ಲಾಹೋರ್‌ಗೆ ತೆರಳಿದ ಬಳಿಕ ಕೆಲವು ತಿಂಗಳುಗ
ಕಾಲ ಏನನ್ನೂ ಬರೆಯದೆ ಮಾಂಟೋ ಸುಮ್ಮನಿ
ಮುಂಬೈಯಿಂದ ಬರುವಾಗ ತಂದಿದ್ದ ಗಂಟು ಕ
ಹೋಗಿದ್ದರಿಂದ ಪುನಃ ಬರೆಯುವುದ
ಅನಿವಾರ್ಯವಾಯಿತು. ಮಾಂಟೋನ ಅತ್ಯುತ್ತ
ಸಣ್ಣಕತೆಗಳನ್ನು ಆತ ಬರೆದಿದ್ದು ತನ್ನ ಬದುಕಿನ ಕೊನೆ
ಏಳು ವರ್ಷಗಳನ್ನು ಕಳೆದಿದ್ದ ಪಾಕಿಸ್ತಾನದಲ್ಲೇ....

ಮಾಂಟೋನ ಸ್ನೇಹಿತ ಅಹಮದ್ ನದೀಂ ಕಾ
ಓರ್ವ ಪ್ರಗತಿಪರ ವಿಚಾರಧಾರೆಯ ಲೇಖಕನಾಗಿದ್ದ. ಆ
ಪಾಕಿಸ್ತಾನ್ ರೇಡಿಯೋದಲ್ಲಿ ಉದ್ಯೋಗದಲ್ಲಿದ್ದ. ಪಾಕಿಸ್ತಾನ
ಜನವಿರೋಧೀ ಪ್ರಭುತ್ವದ ತುತ್ತೂರಿಯಾಗಿ
ರೇಡಿಯೋದಲ್ಲಿ ಹೆಚ್ಚು ಕಾಲ ನಿಲ್ಲಲಾರದೆ ಕಾಸ್ಮಿ ತ
ಉದ್ಯೋಗಕ್ಕೆ ರಾಜೀನಾಮೆ ನೀಡಿ 'ನುಕೂಶ್' ಎಂ
ಮಾಸಿಕ ಪ್ರಾರಂಭಿಸಿದ. ಅದಕ್ಕೆ ಮಾಂಟೋ ತ
'ತಂಡಾಗೋಶ್' (ಕನ್ನಡದಲ್ಲಿ ಗಂಡಸುತನ ಮತ
ಶೀತಲಮಾಂಸ ಎಂಬ ಹೆಸರಲ್ಲಿದೆ) ಬರೆದ. ಕಾಮಕೇಳಿ
ವಿವರಗಳನ್ನು ಯಾವುದೇ ಮುಚ್ಚುಮರೆಯಿಲ್ಲದೇ ಬರೆ
ಆ ಕತೆಯನ್ನು ಪ್ರಕಟಿಸಲು ಹೆದರಿದ ಕಾಸ್ಮಿ ಬೇರೆ ಕ
ಬರೆಯಲು ಒತ್ತಾಯಿಸಿದ. ಆಗ ಮಾಂಟೋ ಬರೆದ ಕ
'ಖೋಲ್‌ದೋ' (ಓಪನ್ ಮಾಡು) ದೇಶ ವಿಭಜನೆ
ಕಾಲದಲ್ಲಿ ಕಾಮಪಿಪಾಸುಗಳ ಪೈಶಾಚಿಕ ಕೃತ್ಯಕ್ಕೆ ಬಲಿಯಾ
ಯುವತಿಯೊಬ್ಬಳ ದಾರುಣ ಕತೆ 'ಖೋಲ್‌ದೋ'.
ಕತೆಯ ಕೊನೆಯ ಸಾಲು ಪಾಕಿಸ್ತಾನಿ ಪ್ರಭುತ್ವವನ್ನು ಬೆ
ಬೀಳಿಸಿತು. ಮಾಂಟೋನ ಮೇಲೆ ಕೇಸು ದಾಖಲಾಯಿತ
ಆ ಕೊನೆಯ ಸಾಲು ಇಂತಿದೆ. "ಆಕೆಯ ನಿರ್ಜೀ
ಕೈಗಳು ಸಲ್ವಾರದ ಲಾಡಿಯನ್ನು ಬಿಚ್ಚಿ ಸಲ್ವಾರವನ
ಜಾರಿಸಿದವು. ಆಗ ಆಕೆಯ ಬಾಯಿಯಿಂದ ಹೊರಬ
ಶಬ್ದ ಖೋಲ್‌ದೋ (ಓಪನ್ ಮಾಡು)." ಮಾಂಟೋ
ಮೇಲೆ ಮೊಕದ್ದಮೆ ದಾಖಲಾಯಿತು. ಮಾತ್ರವಲ್ಲ



...ಶ್' ಪತ್ರಿಕೆ ಮೇಲೆ ಆರು ತಿಂಗಳ ನಿಷೇಧ ಬಿತ್ತು.
...ಹಿಂದೆ 'ನುಕೂಶ್'ನ ಕಾಸ್ಮಿ ಪ್ರಕಟಿಸಲು ನಿರಾಕರಿಸಿದ್ದ ...ಗೋಶ್' ಕಥೆಯನ್ನು ಮಾಂಟೋ ಹಲವು ಪತ್ರಿಕೆಗಳಿಗೆ ...ಸಿದನಾದರೂ ಅದನ್ನು ಪ್ರಕಟಿಸುವ ಧೈರ್ಯವನ್ನು ಯಾರೂ ...ಲಿಲ್ಲ. ಸದ್ರಿ ಕತೆ ಪ್ರಕಟಗೊಂಡರೆ ಆಗಬಲ್ಲ ಸಂಭಾವ್ಯ ...ಮತಗಳ ಅರಿವಿದ್ದೂ ಮಾಂಟೋ ಆ ಕತೆ ಪ್ರಕಟವಾಗಲೆಂದು ...ನವಾಗಿ ಕಾತರಿಸಿದ. ಕಾಮಕೇಳಿಯನ್ನು ಕಲಾತ್ಮಕವಾಗಿ ...ಪಿಸಿದ್ದ 'ತಂಡಾಗೋಶ್' ಕತೆಯನ್ನು 'ಜಾವೇದ್' ಎಂಬ ...ಯ ವಿಶೇಷಾಂಕವೊಂದರಲ್ಲಿ ಪ್ರಕಟಿಸುವ ಧೈರ್ಯವನ್ನು ... ಸಂಪಾದಕ ತೋರಿದರು. ಸರಕಾರ ಮತ್ತು ಸ್ವಯಂಘೋಷಿತ ... ಎಷ್ಟು ಕೆಂಡಾಮಂಡಲರಾದರೆಂದರೆ ಪತ್ರಿಕೆಯ ...ರ್ಯಾಲಯಕ್ಕೆ ದಾಳಿ ಮಾಡಿ ಉಳಿದ ಪ್ರತಿಗಳನ್ನೆಲ್ಲಾ ವಶಕ್ಕೆ ...ಕೊಂಡಿತು. ಈ ಕತೆಯನ್ನು ಬರೆದುದಕ್ಕಾಗಿ ಮಾಂಟೋನ ... ದಾಖಲಿಸಿದ ಮೊಕದ್ದಮೆ ಎಷ್ಟು ಕೀಳುಮಟ್ಟದ್ದಾಗಿತ್ತೆಂದರೆ ...ರ್ವಜನಿಕ ಸ್ಥಳದಲ್ಲಿ ಮರ್ಮಾಂಗವನ್ನು ಪ್ರದರ್ಶಿಸಿ"ದವರ ... ಹೂಡಲಾಗುವಂತಹ ಸೆಕ್ಷನ್‌ನಲ್ಲಿ ಮಾಂಟೋನ ಮೇಲೆ ...ದಾಖಲಿಸಲಾಯಿತು. ಮಾಂಟೋ ಅವಮಾನದಿಂದ ಕುದ್ದು ...ದ.

...ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡ ಮೇಲೆ ...ಯುವುದು ಅಸಾಧ್ಯವೇನೋ ಎಂದೆನಿಸಿತ್ತು. ಆದರೆ ...ಟೋನ ಮನದಾಳದ ತಲ್ಲಣಗಳು ಬಿಡಬೇಕಲ್ಲ. ಮಾಂಟೋ ... ಮತ್ತೆ ಸ್ವಯಂಘೋಷಿತ ಸಭ್ಯ ಸಮಾಜದ ಮುಖವಾಡದ ...ರುವ ಲಂಪಟತೆಯನ್ನು ತನ್ನ ಕತ್ತಿಯ ಅಲಗಿಗಿಂತಲೂ ...ಚೂಪಾದ ಬರಹಗಳಲ್ಲಿ ಹರಿದು ಹಾಕಿದ. ಸಭ್ಯ ಸಮಾಜ ಮಾಂಟೋನಿಗೆ 'ಹುಚ್ಚ' ಎಂಬ ಪಟ್ಟ ಕಟ್ಟಿತು.

...ಬೂ' (ವಾಸನೆ) ಎಂಬ ಕತೆಯ ಮೂಲಕ ಮಾಂಟೋ ...ವಿಷ್ಯ ಪರಹೆಣ್ಣಿನ ಸಂಗಕ್ಕಾಗಿ ಹಾತೊರೆಯುವುದು ಮತ್ತು ... ಸುರಸುಂದರಿ ಪತ್ನಿಯಿದ್ದೂ ಆಕೆಯಲ್ಲಿರುವ ಸೌಂದರ್ಯಕ್ಕೆ ...ರು ಕಾಸಿನ ಬೆಲೆ ನೀಡದೇ ಬೇರೆ ಹೆಣ್ಣಿನಲ್ಲಿ ಏನೋ ... ವಿಧದ ವಿಲಕ್ಷಣ ಸುಖ ಪಡೆಯುವುದನ್ನು ಕಣ್ಣಿಗೆ ...ವಂತೆ ವಿವರಿಸುತ್ತಾನೆ. ಕಾಮಕೇಳಿಯ ದೃಶ್ಯಗಳ ಸ್ವಚ್ಛಂದ ...ಣೆ ಮತ್ತು ಹಲವಾರು ಬಾರಿ ಹೆಣ್ಣಿನ ಸ್ತನದ ಕುರಿತಂತೆ ...ವ ಅಳುಕೂ ಇಲ್ಲದೇ ವರ್ಣಿಸುವುದು ಇತ್ಯಾದಿಗಳು ...ತೆಯ ಸೋಗಿನಲ್ಲಿರುವ ಸಮಾಜದ ಮುಖವಾಡವನ್ನು ...ವರಣಗೊಳಿಸುತ್ತದೆ. ಅಲ್ಲಿನ ಒಂದು ಸಾಲು ಇಂತಿದೆ: ...ಷದ ಗಂಟು ಸಡಿಲಗೊಂಡು ಪುಳಕ್ಕೆಂದು ಅವಳ ಎರಡು ...ಲೆಗಳು ಹೊರಬಂದವು. ಆಗತಾನೆ ಕುಶಲ ಕಂಬಾರನ ...ಂದ ರೂಪುಗೊಂಡ ಎರಡು ಬಟ್ಟಲುಗಳಂತೆ–ಮೃದುವಾಗಿ, ...ಡನೆ, ತಣ್ಣಗೆ, ಮುಟ್ಟಿದರೆ ಮುರಿಯುವಂತೆ ಹಾಗೂ ...ಖಿತವಾಗಿದ್ದವು. ಆ ಕಂದು ಬಣ್ಣದ ಮೊಲೆಗಳು ಕೆಸರ ...ದಲ್ಲಿ ತೇಲಿಬಿಟ್ಟ ಎರಡು ಸುಂದರ ದೀಪಗಳಂತೆ ...ಳೆಯುತ್ತಿದ್ದವು.' ಇಂತಹ ಬಿಚ್ಚುಬರಹವನ್ನು ಭಾರತ ಮತ್ತು ...ಸ್ತಾನದಂತಹ ಸಭ್ಯರ ಸೋಗಿನಲ್ಲಿರುವ ಸಮಾಜ ಇಂದಿಗೂ ...ಥೂ ಎನ್ನಬಹುದು, ಮಡಿವಂತಿಕೆ ಪ್ರದರ್ಶಿಸಬಹುದು. ...ರೆ ಪ್ರತಿಯೊಬ್ಬ ಸಭ್ಯನೂ ಆಳದಲ್ಲಿ ಇದನ್ನು ಓದುತ್ತಾ ...ಸುತ್ತಾನೆ.

ಈ ಕತೆ ಮಾಂಟೋನಿಗೆ ಅಶ್ಲೀಲ ಬರಹಗಾರ ಎಂಬ ...ವನ್ನು ಗಟ್ಟಿಗೊಳಿಸಿತು ಮತ್ತು ಕಾಯಂಗೊಳಿಸಿತು. ...ಕ್ಕಾಗಿಯೂ ಮಾಂಟೋ ನ್ಯಾಯಾಲಯಕ್ಕೆ ಅಲೆಯ ...ಕಾಯಿತು. ಇದರ ವಿಚಾರಣೆ ನಡೆಯುತ್ತಿರುವಾಗ ...ಯಾಲಯದಲ್ಲಿನ ಸಭ್ಯ(?)ರ ಮುಂದೆ ಮಾಂಟೋ ...ವಾಗಿಯೇ ಕೇಳಿಬಿಟ್ಟ: 'ಮೊಲೆಯನ್ನು ಮೊಲೆಯೆನ್ನದೆ ...ಕಾಯಿ ಎನ್ನಲಿಕ್ಕಾಗ್ತದಾ?'

ಮಾಂಟೋ ತನ್ನ ಬರಹಗಳ ಕುರಿತಂತೆ ಬಂದ ಕೆಟ್ಟ ...ಗೆ ಹೀಗೆ ಉತ್ತರಿಸುತ್ತಾನೆ: 'ನಿಮಗೆ ನನ್ನ ಕತೆಗಳು ಅಸಹನೀಯ ...ಸಿದರೆ ಅದು ನನ್ನ ಕತೆಗಳ ತಪ್ಪಲ್ಲ, ನಾನು ಬರೆದಿರುವುದು ... ಸಮಾಜದ ಹೊಲಸನ್ನು. ಮೊದಲು ಅದನ್ನು ನೀಗಿಸಿ.'

ಮಾಂಟೋ ವೇಶ್ಯಾಜಗತ್ತಿನ ತಲ್ಲಣಗಳ ಕುರಿತು ಮತ್ತು ...ಶ್ಯೆಯರ ಬದುಕಿನ ಬವಣೆಗಳ ಕುರಿತು ತನ್ನ ಅನೇಕ ಕತೆಗಳಲ್ಲಿ ...ಸಿದ್ದಾನೆ. ವೇಶ್ಯೆಯ ಕುರಿತಂತೆಯೇ ಮಾಂಟೋ ಬರೆದ ... ಅತ್ಯುತ್ಕೃಷ್ಟವಾದವುಗಳು 'ಕಾಲಿ ಶಲ್ವಾರ್', 'ಲೈಸನ್ಸ್', ...', 'ಹತಕ್', 'ಖುಷಿಯಾ', 'ದಸ್‌ರುಪ್‌ಯಾ' ...ಗಳು. ಯಾವುದೇ ಕತೆಗಳಲ್ಲೂ ಭಾವಪರವಶನಾಗದೇ ... ಮತ್ತು ಕುತೂಹಲದಿಂದ ಒಳಹೊಕ್ಕು ವೇಶ್ಯಾ ಜಗತ್ತಿನ ...ಗಳು ಮತ್ತು ವೇಶ್ಯೆಯರ ಬದುಕಿನ ಬವಣೆಗಳನ್ನು ಶೋಧಿಸಿ ...ರೋನಂತೆ ಬರೆದ ಕತೆಗಾರ ಸಿಗುವುದು ದುರ್ಲಭ.

ಮಾಂಟೋ ಈ ಕುರಿತಂತೆ ಹೀಗೆ ಹೇಳುತ್ತಾನೆ: 'ಒಬ್ಬ ... ಹೊಟ್ಟೆಪಾಡಿಗಾಗಿ ಟಾಂಗಾ ಓಡಿಸಿದರೆ 'ಸಭ್ಯ'ರು ... ಗೌರವದಿಂದ ನೋಡುತ್ತಾರೆ. ಅದೇ ಮಹಿಳೆ ವೇಶ್ಯಾವೃತ್ತಿಗೆ ಇಳಿದರೆ ಅದೇ 'ಸಭ್ಯ'ರು ಅವಳು ಮೈ ಮಾರಲು ಲೈಸನ್ಸ್ ಪಡೆದಿದ್ದಾಳೇನೋ ಎಂಬಂತೆ ನೋಡುತ್ತಾರೆ.'

ಮಾಂಟೋನ ಅತ್ಯಂತ ಶ್ರೇಷ್ಠ ಕತೆಗಳಲ್ಲೊಂದು ಎಂದು ಹೇಳಲಾಗುವ ಕತೆ 'ತೋಬಾ ತೇಕ್ ಸಿಂಗ್'. ದೇಶ ವಿಭಜನೆಯ ಕಾಲದ ಹಿಂದೂ ಮತ್ತು ಮುಸ್ಲಿಂ ಹುಚ್ಚರ ವಿನಿಮಯ ಎಂಬ ನೆಲೆಯಲ್ಲಿ ಮಾಂಟೋ ಬರೆದ ಕತೆಯಿದು. ಬಿಶನ್ ಸಿಂಗ್ ಎಂಬ ಸಿಖ್ ಹುಚ್ಚ ಭಾರತ ಮತ್ತು ಪಾಕಿಸ್ತಾನ ಇವೆರಡರಲ್ಲೂ ಸೇರಿರದ 'ತೋಬಾ ತೇಕ್ ಸಿಂಗ್' ಎಂಬ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡಿರದ ತನ್ನ ಊರಿಗಾಗಿ ಪರಿತಪಿಸುವ, ಅದನ್ನು ಹುಡುಕಾಡುವ ಕತೆ. ಎರಡು ದೇಶಗಳ ತಂತಿಬೇಲಿಯ ಮಧ್ಯೆ ಹಾದುಹೋಗುವ ನೋಮ್ಯಾನ್ಸ್ ಲ್ಯಾಂಡ್‌ನಲ್ಲಿ ತನ್ನ ತೋಬಾ ತೇಕ್ ಸಿಂಗನ್ನು ಕಲ್ಪಿಸಿ ಬಿಷನ್ ಸಿಂಗ್ 'ತೋಬಾ ತೇಕ್ ಸಿಂಗ್' ಎಂದೇ ಬಡಬಡಿಸುತ್ತಾ ನೋ ಮ್ಯಾನ್ಸ್ ಲ್ಯಾಂಡ್‌ನಲ್ಲೇ ತನ್ನ ಕೊನೆಯುಸಿರೆಳೆಯುತ್ತಾರೆ.

'ತೋಬಾ ತೇಕ್ ಸಿಂಗ್' ಕತೆಯ ಹುಚ್ಚ ಬಿಷನ್ ಸಿಂಗ್ ಬೇರಾರೂ ಅಲ್ಲ, ಸ್ವತಃ ಮಾಂಟೋ. ದೇಶ ವಿಭಜನೆಯಾದ ಬಳಿಕ ತನ್ನ ದೇಶ ಯಾವುದೆಂದು ನಿರ್ಧರಿಸಲಾಗದ ಮಾಂಟೋನ ಮನದಾಳದ ಬೇಗುದಿಯ ಪರಿಣಾಮದಿಂದ ಹುಟ್ಟಿದ ಕತೆಯೇ 'ತೋಬಾ ತೇಕ್ ಸಿಂಗ್'.

1947ರಿಂದ 97ರ ವರೆಗಿನ ಸ್ವತಂತ್ರ ಭಾರತದ 50 ವರ್ಷಗಳ ಅತ್ಯುತ್ತಮ ಭಾರತೀಯ ಬರಹಗಳ **Mirror Work** ಎಂಬ ಕೃತಿಯ ಮುನ್ನುಡಿಯಲ್ಲಿ ಅದರ ಸಂಪಾದಕರ ಸಲ್ಮಾನ್ ರಶ್ದಿ ಮಾಂಟೋನ 'ತೋಬಾ ತೇಕ್ ಸಿಂಗ್' ಕತೆಯನ್ನು ಒಂದು ಮೇರುಕೃತಿ (**Master Piece**) ಎಂದು ಬಣ್ಣಿಸಿದ್ದಾನೆ. ಬಹುಶಃ ಮಾಂಟೋ ಇದರ ಹೊರತಾಗಿ ಇನ್ನೇನನ್ನೂ ಬರೆಯದಿದ್ದರೂ ಜಾಗತಿಕ ಸಾಹಿತ್ಯದಲ್ಲಿ ಮಾಂಟೋ ಇಂತಹ ಮಹತ್ವದ ಸ್ಥಾನವನ್ನೇ ಪಡೆಯುತ್ತಿದ್ದ.

ಮಾಂಟೋ ತನ್ನ ಅನೇಕ ಕತೆಗಳಲ್ಲಿ ಕಥಾಪಾತ್ರಗಳ ಧರ್ಮವನ್ನು ಗೌಪ್ಯವಾಗಿಟ್ಟು ಮನುಷ್ಯನಾಳದ ಕ್ರೌರ್ಯವನ್ನು ಮಾತ್ರ ಚಿತ್ರಿಸುತ್ತಾನೆ. ಅಂತಹ ಕತೆಗಳಿಗೆ ಒಂದೆರಡು ಉದಾಹರಣೆ ಇಂತಿದೆ. 'ಮಿಸ್ಟೇಕ್' ಎಂಬ ಕತೆಯಲ್ಲಿ "ಹೊಟ್ಟೆಯನ್ನು ಸೀಳಿದ ಚಾಕು ಕೆಳಗಿಳಿಯುತ್ತಾ ಆತನ ಪೈಜಾಮದ ಲಾಡಿಯನ್ನು ಬಿಚ್ಚಿಸಿ ಮರ್ಮಾಂಗವನ್ನು ಹೊರಹಾಕಿತು. ಆಗ ಕೊಲೆಗಡುಕ 'ಅಯ್ಯೋ ಮಿಸ್ಟೇಕಾಯಿತು. ನಮ್ಮವನನ್ನೇ ಕೊಂದೆನಲ್ಲಾ...' ಎಂದು ಹತಾಶನಾಗುತ್ತಾನೆ."

ಮೋಸದ ವ್ಯಾಪಾರ ಕತೆಯ ಕೊನೆಯ ಸಾಲು ಇಂತಿದೆ: "ಹರಾಂ ಚೋರ್, 42 ರೂಪಾಯಿ ಇಸ್ಕೊಂಡು ನಮ್ಮ ಕೋಮಿನವಳನ್ನೇ ನಮಗೆ ಮಾರಿದ್ದಾನೆ."

ಈ ರೀತಿಯ ಅನೇಕ ಕತೆಗಳನ್ನು ಮಾಂಟೋ ಬರೆದಿದ್ದಾನೆ. ಮಾಂಟೋನಿಗೆ ಎಂದೂ ಜಾತಿಧರ್ಮಗಳು ಮುಖ್ಯವಾಗುವುದಿಲ್ಲ, ಆತನ ವಿಷಾದ ಮಾನವ ಧರ್ಮದ ವಿನಾಶಕ್ಕೆ ಮಾತ್ರ.

ಜಾಗತಿಕ ಸಾಹಿತ್ಯ ಲೋಕದಲ್ಲಿ ನಿಸ್ಸಂಶಯವಾಗಿಯೂ ಮಾಂಟೋ ಓರ್ವ ಧ್ರುವತಾರೆ. ಆದರೆ ಆತನ ವೈಯಕ್ತಿಕ ಬದುಕು ಪದಗಳಿಗೆ ಎಟುಕದಷ್ಟು ಯಾತನಾಮಯವಾಗಿತ್ತು. ದೇಶ ವಿಭಜನೆ ಬರೇ ಭೂಭಾಗಗಳ ವಿಭಜನೆಯಲ್ಲ, ಮಾಂಟೋನಂತಹ ಸೂಕ್ಷ್ಮಮನಸ್ಸಿನ ಮಹಾಮಾನವತಾವಾದಿಗಳಿಗೆ ಅದು ಮನಸು ಮನಸುಗಳ ವಿಭಜನೆಯೂ ಆಗಿತ್ತು. ಬಹುಶಃ ಮಾಂಟೋ ಸಿಜೋಫ್ರೇನಿಯಾ ಎಂಬ ಭಯಂಕರ ಮನೋರೋಗಕ್ಕೆ ಬಲಿಯಾಗಿ ಎರಡು ಬಾರಿ ಹುಚ್ಚಾಸ್ಪತ್ರೆ ಸೇರಬೇಕಾಗಿ ಬಂದಿರುವುದರಲ್ಲಿ ಇದೂ ಒಂದು ಕಾರಣವಾಗಿತ್ತು.

ಮಾಂಟೋ ಬದುಕಿದ ಕೊನೆಯ ಏಳು ವರ್ಷಗಳು ಅತ್ಯಂತ ಯಾತನಾಮಯವಾಗಿತ್ತು. ಆತ ತನ್ನ ಭಾರತದ ಗೆಳೆಯರಿಗೆ ಆಗಾಗ ಪತ್ರ ಬರೆದು ತನ್ನನ್ನು ಪಾಕಿಸ್ತಾನದಿಂದ ಭಾರತಕ್ಕೆ ಕರೆಸಿಕೊಳ್ಳಿ ಎಂದು ಗೋಗರೆದಿದ್ದ. ಅದೇ ಏಳು ವರ್ಷಗಳಲ್ಲಿ ಮಾಂಟೋ ಎಷ್ಟು ವೇಗವಾಗಿ ಬರೆಯುತ್ತಿದ್ದನೆಂದರೆ ಪತ್ರಿಕೆಗಳ ಕಚೇರಿಗೆ ತೆರಳಿ ಅವರಿಂದಲೇ ಕಾಗದ ಮತ್ತು ಪೆನ್ನು ಇಸ್ಕೊಂಡು ಒಂದೇ ಬೈಠಕಿಗೆ ಒಂದು ಕತೆಯನ್ನೋ, ಲೇಖನವನ್ನೋ, ಪ್ರಬಂಧವನ್ನೋ ಬರೆದು ಕೊಟ್ಟು ತನ್ನ ಸಂಭಾವನೆಯನ್ನು ಪಡೆದು ಸೀದಾ ಮದ್ಯದಂಗಡಿಗೆ ತೆರಳುತ್ತಿದ್ದ. ಒಂದು ಕೈಯಲ್ಲಿ ಕಳಪೆ ದರ್ಜೆಯ ಮದ್ಯದ ಬಾಟಲಿ ಮತ್ತು ಇನ್ನೊಂದು ಕೈಯಲ್ಲಿ ಪೆನ್ನು ಹಿಡಿದುಕೊಂಡೇ ನಿರಂತರವಾಗಿ ಬರೆಯುತ್ತಿದ್ದ ಮಾಂಟೋ ಒಮ್ಮೆ ಬರೆದುದನ್ನು ಪರಿಷ್ಕರಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಮಾಂಟೋನ ಕಲ್ಪನಾಶಕ್ತಿ ಅಂತಹ ಮಾನಸಿಕ ಕ್ಷೋಭೆಯ ದಿನಗಳಲ್ಲೂ ಅತ್ಯದ್ಭುತವಾಗಿತ್ತು. ಮಾಂಟೋ ವೈಯಕ್ತಿಕವಾಗಿ ಅತೀ ಭಾವುಕ ವ್ಯಕ್ತಿಯಾಗಿದ್ದರೂ ತನ್ನ ಕತೆಗಳಲ್ಲಿ ಆತ ಎಂದೂ ಭಾವಾವೇಶವನ್ನು ಪ್ರಕಟಿಸಿದ್ದಿಲ್ಲ. ಮಾಂಟೋ ಎಂದೂ ನೀತಿಭೋದಕನಂತೆ ಬರೆಯಲಿಲ್ಲ, ಮಾನವನ ಕ್ರೌರ್ಯವನ್ನು ತಣ್ಣಗೆ ವಿವರಿಸುತ್ತಾ ಹೋಗುವ ಮಾಂಟೋ ತೀರ್ಮಾನವನ್ನು ಓದುಗರಿಗೆ ಬಿಡುತ್ತಿದ್ದ. ಆತನ ಕತೆಗಳಲ್ಲಿ ಪ್ರಕಟವಾಗುವ ವಿಷಾದಕ್ಕೆ ಕಲ್ಲುಬಂಡೆಗಳನ್ನೇ ಒಡೆಯುವ ಶಕ್ತಿಯಿತ್ತು.

ತನ್ನ ಬದುಕಿನ ಅಂತಿಮ ವರ್ಷಗಳಲ್ಲಿ ಕುಡಿಯುವ ಸಲುವಾಗಿ ಗೆಳೆಯರಿಂದ ದುಡ್ಡು ಕೇಳಲು ಮಾಂಟೋ ಹಿಂಜರಿಯಲಿಲ್ಲ. ಅದು ಎಷ್ಟು ಅತಿರೇಕಕ್ಕೆ ತಲುಪಿತ್ತೆಂದರೆ ಕೊನೆಕೊನೆಗೆ ಗೆಳೆಯರು ಮಾಂಟೋನನ್ನು ಕಂಡಾಕ್ಷಣ ದಾರಿ ತಪ್ಪಿಸುತ್ತಿದ್ದರು. ವಿಪರೀತವಾಗಿ ಕುಡಿಯುತ್ತಿದ್ದ ಮಾಂಟೋ ತನ್ನ 43ನೇ ವಯಸ್ಸಿನಲ್ಲಿ ಲಿವರ್‌ನ ಸಿರೋಸಿಸ್ ಎಂಬ ಕಾಯಿಲೆಗೆ ತುತ್ತಾಗಿ ಕೊನೆಯುಸಿರೆಳೆದ.


ಆದರೆ ಮಹಾಮಾನವತಾವಾದಿ ಕತೆಗಾರ ಮಾಂಟೋ ಮಾನವಪ್ರೇಮಿ ಮನಸ್ಸುಗಳಲ್ಲಿ ಎಂದೆಂದೂ ಅಮರ. ●

ಬದುಕು ತಾಯಾಗಲಿ ಎಂಬ ಕವಿತೆಯ ಕನಸು

ಪುಸ್ತಕ ವಿಮರ್ಶೆ

● ಅರುಣ್ ಜೋಳದಕೂಡ್ಲಿಗಿ

ಹಗೆಯ ಹಣೆಯ ಮೇಲೆ/ ನಂಬಿಕೆಯ ಹಣತೆ ಇರಲಿ/ ಪ್ರೀತಿ ಅರಳಲಿ/ ಅದು ಚೆಲ್ಲುವ ಬೆಳಕಲಿ/ ಬದುಕು ತಾಯಾಗಲಿ ಎನ್ನುವ ಎಚ್.ಬಿ.ರವೀಂದ್ರ ಸಾಗರ ತಮ್ಮ 'ಕವಿತೆಯ ಕನಸು' ಮೊದಲ ಕಾವ್ಯಕಟ್ಟನ್ನು ಹಿಡಿದು ಸಾಹಿತ್ಯಾಸಕ್ತರ ಎದುರು ನಿಂತಿದ್ದಾರೆ. ಈ ಸಂಕಲನದ ಓದು ಬಸವನ ಹುಳುವಿನ ಮೃದುತ್ವ ಮತ್ತು ಅದರ ನಿಧಾನ ನಡಿಗೆಯ ಅನುಭವ ಕೊಡುವ ಕಾರಣಕ್ಕೆ ಆಪ್ತವಾಗುತ್ತದೆ. ತನ್ನಷ್ಟಕ್ಕೆ ತಾನು ಸದ್ದಿಲ್ಲದೆ ಜುಳುಜುಳು ಹರಿವ ನದಿಯಂತೆ ಇಲ್ಲಿನ ಪದ್ಯಗಳ ಓದು ತೀರಾ ಸರಳವಾಗಿ ತಾಕುತ್ತವೆ.



ಈ ಸಂಕಲನದಲ್ಲಿ 58 ಕವಿತೆಗಳಿವೆ. ಅಷ್ಟೂ ಕವಿತೆಗಳ ಒಳಗಿರುವ ಸಮಾನ ಎಳೆ 'ಈ ಕಾಲದ ಬಗೆಗೆ ನಮ್ಮೊಳಗಿದ್ದ ಬೇಗುದಿ ಕಾಣಿಸಿಕೊಳ್ಳದೆ, ಅದರ ಶಾಖ ಮಾತ್ರ ತಣ್ಣಗೆ ತಟ್ಟುವ ಮಾದರಿಯದು'. ಹಾಗಾಗಿಯೆ 'ಹೂ ಬಿದ್ದಿದೆ ಕವಿತೆಯ ಕಣ್ಣಿಗೆ' ಎಂದು ಬರೆಯುತ್ತಾರೆ. ಮೈ ಸುಡುವ ಸುಖದ ಕೆಂಡಕೆ/ ಟನ್ನುಗಟ್ಟಲೆ ಬೂದಿಯ ಭ್ರಮೆ (ನಿಜಸತ್ಯ) ಎನ್ನುತ್ತ ತನ್ನ ಕಾಲದ ನಿಜಸತ್ಯಗಳನ್ನು ತಣ್ಣಗೆ ಹೇಳುತ್ತಾರೆ. ಬೆಂಕಿಯಲಿ ನೋವಿಲ್ಲದೆ ಬೇಯುವುದು ಹೇಗೆಂಬ ಅಳುಕು ಸಂಕಲನದುದ್ದಕ್ಕೂ ಕವಿಯನ್ನು ಕಾಡಿದೆ.


ಕವಿ ತನ್ನ ಕಾಲದ ಪಲ್ಲಟ ತವಕ ತಲ್ಲಣಗಳ ಬಗ್ಗೆ ಸ್ವಗತ ಮಾದರಿಯಲ್ಲಿ ತಮ್ಮಪಾಡಿಗೆ ತಾವು ಹೇಳಿಕೊಳ್ಳುತ್ತಾರೆ. ಆಗಂತುಕ ಕಾಲದಲ್ಲಿ ನಿನ್ನಾಗಮನ/ಅಭದ್ರತೆ ಅನಿಶ್ಚಿತತೆ ನೆಲದಿ ನಿಂತು/ ಹೇಗೆ ಸ್ವಾಗತಿಸಲಿ ನಿನ್ನ (ಹೇಗೆ ಸ್ವಾಗತಿಸಲಿ ನಿನ್ನ) ಎನ್ನುವಲ್ಲಿ ಭೂಮಿಗೆ ಕಾಲಿಡುವ ಶಿಶುವನ್ನು ಸ್ವಾಗತಿಸುವಾಗ ಬಹುಪಾಲು ತಂದೆತಾಯಿಗಳಿಗೂ ಮೂಡುವ ಸುಡು ಪ್ರಶ್ನೆ ಇಲ್ಲಿ ಕವಿಯನ್ನು ಕಾಡಿದೆ. ಒಂದು ಕನಸಿನ ಪರಿ, ಆಣತಿ, ಸತ್ಯಮಿತ್ಯಗಳ ನಡುವೆ, ಬರಬೇಡಿ ದೇವರುಗಳೇ ನಡುಬೀದಿಗೆ, ಸುಳ್ಳಾಗದ ಸತ್ಯ ಸೋತಿದೆ, ಉರಿಯ ಬದುಕು, ಎಲ್ಲಿ ಹಾರಿತು ಹಕ್ಕಿ ದೊಡ್ಡಾಲ, ಕಳೆದು ಹೋದ ಕೊಳಲನಾದ, ಹೊತ್ತಿ ಹುರಿವ ಹೊತ್ತು ಮುಂತಾದ ಕವಿತೆಗಳಲ್ಲಿ ಇಂತಹದೇ ಸುಡುಪ್ರಶ್ನೆಗಳಿಗೆ ಕವಿ ಎದುರಾಗಿದ್ದಾನೆ.

ಇಲ್ಲಿನ ಹಲವು ಪದ್ಯಗಳಲ್ಲಿ ನಿಸರ್ಗದ ಚೆಲುವು ಮಾಸುವ ಬಗೆಗಿನ ಆತಂಕವಿದೆ. ಮಾನವೀಯ ಸಂಬಂಧಗಳು ಯಾಂತ್ರಿಕವಾಗುವ ಬಗ್ಗೆ ಒಳಗೊಳಗೆ ನೋವಿದೆ. ಇವುಗಳೆಲ್ಲವನ್ನೂ ಕವಿ ತಾಳ್ಮೆಯಿಂದ ನೋಡಲು ಸಾಧ್ಯವಾಗಿದೆ. ಅಂತೆಯೇ ಅವುಗಳ ಹೊಟ್ಟೆಯೊಳಗೂ ಹೂವೊಂದು ಮೂಡಬಹುದಾದ ಆಶಾವಾದವೂ ಇದೆ. ಅದು ಈ ಸಂಕಲನದ ಹೆಚ್ಚುಗಾರಿಕೆ. ಶಿಲಾ ಪೂಜೆಯಲಿ ಶಿಲುಬೆಗಳ ನಿರ್ಮಾಣ, ಧರ್ಮಪೀಠ ಈಗ ಬಲಿಪೀಠವಾಗಿರುವ ಬಗ್ಗೆ ಹೇಳುತ್ತಲೆ ಮಂದಿರ ಮಸೀದಿ ಗೋರಿಗಳ ಮೇಲೆ ಕೆಂಪುಹುಲ್ಲು ಚಿಗುರುವ ಬಗ್ಗೆ ವಿಷಾದ ವ್ಯಕ್ತವಾಗುತ್ತದೆ. ಅದ್ಭುತ ರೂಪಕ, ಕಂಡರಿಯದ ಚಿತ್ರ, ರೋಚಕತೆ, ಸಮಾಜಪರ ದೊಡ್ಡ ಧ್ವನಿ ಇಲ್ಲಿಲ್ಲ. ಹಾಗೆ ನೋಡಿದರೆ, ಈ ಸಂಕಲನ ಸಪ್ಪೆಯಾಗಿ ಕಾಣುತ್ತದೆ. ಅದುವೆ ಇದರ ಶಕ್ತಿಯೂ ಆಗಿದೆ.

ಇಲ್ಲಿನ ಹಲವು ಪದ್ಯಗಳು ತುಂಡುಚಿತ್ರಗಳಂತಿವೆ. ಈ ಚಿತ್ರಗಳು ಚಿತ್ರವತ್ತಾಗಿವೆಯಾದರೂ, ಅವುಗಳ ಒಳಧ್ವನಿಯ ಭಿನ್ನ ಆಯಾಮಗಳು ಕಾಣುವುದಿಲ್ಲ. ಹಾಗಾಗಿ ಇವು ಚಿತ್ರಗಳಷ್ಟೇ ಆಗಿರುವುದು ಈ ಸಂಕಲನದ ಮಿತಿಯಾಗಿದೆ. ಕೆಲವೆಡೆ ಕವಿಯ ಸಂಕಟದ ತೀವ್ರತೆ ಓದುಗರಿಗೆ ದಾಟುವುದಿಲ್ಲ. ಇನ್ನು ಹಲವು ಕವಿತೆಗಳು ತಾರ್ಕಿಕ ಅಂತ್ಯ ಕಾಣದೆ ದಿಢೀರ್ ಮುಕ್ತಾಯವಾಗಿ, ಇನ್ನೇನೋ ಶರ ಉಳಿಯುವಂತೆಯೂ ಅನುಭವವಾಗುತ್ತದೆ. ಡಾ.ಬಿ.ಎಂ.ಪುಟ್ಟಯ್ಯ ಅವರ ಮುನ್ನುಡಿ ಉದ್ದವಾಯಿತು ಎನ್ನಿಸಿದರೂ, ಕಾವ್ಯದ ಬಗೆಗೆ ವಿದ್ಯಾರ್ಥಿಗಳ ಕೂರಿಸಿಕೊಂಡು ಪಾಠ ಮಾಡಿದಂತಿದೆ.

ಈ ಸಂಕಲನದಲ್ಲಿ ಚಂದ್ರಶೇಖರ ಕಂಬಾರ, ಕಾಗೋಡು ತಿಮ್ಮಪ್ಪ, ಸುಜ್ಞಾನ ಮೂರ್ತಿ, ಹುಚ್ಚಪ್ಪ ಮಾಸ್ತರ್, ಸಿ.ಅಶ್ವಥ್ ಬಗೆಗೆ ವ್ಯಕ್ತಿ ಚಿತ್ರದ ಪದ್ಯಗಳಿವೆ. ವ್ಯಕ್ತಿಚಿತ್ರ ಅತಿರಂಜನೆ ಇಲ್ಲದೆ ಸಹಜವಾಗಿ ಮೂಡಿದೆಯಾದರೂ, ಅವರ ಬಗ್ಗೆ ಕವಿಗೆ ಸಣ್ಣಪ್ರಶ್ನೆ ಉಳಿಯದಿರುವುದು, ಸಣ್ಣ ಅನುಮಾನ ಕಾಡದಿರುವುದು, ವ್ಯಕ್ತಿಯಾಗಿ ಮೀರದ ಮಿತಿಗಳ ಬಗೆಗೆ ಆತಂಕವಿಲ್ಲದಿರುವುದು, ಈ ವ್ಯಕ್ತಿ ಚಿತ್ರಗಳ ಸೋಲಾಗಿದೆ.

ಸಂಕಲನದ ಆರಂಭಕ್ಕೆ ಕಂಬಾರರಿಗೆ ನಮಸ್ಕರಿಸುವ ಪದ್ಯವಿದೆ. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯದ ಕ್ಯಾಂಪಸ್ಸಿನ ಚಿತ್ರಣದ ಮೂಲಕ ಕಂಬಾರರನ್ನು ಕಟ್ಟಿಕೊಡುತ್ತಾರೆ. ಅದೇ ಕಂಬಾರರು ಸ್ವಜಾತಿ, ಬಾಹ್ಯ ಒತ್ತಡಕ್ಕೆ ಮಣಿದು ಪ್ರತಿಭೆ ಇಲ್ಲದವರನ್ನು ಅಧ್ಯಾಪಕರನ್ನಾಗಿಸಿದರು. ವಿಶ್ವವಿದ್ಯಾಲಯ ಕೊಳೆಯುತ್ತಿರುವುದರಲ್ಲಿ ಅಂಥವರ ಪಾಲಿರುವ ಬಗ್ಗೆ ಆತಂಕ ವ್ಯಕ್ತವಾಗದಿದ್ದರೆ, ಕನ್ನಡ ವಿಶ್ವವಿದ್ಯಾಲಯದ ಜತೆ ಕಂಬಾರರ ಚಿತ್ರ ಪೂರ್ಣಗೊಳ್ಳುವುದಾದರೂ ಹೇಗೆ?




ಇಂತಹ ಮಿತಿಗಳಾಚೆಯೂ ಇಲ್ಲಿ ಅನುಭವದ ಸ್ವಸ್ಥತೆ ಕಾಣುತ್ತದೆ. ಯಾಂತ್ರಿಕ ಪ್ರತಿಭಟನೆ, ಆಕ್ರೋಶ, ಧಿಕ್ಕಾರವನ್ನು ವಿಶಾದವಾಗಿ ವ್ಯಾಖ್ಯಾನಿಸುವಲ್ಲಿ ಕವಿಯ ಹೆಚ್ಚುಗಾರಿಕೆ ಪ್ರಕಟವಾಗುತ್ತದೆ. ಮೊದಲ ಸಂಕಲನದಲ್ಲಿ ಇಷ್ಟು ಸಾವಧಾನವನ್ನು ಪಡೆದ ಹೆಚ್.ಬಿ.ರವೀಂದ್ರ ಸಾಗರ ಅವರ ಮುಂದಿನ ಕವಿತೆಯ ಪಯಣ ಹೇಗಿರುತ್ತದೆ ಎನ್ನುವ ಕುತೂಹಲವನ್ನಂತೂ ಈ ಸಂಕಲನ ಮೂಡಿಸುತ್ತದೆ.

ಕವಿತೆಯ ಕನಸು
ಹೆಚ್.ಬಿ. ರವೀಂದ್ರ ಸಾಗರ
ಪುಟ: 82, ಬೆಲೆ: 80
ಪಲ್ಲವ ಪ್ರಕಾಶನ, ಚನ್ನಪಟ್ಟಣ
ಮೊ: 9480353507 ●



ಈಗ ಲಂಕೇಶರು ಇದ್ದಿದ್ದರೆ?



• ಇಂದಿರಾ ಲಂಕೇಶ್

1960 ರಿಂದ 1999 ರವರೆಗೂ ಲಂಕೇಶರ ಮಡದಿಯಾಗಿ ನಾನು ನನ್ನ ಜೀವನದಲ್ಲಿ ಕಂಡ ಏರುಪೇರುಗಳನ್ನು ಮರೆಮಾಚದೆ ಬರೆದಿದ್ದೇನೆ. ನನಗೀಗ 69 ವರ್ಷ ವಯಸ್ಸು. ನನ್ನ ಬದುಕಿನ ಮೊದಲ 16 ವರ್ಷಗಳನ್ನು ಮತ್ತು ಇತ್ತೀಚಿಗಿನ 12 ವರ್ಷಗಳನ್ನು - ಅಂದರೆ ಒಟ್ಟು 28 ವರ್ಷಗಳನ್ನು - ಹೊರತುಪಡಿಸಿದರೆ, ನನ್ನ ಜೀವನದ ಹೆಚ್ಚು ಭಾಗವಾದ ನಾಲ್ಕು ದಶಕಗಳನ್ನು ನಾನು ನನ್ನ ಹುಳಿಮಾವಿನೊಂದಿಗೆ ಕಳೆದೆ.

ಲಂಕೇಶರೊಂದಿಗೆ ಬದುಕಿದ 40 ವರ್ಷಗಳ ಕಾಲವೂ ನಾನು ಸುಖಿಯಾಗಿದ್ದೇನೇ? ಇಲ್ಲ, ಬದಲಾಗಿ ನನ್ನ ಮತ್ತು ಲಂಕೇಶರ ದಾಂಪತ್ಯ ಜೀವನವನ್ನು ಮೂರು ಘಟಕಗಳಾಗಿ ವಿಂಗಡಿಸಬಹುದು.

ನಾನು ಮದುವೆಯಾದಾಗ ನನಗಿನ್ನೂ 17 ತುಂಬಿರಲಿಲ್ಲ, ಈಗ ನೆನಪಿಸಿಕೊಂಡರೆ ಆಗ ನನಗೆ ಮದುವೆಯಾಗುವ ವಯಸ್ಸಾಗಲಿ, ಅದಕ್ಕೆ ಬೇಕಾದ ಪ್ರಬುದ್ಧತೆಯಾಗಲೀ ಇರಲೇ ಇಲ್ಲ. ಆ ವಯಸ್ಸಿನ ಎಲ್ಲಾ ಯುವತಿಯರಂತೆ ನಾನೂ ರೋಮ್ಯಾಂಟಿಕ್ ಆಗಿದ್ದೆ. ಮದುವೆ, ದಾಂಪತ್ಯ, ಅವುಗಳೊಂದಿಗೆ ಬರುವ ಜವಾಬ್ದಾರಿಗಳ ಬಗ್ಗೆ ಸೀರಿಯಸ್ ಆಗಿ ಯೋಚಿಸುವ ಶಕ್ತಿ ನನಗಿರಲಿಲ್ಲ, ನನ್ನ ಪತಿ ನೋಡಲು ತುಂಬಾ ಚೆನ್ನಾಗಿದ್ದಾರೆ, ತುಂಬಾ ಬುದ್ಧಿವಂತ, ತನ್ನ ತಾಯಿಯ ಆಶಯದ ವಿರುದ್ಧ ನನ್ನನ್ನು ಮದುವೆಯಾಗಿದ್ದಾರೆ ಎಂಬುದೆಲ್ಲ ನಾನು ಹಿಗ್ಗಿ ಹೀರೇಕಾಯಿ ಆಗುವಂತೆ ಮಾಡಿದ್ದವು.

ನನಗಿಂತ ಎಂಟು ವರ್ಷ ಹಿರಿಯರಾಗಿದ್ದ ಲಂಕೇಶರು ನನಗಿಂತ ಹೆಚ್ಚು ಓದಿದ್ದರು, ಜಗತ್ತನ್ನು ಕಂಡಿದ್ದರು, ಮೆಚೂರ್ ಆಗಿದ್ದರು. ಅವರ ಸಾಹಿತ್ಯ ಆಸಕ್ತಿಗಳ ಲೋಕ ಮತ್ತು ನನ್ನ ರೋಮ್ಯಾಂಟಿಕ್ ಲೋಕ ಎರಡೂ ಪ್ರತ್ಯೇಕವಾಗಿದ್ದರೂ, ಲಂಕೇಶರು ಆಗ ಹಲವಾರು ದುಮ್ಮಾನ, ಗೊಂದಲಗಳನ್ನು ಎದುರಿಸುತ್ತಿದ್ದರೂ, ಅವೆಲ್ಲದರ ನಡುವೆಯೂ ಅವರು ನನ್ನನ್ನು ಚೆನ್ನಾಗಿಯೇ ನೋಡಿಕೊಂಡರು. ಆದ್ದರಿಂದ ನಾವು ಮದುವೆಯಾದ ನಂತರದ ಹತ್ತು ವರ್ಷಗಳನ್ನು ನಮ್ಮ ಬದುಕಿನ ಮೊದಲನೆ ಘಟಕ ಎಂದು ಪರಿಗಣಿಸಿದರೆ ಆ ಕಾಲದಲ್ಲಿ ನಾನು ತುಂಬಾ ಪ್ರೀತಿ, ಸಂತೋಷ ಮತ್ತು ನೆಮ್ಮದಿಯನ್ನು ಕಂಡೆ ಎಂದೇ ಹೇಳಬಹುದು. ಎಷ್ಟರ ಮಟ್ಟಿಗೆ ಎಂದರೆ ಪ್ರಾಯಶಃ ಆಗ ಇಡೀ ಪ್ರಪಂಚದಲ್ಲಿ ನನಗಿಂತ ಹೆಚ್ಚು ಸುಖಿ ಆಗಿದ್ದವರು ಇರಲೇ ಇಲ್ಲವೇನೋ ಎನ್ನುವಷ್ಟು.

ಆ ನಂತರದ ಹತ್ತು ವರ್ಷಗಳನ್ನು ಎರಡನೆ ಘಟಕವಾಗಿ ನೋಡಿದರೆ ಅದು ನಾನು ನನ್ನ ಜೀವನದಲ್ಲಿ ತುಂಬಾ ನೋವು ಅನುಭವಿಸಿದ ಕಾಲ ಎಂದೇ ಹೇಳಬಹುದು. ಬೇರೊಬ್ಬಳಿಗೆ ನನ್ನನ್ನಷ್ಟೇ ಅಲ್ಲದೆ, ನಮ್ಮ ಮೂವರು ಮಕ್ಕಳನ್ನೂ ತೊರೆಯಲು ಸಿದ್ಧ ಎಂದು ಲಂಕೇಶರು ಬರೆದಿದ್ದ ಪತ್ರವನ್ನು ಓದಿದನಂತರ ನನ್ನ ಬದುಕು, ಆಶಯ, ಲೋಕ... ಎಲ್ಲವೂ ಛಿದ್ರಗೊಂಡಿದ್ದವು. ನನ್ನ ಜೀವನ ಎತ್ತ ಸಾಗುತ್ತಿದೆ, ನನ್ನ ಮಕ್ಕಳ ಭವಿಷ್ಯವೇನು, ಜೀವನ ಎಂದರೆ ಏನು, ದಾಂಪತ್ಯದ ಅರ್ಥ ಇಷ್ಟೇನಾ ಎಂದೆಲ್ಲ ಯೋಚಿಸಿದ, ಬದುಕಿನ ಬಗ್ಗೆ ಎಲ್ಲಾ ಆಸಕ್ತಿಯನ್ನು ನಾನು ಕಳೆದುಕೊಂಡಿದ್ದ ಅವಧಿ ಅದು. ಅಂತಹ ಎಲ್ಲಾ ಚಿಂತೆಗಳ ನಡುವೆಯೂ ನಾನು ನನ್ನದೇ ಆದ ಬದುಕನ್ನು ರೂಪಿಸಿಕೊಳ್ಳಬೇಕೆಂದು, ಸ್ವತಂತ್ರವಾಗಬೇಕೆಂದು ಹಂಬಲಿಸಿ ಆ ದಿಕ್ಕಿನಲ್ಲಿ ನಾನು ಹೆಜ್ಜೆ ಇಟ್ಟ ಸಮಯವೂ ಅದೇ.

ನಾನು ಹೀಗೆ ಸ್ವಾತಂತ್ರ್ಯ ಪಡೆಯಬೇಕೆಂದೂ, ಬದುಕಿನಲ್ಲಿ ಹೊಸದನ್ನು ರೂಪಿಸಿಕೊಳ್ಳಬೇಕೆಂದೂ ಆಶಿಸುತ್ತಿದ್ದ ಸಂದರ್ಭದಲ್ಲೇ ಲಂಕೇಶರು ಕೂಡ ತಮ್ಮದೇ ಆದ ಸ್ವಾತಂತ್ರ್ಯವನ್ನು ಪಡೆದು ತಮ್ಮ ಬದುಕಿನಲ್ಲಿ ಹೊಸದನ್ನು ಕಟ್ಟಿಕೊಂಡ ಕಾಲ ಅದು. ಅದನ್ನು ನಾವಿಬ್ಬರೂ ಪ್ರತ್ಯೇಕವಾಗಿ ಮತ್ತು ಏಕಾಂಗಿಗಳಾಗಿ ಸಾಧಿಸಿದೆವು. ನಾನು ನನ್ನ ದಾಂಪತ್ಯ ಜೀವನದಲ್ಲಾದ ನಿರಾಶೆ ಮತ್ತು ನಮ್ಮ ಸಂಸಾರ ಎದುರಿಸುತ್ತಿದ್ದ ಆರ್ಥಿಕ ಬಿಕ್ಕಟ್ಟಿನ ಕಾರಣಕ್ಕೆ ನನ್ನ ಸೀರೆ ಅಂಗಡಿಯ ಮೂಲಕ ನನ್ನದೇ ಲೋಕವನ್ನು ಕಟ್ಟಿಕೊಂಡರೆ, ಲಂಕೇಶರು ತಮ್ಮ ಅಧ್ಯಾಪಕ ವೃತ್ತಿಗೆ ರಾಜೀನಾಮೆ ಕೊಟ್ಟು ಪತ್ರಿಕೆಯನ್ನು ಪ್ರಾರಂಭಿಸುವ ಮೂಲಕ ತಮ್ಮದೇ ಆದ ಒಂದು ಹೊಸಲೋಕವನ್ನು ಸ್ಥಾಪಿಸಿಕೊಂಡರು. ಲಂಕೇಶರು ತಮ್ಮ ಪತ್ರಿಕೆಯ ಮೂಲಕ ಕರ್ನಾಟಕದ ಹಲವಾರು ಯುವಕರಿಗೆ ಒಂದು ವಿಶ್ವವಿದ್ಯಾಲಯವಾಗಿ ರೂಪಾಂತರಗೊಂಡರೆ ನಾನು ನನ್ನ ಬಿಸಿನೆಸ್‌ನಲ್ಲಿ ಯಶಸ್ಸನ್ನು ಪಡೆದೆ. ನನ್ನ ಈ ಯಶಸ್ಸಿನ ಬಗ್ಗೆ ನನಗೆ ಮಾತ್ರವಲ್ಲ ಲಂಕೇಶರಿಗೂ ಹೆಮ್ಮೆ ಇತ್ತು. ಇದೆಲ್ಲ ನಡೆಯುತ್ತಿದ್ದ ಸಂದರ್ಭದಲ್ಲಿ ನಮ್ಮ ಮಕ್ಕಳ ಏಳಿಗೆಯನ್ನು ಕಂಡು ಸಂತೋಷಿಸಿದ್ದೇನೆ. ಅವರು ಬದುಕಿನಲ್ಲಿ ಎಡವಿದಾಗ ದುಃಖಿಸಿದ್ದೇನೆ. ಲಂಕೇಶರು "ನನ್ನ ಹೆಂಡತಿ ತುಂಬ ಧೈರ್ಯವಂತೆ" ಎಂದು ಹೇಳಿದ್ದನ್ನು ಕೇಳಿ ಸಂತೋಷಿಸಿದ್ದೇನೆ. ಈ ಎಲ್ಲ ಕಾರಣಗಳಿಂದ ನನ್ನ ಬದುಕಿನ ಎರಡನೆ ಘಟ್ಟದಲ್ಲಿ ನಾನು ನೋವು ಮತ್ತು ಸಾಧನೆ ಎರಡನ್ನೂ ಕಂಡುಕೊಂಡೆ ಎನ್ನಬಹುದು.

ಮೂರನೆಯ ಘಟಕ ನನ್ನ ಮತ್ತು ಲಂಕೇಶರ ದಾಂಪತ್ಯದ ಜೀವನದ ಕೊನೆಯ ಇಪ್ಪತ್ತು ವರ್ಷಗಳೆನ್ನಬಹುದು. ಈ ಅವಧಿಯಲ್ಲಿ ಲಂಕೇಶರು ಮತ್ತು ನಾನು ಪರಸ್ಪರ ಗೌರವ, ಕಾಳಜಿ ಮತ್ತು ಅಭಿಮಾನದಿಂದ ಬದುಕಿದೆವು. ಅದು ಹೇಗೆ ಅಂದರೆ ಲಂಕೇಶರ ವ್ಯಕ್ತಿತ್ವದ ಮತ್ತು ಅವರ ಪ್ರತಿಭೆ ಬಗ್ಗೆ ನನಗೆ ತುಂಬಾ ಗೌರವವಿತ್ತು, ಅವರನ್ನು ಯಾರೇ ಟೀಕಿಸಿದರೂ ಅದನ್ನು ಸಹಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಈಗಲೂ ಕೂಡ. ಹಾಗೆಯೇ ನಾನು ನನ್ನ ಬಿಸಿನೆಸ್‌ನಲ್ಲಿ ಯಶಸ್ಸನ್ನು ಕಂಡಿದ್ದರ ಬಗ್ಗೆ ಲಂಕೇಶರಿಗೂ ಗೌರವವಿತ್ತು, ಅವರೆಂದೂ ನನ್ನನ್ನಾಗಲಿ, ನನ್ನ ಸಾಧನೆಯನ್ನಾಗಲಿ ಗೌಣವಾಗಿ ಪರಿಗಣಿಸಲಿಲ್ಲ.

ಹಾಗೆಯೇ ಅವರಿಗೆ ಸಣ್ಣ ಸಮಸ್ಯೆಯಾದರೂ ನಾನು ಕಂಗಾಲಾಗುತ್ತಿದ್ದೆ. ಅವರೂ ಅಷ್ಟೇ, ನಾನು ಚಿಕ್ಕಪುಟ್ಟ ಕಷ್ಟ ಅನುಭವಿಸಿದರೂ ಲಂಕೇಶರು ಚಿಂತಾಕ್ರಾಂತರಾಗುತ್ತಿದ್ದರು. ಒಮ್ಮೆ ನನ್ನ ಮಕ್ಕಳು ನನ್ನನ್ನು ಯಾವುದೋ ಹೋಟೆಲ್‌ಗೆ ಡಿನ್ನರ್‌ಗೆಂದು ಕರೆದುಕೊಂಡು ಹೋದ ನಂತರ ನನಗೆ ಫುಡ್ ಪಾಯಿಸನಿಂಗ್ ಆಗಿ ಆಸ್ಪತ್ರೆ ಸೇರಿದೆ. ಆಸ್ಪತ್ರೆಯಲ್ಲಿ ನನಗೆ ಡ್ರಿಪ್ಸ್ ಹಾಕಿ ಮಲಗಿಸಿದ್ದರು. ಅದನ್ನು ನೋಡಿ ಲಂಕೇಶರಿಗೆ ತುಂಬಾ ಬೇಜಾರಾಗಿ "ಅಮ್ಮನ್ನ ಎಂತೆಂತಹ ಹೋಟೆಲ್‌ಗೆ ಕರೆದುಕೊಂಡುಹೋಗುತ್ತೀರಿ" ಎಂದು ಮಕ್ಕಳನ್ನು ಗದರಿಸಿದ್ದರು. ಅನಾರೋಗ್ಯದ ಕಾರಣಕ್ಕೆ ನಾನು ಆಸ್ಪತ್ರೆ ಸೇರಿದರೆ ಲಂಕೇಶರು ದಿನಕ್ಕೆ ಮೂರು ಬಾರಿಯಾದರೂ ಆಸ್ಪತ್ರೆಗೆ ಬಂದು ನನ್ನನ್ನು ಕಂಡುಹೋಗುತ್ತಿದ್ದರು.

ಹಲವೊಮ್ಮೆ ಯೋಚಿಸುತ್ತೇನೆ, ನನ್ನಂತೆ ಇತರೆ ಸಾಹಿತಿಗಳ ಹೆಂಡತಿಯರೂ ತಮ್ಮದೇ ಆದ ಪ್ರತ್ಯೇಕ ಬದುಕನ್ನು ರೂಪಿಸಲು ಯತ್ನಿಸಿದ್ದರೆ ಅವರ ಗಂಡಂದಿರು ಸುಮ್ಮನಿರುತ್ತಿದ್ದರೆ ಎಂದು. ಈ ಪ್ರಶ್ನೆ ಯಾಕೆಂದರೆ ಲಂಕೇಶರು ಎಂದೂ ನನ್ನನ್ನು ಪ್ರಶ್ನಿಸಲಿಲ್ಲ, ನನ್ನನ್ನು ತಡೆಯಲು ಯತ್ನಿಸಲಿಲ್ಲ, ಬದಲಾಗಿ ಸ್ತ್ರೀವಾದಿಯಾಗಿದ್ದ ಲಂಕೇಶರು ನಾನು ನನ್ನತನವನ್ನು ಕಂಡುಕೊಳ್ಳಲು ನನ್ನನ್ನು ಬಿಟ್ಟರು. ಅವರು ನನಗೆ ಎಲ್ಲ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟರು. ಅದರ ಬಗ್ಗೆ ನನಗೆ ತುಂಬಾ ಮೆಚ್ಚುಗೆ ಇದೆ.

ಲಂಕೇಶರು ತಮ್ಮ ಖ್ಯಾತ 'ಅವ್ವ' ಕವನದಲ್ಲಿ ತಮ್ಮ ತಾಯಿಯನ್ನು ಕುರಿತು

"ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ
ಚರಿತ್ರೆ ಪುಸ್ತಕದ ಶಾಂತ, ಶ್ವೇತ, ಗಂಭೀರೆಯಲ್ಲ
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ"

ಎಂದು ಬರೆದಿದ್ದಾರೆ.

ಲಂಕೇಶರ ಕೂಡ ರಾಮನಂತಹ ಗಂಡನಾಗಿರಲಿಲ್ಲ (ಅಲ್ಲ, ಪದೇಪದೇ ಕಾಡಿಗೆ ಅಟ್ಟುವ ರಾಮನಂತಹ ಗಂಡ ಬೇಕೆಂದು ಯಾಕೆ ಮಹಿಳೆಯರು ಆಶಿಸುತ್ತಾ[ರೆ] ಎಂಬುದೇ ನನಗೆ ಅರ್ಥವಾಗಿಲ್ಲ) ಲಂಕೇಶರು ಆದರ್ಶ ಪತಿಯೂ ಆಗಿರಲಿಲ್ಲ, ಆದರೆ ತಮ್ಮ ಎಲ್ಲ ಮಿತಿಗಳು ಮತ್ತು ದುಮ್ಮಾನಗಳ ನಡುವೆಯೂ ಅವರು ತಮ್ಮಿಂದ ಸಾಧ್ಯವಾದದ್ದನ್ನು ನನಗೆ ಕೊಟ್ಟರು. ಸ್ವಾತಂತ್ರ್ಯ ಮತ್ತು ಗೌರವ ಕೊಟ್ಟರು, ಕಾಳಜಿ ವಹಿಸಿದರು. ಕಷ್ಟ ಎದುರಾದಾಗ ನನ್ನೊಂದಿಗಿದ್ದರು. ಒಬ್ಬ ಪತಿಯಿಂದ ಓರ್ವ ಹೆಂಡತಿಗೆ ಅದಕ್ಕಿಂತ ಇನ್ನೇನು ಬೇಕು?

ಇನ್ನು ಲಂಕೇಶರ ಸಾರ್ವಜನಿಕ ಬದುಕಿನ ಬ[ಗ್ಗೆ] ಹೇಳುವುದಾದರೆ ನನ್ನ ಪತಿ ಬಹಳ ಒಳ್ಳೆಯ ಬರಹಗಾ[ರ] ಎನ್ನುವ ಬಗ್ಗೆ ನನಗೆ ಹೆಮ್ಮೆ ಇದೆ. ಅವರು ಎಂತಹ ಕಷ್ಟದ ಸಂದರ್ಭದಲ್ಲೂ ಯಾರ ಮುಂದೆಯೂ ಕೈಯೊಡ್ಡದೆ, ಯಾವ ರಾಜಕಾರಣಿಗೂ ಸಲಾಮು ಹೊಡೆಯದೆ ಬಾಳಿದ್ದರ ಬಗ್ಗೆ ನನಗೆ ತುಂಬಾ ತುಂಬಾ ಹೆಮ್ಮೆ ಇದೆ.

ಇತ್ತೀಚಿಗೆ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಜಿ.ಪಿ.ಬಸವರಾಜು ಅವರು ತಮ್ಮ 'ನೋಟ-ಪಲ್ಲಟ' ಕಾಲಂನಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಇಬ್ಬರ[ು] ಕನ್ನಡ ಸಾಹಿತಿಗಳ ಬಗ್ಗೆ ಬರೆದದ್ದನ್ನು ಓದಿದೆ. ಈ[...] ಹಿಂದೆ ಸ್ಥಾನಮಾನಗಳಿಗೆ ಹಾತೊರೆಯುವ ಇತರರ ಬ[ಗ್ಗೆ] ಕೇಳಿದ್ದೇನೆ. ಆದರೆ ಪತ್ರಕರ್ತರಾಗಿ ಲಂಕೇಶರು ತಮಗಿ[ದ್ದ] ಪ್ರಭಾವವನ್ನು ವೈಯಕ್ತಿಕ ಲಾಭಕ್ಕೆ ಎಂದ[ೂ] ಬಳಸಿಕೊಳ್ಳುತ್ತಿರಲಿಲ್ಲ, ನನಗೆ ಇನ್ನೇನು ಬೇಕು?

ಒಮ್ಮೊಮ್ಮೆ ಅನ್ನಿಸುತ್ತೆ ಈಗ ಲಂಕೇಶರು ಇದ್ದಿದ್ದರೆ ಅವರು ಆರೋಗ್ಯದಿಂದ ಇದ್ದಿದ್ದರೆ ಪರವಾಗಿಲ್ಲ. ಆದ[ರೆ] ಅವರು ತುಂಬಾ ವೀಕ್ ಆಗಿ, ನಡೆದಾಡಲೂ ಆಗದಿದ್ದರೆ ಮೊನ್ನೆ ಜಿ.ಎಸ್.ಶಿವರುದ್ರಪ್ಪನವರು ವ್ಹೀಲ್ ಚೇರ್‌ನ[ಲ್ಲಿ] ಕೂತಿರುವ ಫೋಟೋವನ್ನು ಪೇಪರ್‌ನಲ್ಲಿ ನೋಡಿದ[ೆ]. ಎಂದೂ ಬೇರೆಯವರ ಸಹಾಯವನ್ನು ತೆಗೆದುಕೊಳ್ಳಲ[ು] ಇಷ್ಟ ಪಡದಿದ್ದ ಲಂಕೇಶರಿಗೆ ವ್ಹೀಲ್ ಚೇರ್‌ನಲ್ಲಿ ಬದುಕು[ವ] ಪರಿಸ್ಥಿತಿ ಎದುರಾಗಿದ್ದರೆ ಅವರು ಮಾನಸಿಕವಾಗಿ ತುಂಬ[ಾ] ಯಾತನೆ ಅನುಭವಿಸುತ್ತಿದ್ದರ[ು] ಎಂಬುದು ನನಗೆ ಗೊತ್ತು.

ಕೆಲವರು ಹೇಳುತ್ತಾ[ರೆ] ಪತಿಯ ಸಾವಿನ ನಂತರ ಅವರ[ು] ನಮ್ಮನ್ನು ಬಿಟ್ಟು ಹೋಗುವುದಿಲ್ಲ ಬದಲಾಗಿ ಅವರ ನೆನಪು ನಮ್ಮೊಂದಿಗೆ ಇರುತ್ತಾರೆ ಅಂತ[...] ಆದರೆ ಅದು ಹೇಗೆ ಸಾಧ್ಯ[?] ಅವರು ಇಲ್ಲ ಎನ್ನುವುದು ಎಷ್ಟು ವಾಸ್ತವವೋ ಅವರ ನೆನಪು ಕಾಡುವುದೂ ಅಷ್ಟೇ ವಾಸ್ತವ.

ನಾನು ಲಂಕೇಶರ ಒಂದು ಫೋಟೋವನ್ನು ಮನೆಯ ಹಾಲ್‌ನ ಗೋಡೆಯ ಮೇಲೆ ಹಾಕಿದ್ದೇನೆ. ನಾನು ಹಾಲ್‌ನಲ್ಲಿ ಓಡಾಡುವಾಗಲೆಲ್ಲ ಆ ಫೋಟೋದಲ್ಲಿರುವ ಲಂಕೇಶರ ಕಣ್ಣುಗಳು ನನ್ನನ್ನೇ ಗಮನಿಸುತ್ತಿವೆ ಎನ್ನಿಸುತ್ತದೆ. ಅಷ್ಟರಮಟ್ಟಿಗೆ ಅವರಿನ್ನೂ ನನ್ನೊಂದಿಗೆ ಇದ್ದಾರೆ....

(ಮುಂದಿನವಾರ ಕೊನೆಯ ಕಂತು)

ಸಹನೆಯ ಬಿಂದು



ಹಿಂದುಗಡೆಯ ಮನೆಯ ಕಾಂಪೌಂಡಿನಲ್ಲಿ
ಕಿವಿಗಡಚಿಕ್ಕುವ ಬೋರ್‌ವೆಲ್ ಸದ್ದು
ಬೆಳಗಿನಿಂದಲೇ ಆರಂಭವಾಗಿ
ಬೇರೆ ಯಾವ ಒಳ್ಳೆಯ ಸದ್ದೂ ಕಾಣದಾಗಿದೆ

ಜೋರಾಗಿ ಬೋರ್‌ವೆಲ್ ಕೊರೆಯುವ ಯಂತ್ರ
ನೆಲವ ಬಗೆಬಗೆದು ಅಂತರ್ಜಲ ಶೋಧನೆಗಾಗಿ
ತೂತು ಕೊರೆದು ಉದ್ದಕ್ಕೆ ಇಳಿಯುತ್ತ
ಕಿವಿ ತಮಟೆಗೇ ಅಪಾಯ ತರುವಂಥ
ಭೀಕರ ಸದ್ದು ಮೊಳಗಿಸುತ್ತಿದ್ದರೆ ತಪ್ಪಿಸ್ಲಾಗ್ದೆ
ಸಹಿಸುವುದನ್ನು ಬಿಟ್ಟು ಬೇರೆ ಎಲ್ಲಿದೆ ದಾರಿ?

ರೇಡಿಯೋ ಸುಮಧುರ ಹಾಡುತ್ತಿದ್ದರೂ
ಮೆಲುದನಿಯಲ್ಲಿ ಕೇಳುವಂತಿಲ್ಲ ಈಗ
ಜೋರಾಗಿ ಸದ್ದು ಹೆಚ್ಚಿಸಿ ಹಿಂದುಗಡೆ
ಕಾಂಪೌಂಡಿಂದ ಕೇಳಿಬರುತ್ತಿರುವ ಕರ್ಕಶ
ಸದ್ದಿನ ಜೊತೆಗೆ ಪೈಪೋಟಿ ನಡೆಸುವಂತೆ
ಜೋರು ಸೌಂಡಲ್ಲಿ ಕೇಳಬೇಕು
"ಅಯ್ಯೋ ಇದು ನಾನು ಕೇಳಬೇಕಾದ ಹಾಡಲ್ಲ"
ಎನಿಸುವ ದನಿಯು ಕ್ರಿಯೇ ಮೇಲಾದರೆ
ರೇಡಿಯೋ ಸದ್ದನ್ನೇ ನಿಲ್ಲಿಸಿ
ಪೈಪೋಟಿಯಿಂದ ಹಿಂದೆ ಸರಿದು
ಕರ್ಕಶ ಸದ್ದಿಗೇ ಅನುವು ಮಾಡಿಕೊಡಬೇಕು

ಹಿಂದುಗಡೆ ಮನೆಯ ಬಾವಿಯಲ್ಲಿ
ನೀರೇ ಬರದೆ ಬೋರ್‌ವೆಲ್ ಕೊರೆಸುತ್ತಿದ್ದಾರೆ
ಸಿಹಿನೀರ ಬಾವಿಯ ಮನೆಯಿರುವ ನಾವು
ಅಕ್ಕಪಕ್ಕದವರು ಈ ಶಬ್ದವನ್ನು
ಸಹಿಸಿಕೊಳ್ಳಬೇಕು
ಕಾರಣ ಬಲಿಷ್ಠವಾಗಿದೆ

ಹಲವು ಕಾರ್ಮಿಕರು ಈ ಅಂತರ್ಜಲ
ಬರಿಸಲು ದುಡಿಯುತ್ತಿದ್ದಾರೆ
ಬರಡು ನೆಲದಲ್ಲಿ ಅದೆಷ್ಟು ಆಳದಲ್ಲಿದೆಯೋ
ನೀರು. ಸದ್ದಿನ ಜೊತೆಗೆ ಧೂಳೂ
ಭೋರೆಂದು ಏಳುತ್ತ
ಮರಗಿಡಗಳ ಗಾಳಿಯ ಶಾಂತ ವಾತಾವರಣ
ಯಾವುದೋ ಜನನಿಬಿಡ ಪೇಟೆಯ
ಮುಖ್ಯ ಬೀದಿಯಂತೆ ಉಸಿರಾಟಕ್ಕಿರುವ ಕಷ್ಟವನ್ನು
ಬಿತ್ತರಿಸುತ್ತಿದೆ

ಕರ್ಕಶ ಶಬ್ದ-ಕಲುಷಿತ ಗಾಳಿ ಎಲ್ಲವನ್ನೂ
ಒಂದು ಸಹನೆಯ ಬಿಂದುವಿನ ಹಂತದವರೆಗೆ
ಮಾತ್ರ ಸಹಿಸಿಕೊಳ್ಳಬಹುದು
ನಮ್ಮ ಹತ್ತಿರದ ಮನೆಯವರಿಗೂ ಅವರದೇ ಆದ
ಕುಡಿಯುವ ನೀರು ಸಿಕ್ಕಿ ದಾಹ ತೀರುತ್ತದೆ
ಎಂಬ ಸಹಿಷ್ಣುತೆಯ ಸಹಕಾರಣಕ್ಕೆ ಮಾತ್ರ

• ಜ್ಯೋತಿ ಗುರುಪ್ರಸಾದ್

ಂದೂ ಧರಮದ ದೇವತೆಗಳಿಗೆಲ್ಲಾ ಉಡುಪಿಯೋರು ವಾರಸುದಾರ್ರೆ

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಇವುನ್ನೊಳ್ಗೆ ಕತಿಯಾಯ್ತಲ್ಲಾ ಮಾವ. ಸಿಯಿ ಸುದ್ದಿ ...ನಿ ಹೇಳ್ತಿನಿ ಅನ್ನಕಂಡು ಸುಗ್ರೇರಿಸಿಗಂಡು ಸುಮ್ಮನಾದ ..." ಎಂದು ಉಗ್ರಿ ಕುಚೋದ್ಯವಾಗಿ ನಕ್ಕ.

"ಯಾರೂ, ಎಡೂರಪ್ಪನೆ?"

"ಊ, ಇನ್ನಾರು ಅನ್ನಕಂಡಿದ್ದೀ. ಸ್ವಾಮಾರ ದಿನ ...ೀ ಭೂಕಂಪಾಯ್ತದೆ ಅಂತ ನಾವು ಕಾಯ್ತಾಯಿದ್ರೆ ...ಮಿ ಆ ಸದಾನಂದ, ಈಶ್ವರ, ಅನಂತನ್ನ ಬಾಯಿಗೆ ...ಂಗೆ ಬೋದು ಸುಮ್ಮನಾದ ಅತ್ಲಾಗೆ."

"ಅವುರನ್ಯಾಕ್ ಬೋದಾ?"

"ಅವುರು ಮೂರು ಜನರೂ ಮದ್ಲಿಂದ ಎಡೂರಪ್ಪನ್ನ ...ಂದ ಇಳಸಕ್ಕೆ ಭಾರಿ ಸಂಚು ಮಾಡಿದ್ರಂತೆ. ಅದರಲ್ಲೂ ...ತಕುಮಾರ ತಾನೇ ಮುಖ್ಯಮಂತ್ರಿ ಆಗಬೇಕು ಅಂತ ...ತಬಾರ್ದ ಸಂಚನ್ನೇ ಮಾಡಿದನಂತೆ."

"ಇಸಿಸಿ ಸಂಚು ಮಾಡದೆ ...ನ ಕುಲಕಸುಬಲವೇನ್ಲ. ...ನೇನು ಜನಗಳತ್ರ ಹೋಗಿ ... ಕೇಳಿ ಎಮ್ಮೆಲ್ಲೆಗಳ ...ಕೊಂಡು ಬಂದು ...ಖ್ಯಮಂತ್ರಿಯಾಗಂಗಿದ್ದನೆ" ಎಂದ

"ಪರವಾಗಿಲ್ಲ ಸೀರಮಾವನು ...ಮಾಗೇ ಅಳಿತನೆ."

"ನೋಡಿದ್ರೆ ...ತ್ತಾಗದಿಲವೇನ್ಲ?"

"ಅದು ನಿಜ ಬುಡು. ಪಾರ್ಟಿ ...ಗೆ ತರೊ ಮಕವೇ ಬ್ಯಾರೆ, ...ರಿವುರು ಪವರಿಗೆ ತಂದ ...ರ್ಗಲಿ ಅಡ್ಡ ಗೋಳ ನುಗ್ಗಿ ...ಖ್ಯಮಂತ್ರಿಯಾಗೊರೆ ಬ್ಯಾರೆ. ಆ ...ವಾರಸ್ವಾಮಿ ಅಂಗೆ ಅಲವೆ ...ದ್ದು."

"ಅವುನೇನೊ ಸದಾನಂದ ...ನಿಗೆ ಸಪೋಟು ಮಾಡ್ತಿನಿ ...ದ್ದನಂತಲ್ಲಾ" ಎಂದಳು ಜುಮ್ಮಿ.

"ನಿನಿಗ್ಯಾರೆ ಹೇಳಿದೋರು?"

"ಪಂಚಾತಿ ಆಫೀಸಲ್ಲಿ ಅಂಗಂದ್ರು ಕಂಡ್ಳ. ... ಹಾರ್ಯಾಡಿದ್ರು ಹೆದರಬ್ಯಾಡ ನೀನು. ...ಪ್ಪನ ಕುಟ್ಟೇಲಿ ನಮ್ಮೊರ ಸಪೋಟ ನಿನಗೆ ...ದ್ದಂತೆ. ಅದ್ಕೆ ಸದಾನಂದಗೌಡ ಎಡೂರಪ್ಪ ಎಟೇ ...ಂಡ್ರು ಬಾಯಿಬುಡ್ತಿಲ್ಲವಂತೆ."


"ನಿನಿಗೆ ಇಂತ ವಿಷಯ ಹೇಳಿರೋರ ಮಾತ ...ವಾಕದು ಕಷ್ಟ ಕಣೆ. ಯಾಕೆ ಅಂದ್ರೆ ಜೆಡಿಎಸ್ ನೋರು ...ತ್ರೈದು ಮಡಿಕಂಡಿರದೆ ಅದ್ಕೆ. ಯಾರು ಯಪ್ಪತ್ರೈದು ಅವುರೆ ಅವುರಿಗೆ ಸಪೋರ್ಟು ಮಾಡಕ್ಕೆ ಅಲವೆ ಇರದು. ಇವತ್ತಲ್ಲ ನಾಳೆ ಎಡೂರಪ್ಪ ಏನಾರ ಮಾಡೇ ಮಾಡ್ತನೆ ಅನ್ನಸ್ತಾ ಅದೆ."

"ಅದ್ಯಂಗೇಳ್ತಿ?"

"ಸಾರ್ವಜನಿಕವಾಗಿ ಮೂರು ಜನ ಮೀರಸಾದಕ್ರು ಅಂತ ಬೋದೋನು ನಿಚ್ಚಯಿಸಿಗಂಡೇ ಇರತನಲ್ವೆ."

"ನೀನೇಳದ ನೊಡಿದ್ರೆ, ಆಗ ಯಗಡೆಗೂ, ದ್ಯಾವೇಗೌಡನಿಗೂ ನ್ಯಡಿತು ನೋಡು ಅದು ಗ್ಯಾಪಗಕ್ಕೆ ಬತ್ತಾ ಅದೆ ಕಂಡ್ಳ."

"ನನಿಗೂ ಅಂಗೇ ಅನ್ನಸ್ತು ಕಣೊ ಸೀರ ಮಾವ. ಮೂರು ಸತಿ ಜನತಾ ದಳ ಪವರ್ರಿಗೆ ಬಂದಾಗ್ಲು ದ್ಯಾವೇಗೌಡನೇ ಜಗಳ ತಗದು ಕೆಡವಿದ. ಆದ್ರೆ ಎಡೂರಪ್ಪ ಯಾಕೊ ಹೆದರತ ಕುಂತವ್ರನೆ."



"ದ್ಯಾವೇಗೌಡನ್ನ ರಾಮಕಿಷ್ಣಯಗಡೆ ಚನ್ನಾಗಿ ನ್ಯಡಿಸಿಗಂಡಿದ್ರೆ ಅವುನ್ಯಾಕ್ ಸರಕಾರ ಕೆಡವತಿದ್ದಾ?"

"ದ್ಯಾವೇಗೌಡರನ್ನ ಹೆಗಡೆ ಚನ್ನಾಗೇ ನೋಡಿಕಂಡ ಅಂತ ಈಚೆಗೆ ಗೊತ್ತಾಯ್ತು ಕಣಮಾವ. ನಾವು ಹ್ಯಗಡೆಯ ತಪ್ಪು ತಿಳಕಂಡಿದ್ದೊ. ಆದ್ರೆ ಕಾಲ ಬಂದಂಗೂ ದ್ಯಾವೇಗೌಡನ ಕಾಯಲನೇ ಬ್ಯಾರೆ ಅಂತ ಗೊತ್ತಾಯ್ತು. ಈಗ ಅದೇ ಕಾಯ್ಲ ಎಡೂರಪ್ಪನಿಗೆ ಅಮರಿಕಂಡದೆ."

"ಈಟೊಂತರ ಜಗಳಾಡಿಕಂಡು ಜ್ವತೆಲಿರದೇ ಸೋಜಿಗ" ಎಂದ ಸೀರ.

"ಸೋಜಿಗನೆ ಮತ್ತೆ. ಎಡೂರಪ್ಪ ಆಟೊಂತರ ಮಕ್ಕುಗುದ್ರೂ ಮಂತ್ರದನಿ ಅಂತ ಪರಿಸಿಗಂಡು ಎಡೂರಪ್ಪ ವಳ್ಗಿಮನ್ನ ಅಂತರಲ್ಲಾ, ಅವುರೊಟ್ಟೇಲಿ ಇನ್ನಂತ ಸಿಟ್ಟು ಮಡಿಕಂಡಿರಬಹುದು ಅಂತ."

"ಎಡೂರಪ್ಪ ಏಟೇ ಬೋದ್ರು ಅವುರಿಗೇನೂ ಆಗದಿಲ್ಲ ಹಾಳಾಗೊಗನು ಇವುನೆಯು."

"ಅದ್ಯಾಕ್ ಸೋನಿಯಾಗಾಂಧಿ ಹೊಗಳಿದ್ದಾ?"

"ಹೊಗಳಿದ್ದಲ್ಲ ಕಣೊ ಮಾವ. ಅದೂ ಬಿಜೆಪಿಗಳ ಹೆದರಸಕ್ಕೆ ಹಾಕಿದ ಧಮಕಿ. ಆ ಕಾಂಗ್ರೆಸ್ಸಿನವ್ರು ಇವುನ್ನ ಸೇರಿಸಿಗಳಕ್ಕೆ ಆದತೆ. ಹೋಗ್ಲಿ ಈ ಟೈಮಲ್ಲಿ ಎಡೂರಪ್ಪನ್ನ ಯಾರಾರ ಸೇರಿಸಿಗತ್ತರಾ?"

"ಜೆಡಿಯು ಪಾರ್ಟಿ ಅಂತ ಒಂದದೇ ಕಣೊ ಉಗ್ರಿ. ಅವುರ ಬಾಣ ತಗದು ಎಡೂರಪ್ಪನ ಕೈಗೆ ಕೊಡಬವುದು" ಎಂದುಕೊಂಡು ವಾಟಿಸ್ಸೆ ಬಂದ.

"ನೀನೆಲ್ಲಿಗೋಗಿದ್ದ ಕಾಣ್ತೆರಲಿಲವಲ್ಲಾ?"

"ಸರಕಾರ ಬೀಳ್ತದೇನೊ ಅಂತ ನೋಡಕ್ಕೋಗಿದ್ದೆ ಕಣಕ್ಕ. ಬೀಳಲಿಲ್ಲ ಬೇಜಾರಾಯ್ತು, ಒಂದಿಷ್ಟು ಓ.ಸಿ. ತಗಂಡು ಬಂದೆ."

"ಸರಕಾರೇನು ಬ್ಯಟ್ಟದ ಮ್ಯಾಗಲಿಂದ ಬೀಳತಿತ್ತೆ, ಅದೆಲ್ಲಿ ನೋಡಕ್ಕೋಗಿದ್ದೆ."

"ನೋಡಕ್ಕ, ಯಾವುದೇ ಸರಕಾರ ಇರಲಿ, ಯಲ್ಲಾ ಪಾರ್ಟಿ ವರಕರ್ರು ಒಂದು ಜಾಗದಲ್ಲಿ ಕುತಗೊಂಡು, ಇನ್‌ಫರ್‌ಮೇಶನ್ ತರಿಸಿಗಂಡು, ಡಿಸ್‌ಕಸ್ ಮಾಡ್ತರೆ. ಆ ತರದ ಕೆಲವು ಸೀಕ್ರೆಟ್ ಸ್ಪಾಟವೆ. ಅಲ್ಲಿ ಕುತಗಂಡು ಚರ್ಚೆ ಮಾಡಿದ ಪ್ರಕಾರ ಪಾರ್ಟಿ ಬಿಟ್ಟ ಮೇಲೆ ಎಡೂರಪ್ಪ ಏಕಾಂಗಿಯಾಗಬವುದು. ಅದ್ಕೆ ಹೆದರಿದ ಅನ್ನಕಂಡು ಡಿಸ್‌ಪರ್ಸಾದೊ. ಆದ್ರು ಸೆಂಟ್ರಲ್ ಬಿಜೆಪಿಗಳ ಧೋರಣೆ ನೋಡಿದ್ರೆ ಅವುರು ಭಗವದ್‌ಗೀತೆ ಸ್ಲೋಕ ಹಿಡಕಂಡಂಗೆ ಕಾಣ್ತರೆ."

"ಅದೇನಿಡಕಂಡಿದ್ದರು ಸರಿಯಾಗೇಳ್ಳ."

"ನೋಡಕ್ಕ, ಶ್ರೀಕೃಷ್ಣ ಕೌರವನ ವಿಷಯದಲ್ಲಿ ದರ್ಬಾರ್ ಸೀನಲ್ಲಿ ಒಂದು ಮಾತೇಳ್ತನೆ. ಏನಪ್ಪಾ ಅಂದ್ರೆ ಒಂದು ಕುಟುಂಬ ಉಳಿಬೇಕಾದ್ರೆ ಒಬ್ಬನ ಬಲಿ ಕೊಡದು ತಪ್ಪಲ್ಲ. ಒಂದು ಊರುಳಿಬೇಕಾದ್ರೆ ಒಂದು ಕುಟುಂಬ ಬಲಿಕೊಡದು ತಪ್ಪಲ್ಲ, ಅದೇರೀತಿ ಒಂದು ರಾಜ್ಯ ಉಳಿಬೇಕಾದ್ರೆ ಒಂದು ಊರನೇ ಬಲಿಕೊಡಬೇಕಾದ್ರೆ ಹಿಂದೆಮುಂದೆ ನೊಡಬಾರ್ದು. ಈ ತರದಲ್ಲಿ ಒಂದು ತೀರ್ಮಾನ ತಗಂಡಿರೋ ವರಿಷ್ಠ ಚಡ್ಡಿಗಳು, ಎಡೂರಪ್ಪನ್ನ ಬಲಿಕೊಡಕ್ಕೆ ತಯಾರಾಗಿ ಭಾಳ ದಿನಗಳಾಗಿವೆ. ಈ ದದ್ದ ಮುಂಡೆದು ಅವುನ್ಯಾರೊ ಜೇಟ್ಲಿ ಅನ್ನೋನು ಮಿಸ್‌ಕಾಲ್ ಮಾಡಿದ್ರೆ ತಿರಗ ಫೋನ್ ಮಾಡಿ, ಆಯ್ತು ಶಿವ ನೀವೇಳಿದಂಗೆ ಆಗ್ಲಿ ಅಂದವ್ರನೆ. ದಿಸೀಸ್ ಪ್ಯಾಕ್ಟು."

"ಕಿಷ್ಣ ಅಂದೇಟಿಗೆ ಗೆಪ್ತಿಗೆ ಬತ್ತು, ಆ ಉಪೇಂದ್ರ ಅನ್ನೋ ತಿಕ್ಲ ಅದ್ಯಾಕೊ ಹೋಗಿ ಉಡುಪಿ ಮಠದಲ್ಲಿ ತಪ್ಪು ಕಾಣಕೆ ಕೊಟ್ಟು ಅಡ್ಡ ಬಿದ್ದು ಬಂದನಂತೆ."

"ಓ ಉಗ್ರಿ, ನಿನಿಗೆ ಗೊತ್ತಿಲವಾ. ಈ ಹಿಂದೂ ಧರ್ಮದ ಮುವತ್ತಮೂರು ಕೋಟಿ ದೇವಾನುದೇವತೆಗಳ ವಾರಸುದಾರ್ರು ಯಾರು ಗೊತ್ತಾ?"

"ಯಾರಪ್ಪಾ?"

"ಉಡುಪಿ ಮಠದ ವಿಪ್ರೋತ್ತಮರು. ಕಠಾರಿವೀರ ಸುರಸುಂದರಾಂಗಿ ಅನ್ನೊ ಸಿನುಮದಲ್ಲಿ ದೇವೇಂದ್ರ, ಯಮ, ಯಲ್ಲಾರ್ನ ಆಡಿಕಂಡಿದ್ದರಂತೆ. ಅದ್ಕೆ ಉಡುಪಿ ಮಠದೋರು ಭಜರಂಗಿಗಳಿಗೆ ಆಜ್ಞೆ ಮಾಡಿ ಕಠಾರಿವೀರನಿಗೆ ಕಲ್ಲುವಡಿಸಿದ್ರು. ಮದ್ಲೆ ಈ ತಲರಟೆ ಉಪೇಂದ್ರ ಹೆದರಿಕಂಡೋಗಿ, ಉಡುಪಿ ಮಠಕ್ಕೆ ತಪ್ಪು ಕಾಣಕೆ ಕೊಟ್ಟು, ಅವುನ್ಯಾವನಿಗೊ ಕಾಲಿಗೆ ಬಿದ್ದು ಬಂದದೆ. ತಲೇನೆ ಇಲ್ಲ ಮುಂಡೆವುಕ್ಕೆ."

"ಅದ್ಯಾಕ್ಲ ಅಂಗೆ ಬೈತಿ?"


"ಅಲ್ಲಾ ಕಣಕ್ಕ ದೇವತೆಗಳು ಪುರಾಣದ ಕಲ್ಪನೆಗಳು. ಅವು ಇರಲಿಲ್ಲ. ಇರದೇಯಿದ್ದ ಜನಕ್ಕೆ ಇವುರ್‍ಯಂತ ವಾರಸುದಾರ್ರು. ಗೊಲ್ಲರ ಕಿಷ್ಣನ ಗುಡಿವಳಗಡೆ ಮಡಿಕಂಡು, ಗೊಲ್ಲರನ್ನೆ ದೂರ ಇಟ್ಟರೊ ಉಡುಪಿ ಮಠದ ಜನಕ್ಕೆ ಸರಿಯಾಗಿ ಉಗುದು ಬರದು ಬುಟ್ಟು, ತಪ್ಪು ಕಾಣಕೆಕೊಟ್ಟು ಬಂದದಲ್ಲಾ ನಾಳೆ ಯಾವನೇ ಪುರಾಣದ ಪಾತ್ರ ಆಡಿಕಂಡ್ರೂ ಇವುರು ಕರದು ಕಾಸೀಸಗತ್ತರೆ. ಆಗ?"

"ಇದಕೇನಾರ ಮಾಡಬೇಕು ಕಣೊ ವಾಟಿಸ್ಸೆ."

"ಮಾಡದೇನು, ನಾನಾಗ್ಲೆ ಅಂಬರೀಶ್ ಅಭಿಮಾನಿಗಳಿಗೆ ಹೇಳಿದ್ದೆ ಕಣೊ, ಭಜರಂಗಿಗಳು ಥಿಯೇಟರತ್ರ ಬಂದ್ರೆ ಭುಕಣಿ ನಿಕಾಲ್ ಮಾಡಿ ಅಂತ. ಆದ್ರೆ ಅಂಬರೀಶ್‌ಗೆ ಕೆಟ್ಟಸರು ಬತ್ತದೆ. ಪಾಪ. ಇನ್ನೇನು ಮುಂದಿನ ವಾರಕೆ ಅರವತ್ತೊರ್‍ಸದ ಹಬ್ಬ ಮಾಡ್ತ ಅವುರೆ. ತೊಂದ್ರೆಯಾಗದು ಬ್ಯಾಡ ಅಂತ ಸುಮ್ಮನಾದೆ. ಇಲ್ಲ ಅಂದ್ರೆ ಅಂಬಿ ವರ್ಸಸ್ ಭಜರಂಗಿ ಆಗದು." ❖

ದೇವರಿಗಾಗಿ

ಆತನೊಬ್ಬ ದೊಂಬರವನು. ಪಟ್ಟಣದಲ್ಲಿ ಮೂರು ರಸ್ತೆಗಳು ಸೇರುವ ಕಡೆ ತನ್ನ ಹಳೆಯ ಚಾಪೆ ಹಾಕಿಕೊಂಡು ...ದು ಪುಟ್ಟ ಭಾಷಣ ಕೊಡುತ್ತಿದ್ದ. ಅದು ಆತ ಚಿಕ್ಕಂದಿನಲ್ಲಿ ಇನ್ನೊಬ್ಬ ದೊಂಬರವನಿಂದ ಕಲಿತ ಭಾಷಣ. ...ದನ್ನು ಕೇಳಲು ಕೆಲಸವಿಲ್ಲದ ಕೆಲವರು ನಿಲ್ಲುತ್ತಿದ್ದರು. ಮತ್ತೆ ಕೆಲವರು ಮುಗುಳ್ನಕ್ಕು ಹೊರಟುಹೋಗುತ್ತಿದ್ದರು. ...ತವರೆದುರು ಆತ ತನ್ನ ಕಲೆ ತೋರುತ್ತಿದ್ದ. ಹದಿನೈದು ಅಡಿ ಎತ್ತರದ ಒಂದು ದಪ್ಪನೆಯ ಗಳುವನ್ನು ನೆಲದ ...ೕಲೆ ನಿಲ್ಲಿಸುತ್ತಿದ್ದ. ಒಂದು ಇಂಚು ಕೂಡ ಹೂತಿರದ ಆ ಗಳುವನ್ನು ಆತನು ಸರಸರನೆ ಹತ್ತಿ ಕಾಲುಗಳನ್ನು ...ಮಿಗೆ ಸಮಾನಾಂತರವಾಗಿ ಎತ್ತಿ ಒಂದು ಕೈನಿಂದ ಎಲ್ಲರಿಗೆ ನಮಸ್ಕರಿಸಿ ಸರಸರನೆ ಇಳಿಯುತ್ತಿದ್ದ. ...ರಡನೆಯ ಆಟ ಶುರುಮಾಡುತ್ತಿದ್ದ. ಹಿಂದಕ್ಕೆ ಬಗ್ಗಿ ನೆಲಕ್ಕೆ ತಲೆಯೂರಿ ಒಂದು ವೃತ್ತದಾಕಾರವನ್ನು ...ಚಿ ಕೈಗಳಿಂದ ಎರಡು ಚೆಂಡುಗಳನ್ನು ಆರಡಿ ಎತ್ತರಕ್ಕೆ ಎಸೆದು ಹಿಡಿಯುತ್ತಿದ್ದ. ಆದಾದ ...ೕಲೆ ಕಾಣ್ಯಗಳನ್ನು ಚೆಂಡಿನಂತೆಯೇ ಎಸೆದಾಗ ಅವು ಬಿಸಿಲಲ್ಲಿ ಹೊಳೆಯುತ್ತ ಸದ್ದು ಮಾಡುತ್ತಿದ್ದವು. ...ಷ್ಟರಲ್ಲಿ ಜನ ಸೇರುತ್ತಿದ್ದರು. ಆತನೊಬ್ಬ ಅದ್ಭುತ ಎನ್ನುವಂತೆ ನೋಡುತ್ತಿದ್ದರು. ತನ್ನ ಬಡತನದ ...ಗ್ಗೆ ಒಂದು ಮಾತನ್ನೂ ಆಡದೆ ಮೂರನೆಯ ಆಟ ಶುರುಮಾಡುವಷ್ಟರಲ್ಲಿ ಜನ ತಮ್ಮಲ್ಲಿದ್ದ ...ಡಿ ಕಾಸನ್ನು ಅವನ ಚಾಪೆಯ ಮೇಲೆ ಎಸೆದಿರುತ್ತಿದ್ದರು. ಮೂರನೆಯ ಆಟದಲ್ಲಿ ಚೆಂಡೊಂದನ್ನು ...ತ್ತು ಅಡಿ ಎತ್ತರಕ್ಕೆ ಎಸೆದು ಕೈಯಲ್ಲಿದ್ದ ದೊಣ್ಣೆಯನ್ನು ತಿರುಗಿಸುತ್ತಾ ಅತ್ತ ನೋಡದೆ ತಲೆಯ ...ೕಲೆ ಚೆಂಡನ್ನು ಪುಟಿಸತೊಡಗುತ್ತಿದ್ದ. ಕೈಗಳಲ್ಲಿ ದೊಣ್ಣೆ ತಿರುಗುತ್ತಲೇ ಇದ್ದಾಗ ಕಾಲಿನಿಂದ ...ಂಡಿನೊಂದಿಗೆ ಆಟ ಆಡುತ್ತಿದ್ದ.




ಬೇಸಿಗೆ ಮತ್ತು ಚಳಿಗಾಲದಲ್ಲಿ ಊಟಕ್ಕೆ ಸಾಕಾಗುವಷ್ಟು ಹಣ ಬರುತ್ತಿತ್ತು, ಹೊಟ್ಟೆಯನ್ನು ...ಲ್ಲಿ ಹಿಸುಕ್ಕಿಸಿ ಮೈಮುಚ್ಚುವಷ್ಟು ಬಟ್ಟೆ ಕೊಳ್ಳಬೇಕಾಗುತ್ತಿತ್ತು, ಮಳೆಗಾಲದಲ್ಲಿ ಊಟಕ್ಕೇ ಕಷ್ಟವಾಗುತ್ತಿತ್ತು, ನಗರಕ್ಕೆ ...ನ್ನೆಯು ಸಿನಿಮಾ ಅಥವಾ ಸರ್ಕಸ್ ಬಂದರೆ, ರಾಜಕೀಯದಲ್ಲಿ ಮುಖ್ಯ ಘಟನೆಗಳಾಗುತ್ತಿದ್ದರೆ ಅವನ ಆಟದ ಕಡೆ ...ದರೂ ಗಮನ ಕೊಡುತ್ತಿರಲಿಲ್ಲ, ಬೇಸರವಾದಾಗ ಅವನಿಂದ ಯಾವ ಆಟವೂ ಸಾಧ್ಯವಾಗುವುದಿಲ್ಲ ಕಾಯಿಲೆಯಾದರೂ ...ನ್ನ.

ಒಗಿದ್ದಾಗ ಒಂದು ತಿಂಗಳು ಅವನಿಗೆ ಹಣವೇ ಬರಲಿಲ್ಲ, ಮಳೆ, ಬೇಸರ, ಆಧುನಿಕ ರಂಜನೆಗಳು ...ದರಿಂದಾಗಿ ಅವನು ಚಾಚಿ ಹಾಕಿ ಮಾತು ಶುರುಮಾಡಿದರೆ ಯಾರೂ ನಿಲ್ಲುತ್ತಲೇ ಇರಲಿಲ್ಲ, ಪ್ರೇಕ್ಷಕರಿಲ್ಲದಾಗ

...ಗಳು ಹತ್ತಿ ಇಳಿಯುವುದು, ವೃತ್ತಾಕಾರದಲ್ಲಿ ಚೆಂಡಿನೊಂದಿಗೆ ಆಡುವುದು.... ಎಲ್ಲ ಅವನ ದುಗುಡ ಹೆಚ್ಚಿಸುತ್ತಿದ್ದವು.

ಆತ ತನ್ನ ಮಹಾ ಬೇಸರದ ವೇಳೆಯಲ್ಲಿ ಪಾದ್ರಿಯೊಬ್ಬನನ್ನು ನೋಡಿದ. ಸುಮ್ಮನೇ ಅವನ ಹಿಂದೆ ನಡೆಯತೊಡಗಿದ. ಆತ ತನ್ನನ್ನು ಹಿಂಬಾಲಿಸುವುದನ್ನು ಪಾದ್ರಿ ಗಮನಿಸಿ ನಿಂತ. ಆಗ ದೊಂಬರವನು 'ಕ್ಷಮಿಸಿ, ನಾನು ನಿಮ್ಮೊಂದಿಗೆ ಇರುತ್ತೇನೆ. ನಾನು ಅನಾಥ' ಅಂದ.



"ನಿನಗೆ ಏನಾದರೂ ದುರಭ್ಯಾಸ ಇದೆಯೆ?" ಅಂದ ಪಾದ್ರಿ.

'ಆಗಾಗ ಸ್ವಲ್ಪ ಕುಡಿಯುವ ಆಶೆಯಾಗುತ್ತೆ' ಅಂದ.

'ನೀನು ಅದನ್ನು ಬಿಟ್ಟು ನನ್ನೊಂದಿಗೆ ಬಾ' ಅಂದು ಪಾದ್ರಿ ಅವನನ್ನು ಚರ್ಚಿಗೆ ಕರೆದುಕೊಂಡು ಹೋದ. ಅಲ್ಲಿ ಪಾದ್ರಿ ಹೇಳಿದ ಕೆಲಸ ಮಾಡಿಕೊಂಡಿದ್ದ. ಊಟ ಸಿಕ್ಕುತ್ತಿತ್ತು, ಬಟ್ಟೆ ಸಿಕ್ಕುತ್ತಿದ್ದವು. ಆದರೆ ಆತ ದಿನದಿನಕ್ಕೆ ಸೊರಗುತ್ತಾ ಹೋದ. ಯಾವುದೋ ಚಿಂತೆ ಅವನನ್ನು ಕಾಡುತ್ತಿತ್ತು. ಅದು ಆವನಿಗೆ ಅರ್ಥವಾಗಿರಲಿಲ್ಲ.

ಒಂದು ದಿನ ಪಾದ್ರಿ ಮತ್ತು ಅವನ ಶಿಷ್ಯರು ದೊಂಬರವನು ಮಧ್ಯರಾತ್ರಿ ಎಲ್ಲಿಗೋ ಹೋಗುತ್ತಿರುವುದನ್ನು ಗಮನಿಸಿದರು. ಆತ ಸ್ವಲ್ಪ ಗೆಲುವಾಗತೊಡಗಿದ್ದ, ಮುಖ ಕಾಂತಿ ಪಡೆದಿತ್ತು.

ಒಂದು ದಿನ ಪಾದ್ರಿ ಅವನ ಗುಟ್ಟನ್ನು ಪತ್ತೆ ಹಚ್ಚಲೇಬೇಕೆಂದು ಮಧ್ಯರಾತ್ರಿ ಅವನನ್ನು ಅನುಸರಿಸಿದ. ದೊಂಬರವನು ನೇರವಾಗಿ ಬಾಗಿಲು ತೆಗೆದುಕೊಂಡು ದೇವರಿದ್ದ ಹತ್ತಿರ ಹೋದ. ವರ್ಜಿನ್ ಮೇರಿಯ ಎದುರು ತನ್ನ ಮೂರು ಮುಖ್ಯ ಆಟಗಳನ್ನು ಪ್ರದರ್ಶಿಸಿದ. ಆಕೆಗೆ ನಮಸ್ಕರಿಸಿ ಬಂದಷ್ಟೇ ಮೌನವಾಗಿ ಹಿಂದಿರುಗಿದ. ಅವನ ಮುಖದ ಮೇಲೆ ವಿಚಿತ್ರ ಸಂತೋಷವಿತ್ತು.

ಮೇರಿ ಆತನ ಬಗ್ಗೆ ಪ್ರೀತಿಯಿಂದ ನಕ್ಕಂತೆ ಪಾದ್ರಿಗೆ ಅನ್ನಿಸಿತು. ತಾನೂ ಪ್ರಾರ್ಥನೆ ಸಲ್ಲಿಸಿ ಬಂದ.

ಹೀಗೆ ದೊಂಬರವನು ತನ್ನ ಬದುಕಿನಲ್ಲಿ ಸಾರ್ಥಕ್ಯ ಕಂಡುಕೊಂಡ. ಅವನ ಆಳದ ತೊಳಲಾಟ ಇಲ್ಲವಾಗಿ ನೆಮ್ಮದಿಯಿಂದ ಬಾಳಿದ.

(ಇದು ಫ್ರಾನ್ಸ್‌ನ ಅನಾಟೋಲ್ ಫ್ರಾನ್ಸ್ ಬರೆದ ಪುಟ್ಟ ಕತೆಯೊಂದರ ಸಾರಾಂಶ) —ಮೇ 21,1997

ಕುಂಬಳಕಾಯಿ ಕಳ್ಳ ಅಂದರೆ....

ರಾಜಕಾರಣಿಗಳ ಜಾಯಮಾನವೇ ಹೀಗಿರಬಹುದು. ಒಳಗೊಂದು ಹೊರಗೊಂದು. ಮಾತೆಲ್ಲ ಬರೀ ಒಗಟು. ಶೋಭಾ ಕರಂದ್ಲಾಜೆ 'ನಮ್ಮ ನಡುವೆ ಮೀರ್‌ಸಾಧಿಕ್, ಮಲ್ಲಪ್ಪ ಶೆಟ್ಟರು ಇದ್ದಾರೆ' ಅಂದಿದ್ದರು. ಅವರು ಯಾರು ಎಂದು ಸ್ಪಷ್ಟಪಡಿಸಬೇಕಿತ್ತು. ಹಾಗಿದ್ದಲ್ಲಿ ತಾಪತ್ರಯ ಇರುತ್ತಿರಲಿಲ್ಲ. ಮುಗುಂ ಆಗಿ ಹಾಗೆಂದರೂ ಕುಂಬಳ ಕಾಯಿ ಕಳ್ಳನ ಸಮಾಚಾರ ಆಯಿತು. ಸದಾನಂದಗೌಡರು ತನ್ನನ್ನು ಉದ್ದೇಶಿಸಿಯೇ ಆ ಮಾತು ಹೇಳಿರೋದು ಅಂದುಕೊಂಡರಂತೆ!

ಈಗ ಬಂದಿದೆ-'ದೆವ್ವದ ಬಾಯಲ್ಲಿ ಭಗವದ್ಗೀತೆ.'

ಇದನ್ನು ಹೇಳಿದವರು ಯಾರು?

ಯಡ್ಯೂರಪ್ಪನವರು!

ಯಾರು ದೆವ್ವ?

ಇನ್ಯಾರು? ಇವರ ಪಾಲಿಗೆ ಅವರೇ... ಸದಾನಂದಗೌಡರು!

ಹಾಗೆಂದು ಹೇಳಿಲ್ಲ-ಆದರೆ ಇದು ಸ್ಪಷ್ಟ.

ಅವರು ಹೇಳಿದ ಭಗವದ್ಗೀತೆ ವಾಕ್ಯ ಯಾವುದು?

'ಇಂದಿನ ರಾಜಕಾರಣಿಗಳು ಪಾಪ ತೊಳೆದುಕೊಳ್ಳಲು ದೇವರಿಗೆ ದಕ್ಷಿಣೆ ನೀಡುತ್ತಾರೆ!'

ಅದ್ಭುತವಾದ ಮಾತು!

ಸುರಿಯಬಾರದೆ ಈ ಮಾತಿಗೆ ಚಪ್ಪಾಳೆ? ಸುರಿಯಿತು!

ಇದನ್ನು ಹೇಳಿದ್ದು ಎಲ್ಲಿ?

ಭಾರತಿ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳ ಸಭೆಯಲ್ಲಿ.

ಬಹುಪಾಲು ಸಭಿಕರು ಅವರ ಸಮುದಾಯದವರೇ ಅಂತೆ!

ಹಮಾರ ಕುತ್ತಾ ಹಮಾರ ಗಲೀಮೆ ಶೇರ್!

ದೇವರ ಪೂಜೆ ಅಂದಾಗ ನೆನಪಾಗುತ್ತೆ.

ಹಿಂದೆಯೂ ಮಾಡುತ್ತಿದ್ದರು-ಸದ್ಗತಿಗಾಗಿ!

ಈಗಲೂ ಮಾಡುತ್ತಾರೆ-ಪಾಪಗಳ renewelಗಾಗಿ!

ಪಾಪ ಮಾಡಲು ಹಿಂಜರಿಯಬೇಡಿ-ಈಗಿನ ಮಂತ್ರ.

ದೇವರ ಭಯ?

ಬೇಕಿಲ್ಲ!


ದಕ್ಷಿಣೆ ನೀಡಿದರೆ ಅವನು ತೃಪ್ತ!

ಕೊಡುವುದು ಸರಿ. ಎಷ್ಟೆಂದು ಕೊಡುವುದು?

ಪಾಪದ ಗಾತ್ರದ ಮೇಲೆ ಅದರ ನಿರ್ಧಾರ!

ದಕ್ಷಿಣೆ ನೀಡಿದರೆ ಈ ಹಿಂದಿನ ಪಾಪಗಳೆಲ್ಲ ಕ್ಲೋಸ್! ಮುಂದಿನ ಪಾಪ ಕಾರ್ಯಗಳಿಗೆ ಹುಮ್ಮಸ್ಸಿನಿಂದ ತೊಡಗಿಕೊಳ್ಳಬಹುದು!

ಕೆಲವು ಆಸ್ತಿಕ ಮಹಾಶಯರಿಗೆ ಈ ವಾದ ಹಿಡಿಸದು. 'ದಕ್ಷಿಣೆಗೆ ದೇವರು ಒಲಿಯುವುದಿಲ್ಲ' ಎಂಬುದು ಅವರ ಅಚಲ ವಿಶ್ವಾಸ. ಸರ್ವಾಂತರ್ಯಾಮಿ ಅಲ್ಲವೆ ಅವನು? ಎಲ್ಲವನ್ನೂ ಕಾಣುತ್ತಾನೆ. **God Sees the truth but waits** ಎನ್ನುವುದು ಅವರ ನಿಲುವು.



ಇದಕ್ಕೆ ಸಾಕ್ಷಿ ಏನು?

ಯಡ್ಯೂರಪ್ಪ!

ಹಗರಣಗಳ ದೊರೆ ಅವರು. ನಿರ್ಭಯ, ನಿಸ್ಸಂಕೋಚವಾಗಿ ಅದರಲ್ಲಿ ಪಾಲ್ಗೊಂಡರು. ನಂತರ... ದೇವರಿಗೆ ಮೊರೆ ಹೋದರು!

ದೇವರೇನು ಮಾಡಿದ?

ಸಿಬಿಐ ಕುಣಿಕೆ ಹಾಕಿದ!

ದೇವರಿಲ್ಲ ಎಂಬ ನಾಸ್ತಿಕ ಮಹಾಶಯರು ಇದರಿಂದಲಾದರೂ ಬುದ್ಧಿ ಕಲಿಯಲಿ ಎಂಬುದು ಆಸ್ತಿಕರ ಆಶಯ.

ಆಸ್ತಿಕರ ಆಶಯ ಏನಾದರೂ ಇರಲಿ. ದೇವರು ದಕ್ಷಿಣೆಗೆ ಒಲಿಯುತ್ತಾನೆ ಎಂಬುದೇ ಹಲವರ ನಂಬಿಕೆ. ಯಡ್ಯೂರಪ್ಪನವರು ಇಂತಹವರ ಜಾಯಮಾನದವರು.

ಇದ್ದದ್ದ ಇದ್ದ ಹಾಗೆ ಹೇಳಿದ್ದರು ಸದಾ. ಬಡಿಯಿತು ಯಡ್ಡಿಗೆ ಸಿಡಿಲು!

ಸದಾ ಏಟಿಗೆ ಎದುರೇಟು ನೀಡಿದರು ಯಡ್ಡಿ.

'ನಂಬಿಕೆ, ವಿಶ್ವಾಸದ್ರೋಹ ಮಾಡಿದವರ ಬಾಯಲ್ಲಿ ಈ ಮಾತೇ?'

ಬರಬಾರದು, ಖಂಡಿತ ಬರಬಾರದು!

ಆಗ ಬಂದದ್ದು 'ದೆವ್ವದ ಬಾಯಲ್ಲಿ ಭಗವದ್ಗೀತೆ' ಮಾತು.

ಈ ಮಾತಿಗೆ ಚಪ್ಪಾಳೆಗಳ ಸುರಿಮಳೆ!

ಅಂದಹಾಗೆ ಯಡ್ಡಿ ಈ ತಿರುಗೇಟು ನೀಡಿದ್ದು ಎಲ್ಲಿ?

ಬಸವ ಜಯಂತಿಯ ಸಭೆಯಲ್ಲಿ!

ಸಭಿಕರು ಯಾರು?

ಬಸವನ ಗುತ್ತಿಗೆದಾರರು!

ಇವರೂ ಹಮಾರ ಗಲೀಮೆ ಹಮಾರ ಕುತ್ತಾ ಷೇರ್!

ಇದು ಹೇಗಾದರೂ ಇರಲಿ. ತಮ್ಮ ಸಮುದಾಯದವರ ನಡುವೆ ಹೇಳಿದ್ದರೂ ಇದೂ ಒಪ್ಪಬೇಕಾದ ಮಾತೇ ಸರಿ!

ಅದೇ ಸಭೆಯಲ್ಲಿ ಸನ್ಮಾನ್ಯರು 'ನಿಮ್ಮ ಮಕ್ಕಳನ್ನು ಇತರೆ ಸಮುದಾಯದ ಮಕ್ಕಳ ಜೊತೆ ಬೆರೆಯಲು ಬಿಡಿ. ಊಟ ಉಪಚಾರ ವಿನಿಮಯ ಮಾಡಿಕೊಳ್ಳುವುದನ್ನು ಕಲಿಸಿ' ಎಂದೂ ಹೇಳಿದರು.

ಆಹಾ! ಎಂತಹ ಜಾತ್ಯತೀತ ಮನಸ್ಸು!

'ಕೇಳುವ ಜನರಿದ್ದಾರೆ ಎಂದು ಬಾಯಿಗೆ ಬಂದಹಾಗೆ ಮಾತನಾಡಬಾರದು. ಆ ಮಾತಿನ ಪರಿಣಾಮ ಏನಾಗುತ್ತದೆ ಎಂಬುದನ್ನು ಚಿಂತಿಸಿ ಮಾತನಾಡಬೇಕು' ಎಂದು ನಾವು ಹೇಳುತ್ತಿಲ್ಲ, ಸನ್ಮಾನ್ಯ ಯಡ್ಯೂರಪ್ಪನವರ ಬಾಯಿಯಿಂದಲೇ ಉದುರಿದ ಅಮೃತ ವಾಕ್ಯಗಳಿವು!



ಎಚ್.ಎಲ್. ಕೇಶವಮೂರ್ತಿ

ಅಣಕ

ಹೌದು ಯಡ್ಯೂರಪ್ಪನವರೇ ಇದು 'ಸ್ವವಿಮರ್ಶೆ'ಯೋ... ಸದಾನಂದಗೌಡರಿಗೆ ಚಾಟಿ ಏಟೋ? ಇವರಿಬ್ಬ... ಮಾತುಗಳನ್ನು ಕೇಳುತ್ತಿದ್ದರೆ... 'ದೆವ್ವ ಭಗವದ್ಗೀತೆ ಹೇಳಿದಂ... ಅನುಭವ ಆಗುತ್ತಲ್ಲಾ...

ಉರಿಸಿಂಗಿ ಬಾಂಬ್ ಸಿಡಿಸಾನಂತೆ!

ಯಡ್ಯೂರಪ್ಪ ಬಾಂಬು ಸಿಡಿಸುತ್ತಾರೆ!

ರಾಜ್ಯಾದ್ಯಂತ ಅದೇ ಸುದ್ದಿ.

ಸಿಡಿಸಿದರೆ ಬಾಂಬು?

ಬಾಯಿ ಬಾಂಬು ಸಿಡಿಯಿತು!

ನಿಜವಾದ ಬಾಂಬು?

ಠುಸ್ಸೆಂದಿತು!

ಇದು ಮೊದಲೇನೂ ಅಲ್ಲ, ಹಲವು ಬಾರಿ ಸಿಡಿಸುತ್ತೇ... ಎಂದಿದ್ದರು. ಪ್ರತಿ ಸಲವೂ ಅದು 'ಠುಸ್!'

ಬಾಂಬ್ ಸಿಡಿಸಲು ಕಾರಣಬೇಕಲ್ಲ?

ಇತ್ತು! ಕ್ಷೀಣಿಸುತ್ತಿರುವ ವರ್ಚಸ್ಸು!

ಇದು ಅವರ ಬ್ಲ್ಯಾಕ್‌ಮೇಲ್ ತಂತ್ರ!

ಭಾಜಪ ರಾಷ್ಟ್ರೀಯ ಪಕ್ಷ. ಇಂತಹ ತಂತ್ರಗಳ... ಹಾಕಬಾರದೆ ಕಡಿವಾಣ?

ಹಾಕುತ್ತಿದ್ದರು.. ಖಂಡಿತ ಹಾಕೇಹಾಕುತ್ತಿದ್ದರು. ಆದ... ಅವರಿಗಿತ್ತು ಹಣದ ಋಣ ಭಾರ!.

ಇಂತಹವುಗಳೆಲ್ಲ ಸಾಮಾನ್ಯರ ಮಾತು. ಭಾಜಪದವರ... ಕೇಳಿನೋಡಿ. ಅವರು ಹೇಳುವುದೇ ಬೇರೆ. ಅದು ಏನೆಂದರೆ...

"ಸುಮ್‌ಸುಮ್‌ನೆ ಜನ ಹುಯಿಲೆಬ್ಬಿಸ್ತಿದ್ದಾರೆ ಕಣ್ರೀ... 'ಭಾಜಪದಲ್ಲಿ ಸ್ಫೋಟ', 'ಭಾಜಪ ಸರ್ಕಾರ ಗಡಗಡ... ಹಾಗೆಹೀಗೆ ಅಂತ ಏನೇನೋ ಹೇಳುತ್ತಾರೆ. ಹಾ... ಬರೆಯುತ್ತಾರೆ. ನಮ್ಮ ಪಕ್ಷ ಅಂದರೆ ಒಂದು ಸಂಸಾ... ಇದ್ದಂಗೆ. ಸಂಸಾರ ಅಂದಮೇಲೆ ಸಣ್ಣಪುಟ್ಟ ಮನಸ್ತಾ... ಜಗಳ ಇದ್ದೇ ಇರ್ತವಲ್ಲವಾ... ಹಂಗೇ ಇಲ್ಲೂನೂ ಆಗು... ಅಷ್ಟೇನೆ. ಇನ್ನೇನೂ ಆಗಿಲ್ಲ."

ಜನರಿಗೆ ಅನುಮಾನ ಬರಬಹುದು. ಬಿ.ಪಿ.ಹರೀ... ಅನ್ನುವ ಯಾರೋ ಟಿವಿ ಮುಂದೆ ನಿಂತು 'ನಗುವ ಹೆಂಗ... ಅಳುವ ಗಂಡಸನ್ನ ನಂಬಬಾರದು' ಅನ್ನುವ ಗಾದೆ ಮಾ... ಇದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗಲ್ಲ ಅಂತಾ... ನಮ್ಮ ನಾಯಕ ಸದಾನಂದಗೌಡರು ವೇದ, ಗಾದೆಗಳ...

ಪ್ರಶ್ನೆಪತ್ರಿಕೆಯ ಹೆಸರಲ್ಲಿ ಪ್ರತಿಗಾಮಿ ಕುಚೋದ್ಯ

ಬೆಂಗಳೂರು ವಿಶ್ವವಿದ್ಯಾಲಯದ ಬಿಕಾಂ ಪದವಿ ವಿದ್ಯಾರ್ಥಿಗಳಿಗೆ ತಯಾರಿಸಲಾದ ವಾಣಿಜ್ಯ ಪ್ರಶ್ನೆಪತ್ರಿಕೆಯಲ್ಲಿ ಕನ್ನಡದ ಧೀಮಂತ ಚೇತನಗಳಲ್ಲಿ ಅನೇಕರನ್ನು ಉದ್ದೇಶಪೂರಿತವೆನ್ನಬಹುದಾದ ಕುಚೋದ್ಯಕ್ಕೆ ಗುರಿಪಡಿಸಿದ ಸುದ್ದಿ ಓದಿ ನಿಜಕ್ಕೂ ಆಘಾತವಾಯಿತು (ಪತ್ರಿಕೆ ಮೇ 16, 2012ರ ಸಂಚಿಕೆ). ವರ್ತಮಾನ ಕರ್ನಾಟಕದ ಸಾಂಸ್ಕೃತಿಕ ನಿರ್ವಾತದಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತಿರುವ ಕುವೆಂಪು, ಕಾರಂತ, ಬೇಂದ್ರೆಯಂತಹ ಸಾಕ್ಷಿಪ್ರಜ್ಞೆಗಳನ್ನು ಅಭಿರುಚಿಹೀನ ಮಾದರಿಯಲ್ಲಿ ಪ್ರಶ್ನೆಪತ್ರಿಕೆಯೊಂದರ ವಸ್ತುವಿಚಾರಗಳಾಗಿ ಬಳಸಿಕೊಂಡಿರುವುದು ಅವರ ಮೇಲಿನ ಗೌರವದಿಂದ ಖಂಡಿತಾ ಅಲ್ಲ. ಈ ಮೂರ್ಖ ಕೆಲಸ ಮಾಡಿದ 'ಕುಚೋದ್ಯದ ಅಧ್ಯಾಪಕ'ನನ್ನೂ ಒಳಗೊಂಡಂತೆ ಇಡೀ ಪರೀಕ್ಷಾ ಮಂಡಳಿ ನಾಡಿನ ಪ್ರಜ್ಞಾವಂತ ಪರಂಪರೆಯ ನಿರ್ಮಾಣದ ಹಿಂದಿನ ಗುಣಾತ್ಮಕ ಮನಸ್ಸುಗಳಿಗೆ ಅವಮಾನ ಮಾಡಿದೆ.


ಇದು ಕಾಮರ್ಸ್ ಓದುವ ಮಕ್ಕಳಿಗೆ ಸಾಹಿತಿಗಳ ಅದರಲ್ಲೂ ಕುವೆಂಪು, ಕಾರಂತರಂತವರ ಹೆಸರು ನೆನಪಿಸುವ ಮಾದರಿಯಂತೂ ಸುತರಾಂ ಅಲ್ಲ, ದುರಂತವೆಂದರೆ ಹಾಗೆ ಮಾಡಿದವರು ಕನಿಷ್ಠ ವಿಷಾದಿಸಿದ ಸುದ್ದಿಯೂ ಕೇಳಿ ಬಂದಿಲ್ಲ. ಅದೇ ತೆರನಾಗಿ ನಾಡಿನ ಎಲ್ಲೆಡೆಯಿಂದ ಛೀಮಾರಿಯ ಕೂಗು ಕೇಳಿಬರಬೇಕಾಗಿದ್ದ ಈ ಪ್ರಸಂಗದಲ್ಲಿ ನಾಡಿನ ಸಾಕ್ಷಿಪ್ರಜ್ಞೆಯೂ ಸತ್ತು ಮಲಗಿರುವುದು ಶೋಚನೀಯವೆನಿಸುತ್ತದೆ. ಪ್ರಾಯಶಃ ಕರ್ನಾಟಕದ ಸಾಮಾನ್ಯ ಜನ ಇವತ್ತು ಅನುಭವಿಸುತ್ತಿರುವ ಸಂಕಟದ ಹಿಂದೆ ಇಂತಹ ನಿರ್ವಾತದ ಕಾರಣಗಳಿವೆ. ಈ ನಿರ್ವಾತವನ್ನು ಉತ್ಪಾದಿಸಿಕೊಟ್ಟ ಹೊಣೆಗಾರಿಕೆ ಈ ತೆರನಾದ ಹೊಣೆಗೇಡಿ ಅಧ್ಯಾಪಕರ ಜೊತೆಗೆ ತಮ್ಮ ಬೌದ್ಧಿಕತೆಗೆ ಕುತ್ತು ಹಿಡಿಸಿಕೊಂಡು ಇಂತಹದ್ದನ್ನೆಲ್ಲಾ ತಣ್ಣಗೆ ನೋಡುತ್ತಲೇ ಕುಳಿತ ಕೇಜಿಗಟ್ಟಲೆ ಸಂಬಳ ತಿನ್ನುವ ಅಧ್ಯಾಪಕರ ಮೇಲೆಯೂ ಇದೆ.

ಎಲ್ಲೋ ಯಾರದೋ ಮುಖದ ಮೇಲೆ ಸಗಣಿ ಬಿದ್ದರೆ ನಮ್ಮ ಮುಖಕ್ಕಲ್ಲವಲ್ಲಾ ಎಂದೋ, ಸಾಹಿತಿಗಳನ್ನು ಜೂಜುಕೋರರಾಗಿ ಬಳಸಿಕೊಂಡು ಪ್ರಶ್ನೆಪತ್ರಿಕೆ ಮಾಡಿದರೆ ಹಾಗಾದರೂ ಸಾಹಿತಿಗಳ ಪರಿಚಯವಾಯಿತಲ್ಲಾ ಎಂದೋ ನಿರುಮ್ಮಳತೆಯನ್ನು ಅನುಭವಿಸುತ್ತಿರುವುದರಿಂದಲೇ ತರಗತಿಯ ಪಠ್ಯಪುಸ್ತಕವನ್ನು ನಿರ್ಧರಿಸುವ ಹಕ್ಕೂ ಈ ಅಧ್ಯಾಪಕರ ಕೈಯಿಂದ ನಿಧಾನವಾಗಿ ಜಾರುತ್ತಿದೆ. ಒಂದು ನಾಡಿನ ಸಂಸ್ಕೃತಿಯನ್ನು ರೂಪಿಸುತ್ತಾ, ಆರೋಗ್ಯಕರವಾದ ಸಾಂಸ್ಕೃತಿಕ ಇರುವಿಕೆಗಾಗಿ ದನಿ ಎತ್ತುವ ಮೂಲಕ ನಾಡನ್ನು ರಕ್ಷಿಸಬೇಕಾದ ಹೊಣೆಗಾರಿಕೆ ಅಧ್ಯಾಪಕರನ್ನೂ ಒಳಗೊಂಡಂತೆ ಎಲ್ಲರ ಮೇಲೂ ಇದೆ.

ತರಗತಿಯಾಚೆಗೆ ಸಾಂಸ್ಕೃತಿಕ ರಕ್ಷಣೆಯ ಮಾತುಗಳನ್ನು ಜೀವಂತವಿಡಬೇಕಾದ ಅಧ್ಯಾಪಕರುಗಳು, ಕನಿಷ್ಠ ತರಗತಿಯ ಒಳಗಿನ ವಿದ್ಯಾರ್ಥಿಗಳಿಗಾದರೂ ತಪ್ಪುದಾರಿ ತೋರಿಸದಂತೆ ಎಚ್ಚರ ವಹಿಸಬೇಕಾದುದು ಹೊಣೆಗಾರಿಕೆಯಲ್ಲವೆ?

ತಮ್ಮ ಸಂಬಳದ ಬಾಕಿಗಾಗಿ 'ಅನ್ಯಾಯವಾಯ್ತೋ' ಎಂದು ಬಾಯಿಹೊಡೆದುಕೊಳ್ಳುವ ಅಧ್ಯಾಪಕರುಗಳು ಕಣ್ಣೆದುರಿನಲ್ಲಿಯೇ ವಿಜೃಂಭಿಸುತ್ತಿರುವ ಇಂತಹ ಸಾಂಸ್ಕೃತಿಕ ಕುಚೋದ್ಯದ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ದೂರಗಾಮಿ ಪರಿಣಾಮಗಳನ್ನು ಗಮನಿಸದೇ ಹೋದಲ್ಲಿ ನಾಡಿನ ಕ್ಷಮೆಗೆ ಯೋಗ್ಯರಾಗಲಾರರು. ಈ ಹೊಣೆಗೇಡಿತನ ಮಹಾಚೇತನ ಕುವೆಂಪು ಆದಿಯಾಗಿ ನಾಡಿನ ಸಮಸ್ತರಿಗೆ ಮಾಡಿದ ಸಾಂಸ್ಕೃತಿಕ ದ್ರೋಹ. ಇದಕ್ಕೆ ಧಿಕ್ಕಾರವಿರಲಿ.

- ಜಯಪ್ರಕಾಶ್ ಶೆಟ್ಟಿ ಹೆಚ್., ಕುಂದಾಪುರ

ಜನಪರ ಪತ್ರಿಕೆ ನೂರು ಕಾಲ ಇರಲಿ

ಪತ್ರಿಕೆಗೆ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ಮೇ 23, 2012ರ ಸಂಚಿಕೆಯಲ್ಲಿ ಮೂಡಿಬಂದ 'ಕುರುಬರ ಕಹಳೆ- ಸಿದ್ದು ಮೇಲುಗೈ' ವರದಿಯು ಸೊಗಸಾಗಿತ್ತು. ಸಮಾವೇಶ ನಡೆದ ಮೇಲೆ ಎಲ್ಲಾ ಪತ್ರಿಕೆಗಳನ್ನು ನೋಡಿದೆ. ಆದರೆ ಅವೆಲ್ಲವೂ ನೈಜವಾದ ವಿಷಯವನ್ನು ಮರೆಮಾಚಿ ವರದಿಗಳನ್ನು ಪ್ರಕಟಿಸಿದವು. ನಿಮ್ಮ ಪತ್ರಿಕೆಯಲ್ಲಿ ಮಾತ್ರ ನಿಜವಾದ ವರದಿ ಪ್ರಕಟಗೊಂಡಿತು.

ತಂದೆ ಲಂಕೇಶರ ಕಾಲದಿಂದಲೂ ಹಿಂದುಳಿದ, ಅಲ್ಪಸಂಖ್ಯಾತರ, ಶೋಷಿತರ ವರ್ಗದವರ ದನಿಯಾಗಿ ಪತ್ರಿಕೆ ಮೂಡಿಬರುತ್ತಿದೆ. ಪತ್ರಿಕೆ ಸದಾಕಾಲ ಹೀಗೇ ಕಾರ್ಯನಿರ್ವಹಿಸುತ್ತಾ ಬರಲಿ. ಪತ್ರಿಕೆ ನೂರು ಕಾಲ ಬಾಳಲಿ ಮತ್ತು ಬೆಳಗಲಿ ಎಂದು ಆಶಿಸುತ್ತೇನೆ.

ಪತ್ರಿಕೆಗೆ ನಾನು ಆಭಾರಿಯಾಗಿದ್ದೇನೆ. ನಿಮ್ಮ ಮತ್ತು ನಿಮ್ಮ ಪತ್ರಿಕೆ... ಅಭಿಮಾನಿ.

- ಬಸವನಗೌಡ ಬಿ.ಎಸ್. ಜಗಳೂರು, ದಾವಣ...

ಹಜ್ ಸಬ್ಸಿಡಿಯನ್ನು ರದ್ದುಗೊಳಿಸಬೇಕು

ಪ್ರತಿ ವರ್ಷ ಸುಮಾರು ಒಂದು ಲಕ್ಷ ಜನ ಮುಸ್ಲಿಮರಿಗೆ ಹಜ್ ಯಾತ್ರೆಗೆ ಹೋಗಲು ಸರ್ಕಾರ ನೆರವು ನೀಡುತ್ತ... ಅದಕ್ಕಾಗಿ ಸುಮಾರು 600 ಕೋಟಿ ರೂ.ಗಳನ್ನು ಖರ್ಚು ಮಾಡುತ್ತದೆ! ಅಂದರೆ ಪ್ರತಿ ಯಾತ್ರಿಗೂ ಸುಮಾ... 60,000 ರೂ. ಸಬ್ಸಿಡಿ ನೀಡುತ್ತದೆ!!

ಈ ದೇಶದಲ್ಲಿನ್ನೂ ಒಬ್ಬ ಜನಸಾಮಾನ್ಯ ವರ್ಷವೆ... ದುಡಿದರೂ 60,000 ರೂ. ಸಂಪಾದನೆಯಾಗುವುದಿ... ಹೀಗಿರುವಾಗ ಹಜ್ ಯಾತ್ರಿಯೊಬ್ಬನಿಗೆ 60,000 ರೂ... ಸಬ್ಸಿಡಿ ನೀಡುವುದು ಘೋರ ಅಪರಾಧವಲ್ಲವೇ?

ಜನಸಾಮಾನ್ಯನಿಂದ ವಸೂಲಿ ಮಾಡಿದ ಹಣವನ್ನು ಖರ್ಚು ಮಾಡುವ ರೀತಿ ಇದಾ? ಹಜ್ ಯಾತ್ರೆಗೆ ಹೋಗಲೇಬೇಕೆಂ... ನಿಯಮವೇನೂ ಇಲ್ಲ. ಹಣವಿರುವವರು ತಮ್ಮ ಸ್ವಂತ ಖರ್ಚಿನಿಂ... ಹೋಗಿ ಬರಲಿ. ಆದರೆ ಜನ ಸಾಮಾನ್ಯನಿಂದ ವಸೂಲಿ ಮಾಡಿ... ಹಣದಿಂದಲ್ಲ. ಅಲ್ಲದೆ ಜಾತ್ಯತೀತ ರಾಷ್ಟ್ರದಲ್ಲಿ ಈ ರೀತಿ ಜಾ... ಧರ್ಮಗಳಿಗೆ ಉತ್ತೇಜನ ಕೊಡುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತ... ಇದು ಎಲ್ಲ ಜಾತಿಧರ್ಮಗಳಿಗೂ ಅನ್ವಯಿಸುತ್ತದೆ.

ಅದೇ ಹಣವನ್ನು ಬಡವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸ... ಎಂದು ಸುಪ್ರೀಂಕೋರ್ಟ್ ಹೇಳಿರುವುದು ತುಂಬ ಅರ್ಥಪೂರ್ಣ ಹಾಗೂ ಸ್ವಾಗತಾರ್ಹ. ನಮ್ಮ ನೀತಿಗೆಟ್ಟ ರಾಜಕಾರಣಿಗಳು/ರಾಜಕೀಯ ಪಕ್ಷಗಳು ಈ ರೀತಿ **VOTE BANK** ರಾಜಕೀಯ ಮಾಡುತ್ತಿರುವುದ... ಎಲ್ಲರಿಗೂ ಅರ್ಥವಾಗುವ ವಿಷಯ. ಅಂತಹ ರಾಜಕೀಯ ಪಕ್ಷಗಳನ್ನೂ ರಾಜಕಾರಣಿಗಳನ್ನೂ ನಿಷೇಧಿಸಬೇಕು.

- ವೀರಬ್ಯಾತಯ್ಯ, ಬೆಂಗಳೂ...

ಳ್ಳು ಮಾಡುವುದಕ್ಕೆ ಹೊರಟಿದ್ದಾರೆ. 'ನಗುವ ಗಂಡಸನ್ನ ಬಟೇದಿ' ಅನ್ನುವುದನ್ನು ಸಾಬೀತುಮಾಡಿದ್ದಾರೆ ಎಂದೆಲ್ಲ ಳಿ ತಮ್ಮ ನಾಯಕರನ್ನೇ ಹೀಯಾಳಿಸಿದರಲ್ಲಾ... ಸನ್ಮಾನ್ಯರ ದಿನಲ್ಲೇ ಹೋಗುವುದಾದರೆ... ನಿಮ್ಮ ಪಕ್ಷ ಸಂಸಾರ ದ್ದಂಗೆ ಅಂತೀರಿ. ಸಂಸಾರದ ರಟ್ಟು ವ್ಯಾಧಿ ಗುಟ್ಟು ನ್ನುವ ಗಾದೆ ಮಾತಿದೆ. ನೀವು ಗಾದೆ ಮಾತನ್ನೇ ಸುಳ್ಳು ಡುವ ಹಾಗೆ ಸಂಸಾರದ ಗುಟ್ಟು ಬಟಾಬಯಲು ಾಡುತ್ತಿದ್ದೀರಲ್ಲಾ ಅಂತ ನಿಮಗೆ ಅನ್ನಿಸಬಹುದು. ಅವರು ದೆ, ಪುರಾಣ ಅರೆದು ಕುಡಿದಿರೋರು. ಇನ್ನು ಾವುದಾರೂ ಗಾದೆ ಮಾತ ಹೇಳಬಹುದೇನೊ!

ಅವರು ಹಾಳಾಗಲಿ. ಯಡ್ಯೂರಪ್ಪನೋರು ನುಭವಸ್ಥರಲ್ಲವಾ. ಅವರೂ ತಲೆ ಕೆಟ್ರೋರಂಗೆ ಅವರ ಕ್ಷದವರನ್ನೇ ಬಾಯಿಗೆ ಬಂದಹಾಗೆ ಬಯ್ಯುತ್ತಾ ಬಿದ್ದವ್ರೆ. ದೇನ್ರಿ ಈಶ್ವರಪ್ಪನವರೆ ನಿಮ್ಮ ಗುರುಗಳು ಹಿಂಗೆ ಲುಪೈಲಾಗಿ ಆಡ್ತಿದಾರೆ ಅಂದರೆ ಅವರು ಎಳೆಮಗು ದ್ದಂಗೆ ಕಣ್ರೀ. ಮಕ್ಕಳು ನೋವಾದಾಗ ರಚ್ಚೆ ಹಿಡೀತವೆ. ಮೇಲೆ ಮುದ್ದಿಸುತ್ತವೆ. ಹಂಗೇಯ ಇವರೂನು. ಅವರ ನಸ್ಸಿಗೆ ನೋವಾಗದೆ. ಸಿಕ್ಕಿದೋರ ಒದೀತಾರೆ; ಬೈತಾರೆ. ಮೇಲೆ ಮುದ್ದು ಮಾಡುತ್ತಾರೆ ಕಣ್ರೀ ಅಂತಾರೆ! ಅಲ್ಲರೀ ಂದು ಸಲ ಸರಿ, ಎರಡು ಸಲ ಸರಿ. ಪದೇಪದೇ ಂಗಾಡ್ತಾರಲ್ರೀ, ಅಮಾವಾಸ್ಯೆ ಹುಣ್ಣಿಮೆಗೇನಾದರೂ ತಲೇಲಿ ುಳ ಕಿದುರ್ತಾವಾ ಅಂದರೆ ಇಂತಹವೆಲ್ಲ ದೊಡ್ಡ ಸಂಸಾರದಲ್ಲಿ ೋವೇಯ ಅಂತಾರೆ!

ಇದೆಲ್ಲದರ ಅರ್ಥ ಏನು ಅಂದರೆ....

ಬಾಂಬ್ ಸಿಡಿಸುತ್ತಾರೆ ಅಂದರೆ ಬ್ಲ್ಯಾಕ್‌ಮೆಯಿಲ್ ಾಡ್ತಾರೆ!

ಹೌದಾ....!

ಕೊನೆಯ ಮಾತು:

ತಪ್ಪು ಮಾಡಿದವರನ್ನು ಸೋನಿಯಾ ರಕ್ಷಿಸುತ್ತಾರಾ?

ಹೌದು ಅನ್ನೋದು ಯಡ್ಯೂರಪ್ಪನವರ ಅಭಿಮತ. ದರೆ ಭಾಜಪ ಮುಖಂಡರು ತಪ್ಪು ಮಾಡದೇ ಇದ್ದರೂ ಲು ಎಳೆಯುತ್ತಾರೆ ಅನ್ನುವುದೂ ಅವರ ಮಾತೇ.

ಇದ್ದಕ್ಕಿದ್ದಂತೆ ಸೋನಿಯಾ ಪ್ರೀತಿಗೆ ಏನು ಕಾರಣ?

ಕಾಂಗ್ರೆಸ್ ಸೇರಲು ಈ ವೇಷ ಅನ್ನುವುದು ಕೆಲವರ ೂಹೆ. ಅದು ಹೇಗೆ ಸಾಧ್ಯ? ತಪ್ಪು ಮಾಡಿದವರನ್ನೂ ಕ್ಷಿಸುತ್ತಾರೆ ಎಂದರೆ ಸೋನಿಯಾಗೆ ಮಾಡುವ ಅವಮಾನ ಲ್ಲವಾ?

ಹೌದು ಸ್ವಲ್ಪ ಯಡವಟ್ಟಾಗಿದೆ. ಆದರೆ ಹೊಗಳಲು ಯತ್ನಿಸಿರುವುದಂತೂ ಸತ್ಯ.

ಹಾಗಾದರೆ ಯಾಕೆ ಈ ಹೊಗಳಿಕೆ?

ಸಿಬಿಐ ಕುಣಿಕೆ ಸಡಿಲವಾಗಿಸಲು! ❖

ನಿರ್ಜೀವ ಸಮಾರಂಭ!




2009-10ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭವು ಎಂದಿನಂತೆ ಬೋರ್ ಹೊಡೆಯುವಂತಿತ್ತು.

ಬೆಂಗಳೂರಿನ ಜ್ಞಾನಭಾರತಿ ಆಡಿಟೋರಿಯಂನಲ್ಲಿ ನಡೆದ ಸಮಾರಂಭಕ್ಕೆ ಉದ್ಯಮದ ನಾಯಕ-ನಾಯಕಿಯರೆಲ್ಲ ಬಹಿಷ್ಕಾರಹಾಕಿದಂತಿತ್ತು. ಸ್ಟಾರ್‌ಗಳು ಬಾರದಿದ್ದರೂ ಉದ್ಯಮಕ್ಕೆ ಸಂಬಂಧಪಟ್ಟ ಸಂಘಸಂಸ್ಥೆಗಳ ಪದಾಧಿಕಾರಿಗಳಾದರೂ ಬರುತ್ತಾರೆಂದುಕೊಂಡರೆ ಅವರೂ ಕೂಡ ಹೋಲ್‌ಸೇಲ್ ಆಗಿ ಗೈರು ಹಾಜರಾಗಿದ್ದರು. ಇಂತಹ ನಿರ್ಜೀವ ಸಮಾರಂಭಕ್ಕೆ ಒಂದಿಷ್ಟು ಮೆರುಗು ತಂದು ಕೊಟ್ಟಿದ್ದು ನಟಿ ಭಾವನಾಳ ಶಾಸ್ತ್ರೀಯ ನೃತ್ಯ. ಎಲ್ಲರೂ ನಿಬ್ಬೆರಗಾಗುವಂತೆ ಸುಮಾರು 14 ನಿಮಿಷಗಳ ಕಾಲ ಭಾವನಾ ನೃತ್ಯ ಮಾಡಿದರು. ಮೊನ್ನೆಮೊನ್ನೆಯಷ್ಟೇ ದರ್ಶನ್ ಅಭಿನಯದ 'ಚಿಂಗಾರಿ' ಚಿತ್ರದಲ್ಲಿ ಅರೆಬೆತ್ತಲೆಯಾಗಿ, ಬಿಂದಾಸಾಗಿ ಐಟಂ ಸಾಂಗ್‌ನಲ್ಲಿ ಕುಣಿದಿದ್ದ ಭಾವನಾ ಈಕೆಯೇ ಎಂದು ಅಚ್ಚರಿಮೂಡಿಸುವಂತಿತ್ತು ಆಕೆಯ ಶಾಸ್ತ್ರೀಯ ನೃತ್ಯ ಪ್ರತಿಭೆ. ನಿಜಕ್ಕೂ ಭಾವನಾ ಕನ್ನಡ ಚಿತ್ರರಂಗ ಇತ್ತೀಚೆಗೆ ಕಂಡಿರುವ ಪ್ರತಿಭಾವಂತೆ. ಆದರೂ ಇಂತಹ ಅದ್ಭುತ ಪ್ರತಿಭೆಗೆ ಸಿನಿಮಾದಲ್ಲಿ ಮಾತ್ರ ಯಾಕೆ ಕ್ಲಿಕ್ ಆಗಲಿಲ್ಲವೆಂಬುದು ನಿಜಕ್ಕೂ ಅರ್ಥವಾಗದ ಒಗಟು.

ಇತ್ತೀಚಿನ ವರ್ಷಗಳಲ್ಲಿ ಖಾಸಗಿ ಚಾನಲ್‌ಗಳು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮೈದಾನಗಳಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿವೆ. ಹಾಗಿರುವಾಗ ಸರ್ಕಾರದವರು ಮಾತ್ರ ಇಂತಹ ಕಾರ್ಯಕ್ರಮವನ್ನು ಇಷ್ಟು ಕಳಪೆಯಾಗಿ, ಚಿಕ್ಕದಾಗಿ ಮಾಡುವುದು ನಿಜಕ್ಕೂ ಆಶ್ಚರ್ಯ ಹುಟ್ಟಿಸುವ ಸಂಗತಿ. ❖

ಬಾಕ್ಸ್ ಆಫೀಸ್ ಬರ್ತಡೇ!





ಮೇ 29 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಕನ್ನಡ ಚಿತ್ರರಂಗದವರು ಅಂಬರೀಷ್ ಅವರ 60ನೇ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸುವ ಸಿದ್ಧತೆಯಲ್ಲಿದ್ದಾರೆ.

ಮೇ 30 ರಂದು - ಅಂದರೆ ಅಂಬರೀಷ್ ಹುಟ್ಟಿದ ಹಬ್ಬದ ಮರುದಿನ - ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಹುಟ್ಟಿದ ಹಬ್ಬ. ಈ ಇಬ್ಬರು ಹಿರಿಯ ನಟರು ಹಲವೊಮ್ಮೆ ತಮ್ಮ ಹುಟ್ಟುಹಬ್ಬವನ್ನು ಒಟ್ಟಿಗೆ ಮಧ್ಯರಾತ್ರಿ ಆಚರಿಸಿದ್ದೂ ಇದೆ. ಆದರೂ ಅವರ ಅಭಿಮಾನಿಗಳು ಪ್ರತ್ಯೇಕವಾಗಿ ತಮ್ಮ ಹೀರೋಗಳ ಹುಟ್ಟುಹಬ್ಬವನ್ನು ಆಚರಿಸಿದ್ದೂ ಇದೆ.

ಕಳೆದ ಹಲವಾರು ವರ್ಷಗಳಿಂದ ರವಿಚಂದ್ರನ್ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಲ್ಲ. ಅದಕ್ಕೆ ಅವರು ಕೊಟ್ಟ ಕಾರಣ "ನಮ್ಮ ಒಂದು ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ ಅದೇ ನಮ್ಮ ಪಾಲಿಗೆ ಬರ್ತಡೇ ಹಬ್ಬ." ಆದರೆ ಇತ್ತೀಚಿನ ವರ್ಷಗಳಲ್ಲಿ ಅವರ ಯಾವ ಚಿತ್ರಗಳೂ ಗೆದ್ದಿಲ್ಲವಾದ್ದರಿಂದ ಅಂತಹ ಬರ್ತಡೇ ಆಚರಣೆಯೂ ಕೂಡಿಬಂದಿಲ್ಲ.

ಆದರೆ ಈ ಬಾರಿ ರವಿಚಂದ್ರನ್ ಅವರು ಕೊಟ್ಟಿರುವ ಕಾರಣ ನಿಜಕ್ಕೂ ಕುತೂಹಲಕರವಾಗಿದೆ. "ಇಡೀ ಉದ್ಯಮ ಮೇ 29 ರಂದು ಅರಮನೆ ಮೈದಾನದಲ್ಲಿ ಅಂಬರೀಷ್ ಅವರ ಬರ್ತಡೆಯನ್ನು ಆಚರಿಸುತ್ತಿದೆ. ನಾನೂ ಅದರಲ್ಲಿ ಭಾಗವಹಿಸುತ್ತಿರುವುದರಿಂದ ಅಲ್ಲೇ ನಾನು ಎಲ್ಲರಿಗೂ ಸಿಗುತ್ತೇನೆ. ಅಷ್ಟೇ ಅಲ್ಲ, ಎರಡು ದಿನಗಳಲ್ಲಿ ಎರಡು ಬರ್ತಡೇ ಸಮಾರಂಭಗಳನ್ನು ಆಚರಿಸುವ ಭಾರವನ್ನು ಹೊರಲು ಈ ಉದ್ಯಮಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕೆ ನಾನು ಈ ಬಾರಿಯೂ ನನ್ನ ಹುಟ್ಟುಹಬ್ಬವನ್ನು ಆಚರಿಸುತ್ತಿಲ್ಲ" ಎಂದಿದ್ದಾರೆ ಕೇಜಿ ಸ್ಟಾರ್.

ವಾಸ್ತವ ವಿಷಯ ಏನೆಂದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ರವಿಚಂದ್ರನ್ ತಮ್ಮ ಕನಸಿನ ಚಿತ್ರವಾದ 'ಮಂಜಿನ ಹನಿ'ಯ ತಯಾರಿಯಲ್ಲೇ ಮುಳುಗಿದ್ದಾರೆ. ಈ ವರ್ಷವಾದರೂ ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಆ ಸಿನಿಮಾವನ್ನು ಬಿಡುಗಡೆ ಮಾಡುವ ಆಶೆ ಅವರದ್ದಾಗಿತ್ತು. ಆದರೆ ಇವತ್ತಿಗೂ ಆ ಸಿನಿಮಾದ ಚಿತ್ರೀಕರಣ ಮುಗಿದಿಲ್ಲವಾದ್ದರಿಂದ ಅದು ಸಾಧ್ಯವಾಗಿಲ್ಲ.

ಎನಿವೇ 'ಹ್ಯಾಪಿ ಬರ್ತಡೇ ಟು ಯೂ ಟೂ ರವಿ.' ❖

ಮುಸ್ಲಿಮ್ ಹಜ್ ಯಾತ್ರಿಗಳಿಗೆ ಸರಕಾರ ನೀಡುತ್ತಿರುವ ಸಬ್ಸಿಡಿಯನ್ನು ಮುಂದಿನ ಹತ್ತು ವರ್ಷಗಳಲ್ಲಿ ನಿಲ್ಲಿಸಬೇಕೆಂದು ಸುಪ್ರೀಂಕೋರ್ಟ್ ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ. ಆದರೆ ದಶಕಗಳಿಂದ ಮುಸ್ಲಿಮರಿಗೆ ಹಜ್ ಸಬ್ಸಿಡಿ ನೀಡಲಾಗುತ್ತಿದೆ ಎಂಬ ನಾಟಕವನ್ನು ಕೇಂದ್ರ ಸರ್ಕಾರ ಆಡುತ್ತಿದೆ. ಅದನ್ನೇ ನೆಪ ಮಾಡಿಕೊಂಡು ಮುಸ್ಲಿಮರಿಗೆ ಹಜ್ ಸಬ್ಸಿಡಿ ನೀಡಿ ತುಷ್ಟೀಕರಣ ಮಾಡಲಾಗುತ್ತಿದೆ ಎಂದು ಸಂಘಪರಿವಾರ ಅಪಪ್ರಚಾರ ಮಾಡುತ್ತಿದೆ. ಮುಸಲ್ಮಾನರಿಗೆ ಯಾವುದೇ ರೀತಿಯಲ್ಲಿ ನೆರವಾಗದ, ಬದಲಾಗಿ ಅವರನ್ನು ಜನರ ಕಣ್ಣಲ್ಲಿ ಕೆಟ್ಟದಾಗಿ ನೋಡಲು ನೆಪವಾಗಿರುವ ಈ ಸಬ್ಸಿಡಿಯನ್ನು ಆದಷ್ಟು ಬೇಗ ಅಂತ್ಯಗೊಳಿಸಬೇಕಿದೆ.

ವಾಸ್ತವವಾಗಿ ಈ ಹಜ್ ಸಬ್ಸಿಡಿಯಿಂದ ಈವರೆಗೆ ಹಜ್ ಯಾತ್ರಿಕರಿಗೆ ಯಾವುದೇ ಲಾಭವಾಗಿಲ್ಲ, ಲಾಭವಾಗಿದ್ದರೆ ಅದು ನಷ್ಟದಲ್ಲಿರುವ ಸರಕಾರಿ ಸೌಮ್ಯದ ಏರ್ ಇಂಡಿಯಾ ವಿಮಾನಯಾನ ಸಂಸ್ಥೆಗೆ ಆಗಿದೆ. ಯಾಕೆಂದರೆ ಹಜ್ ಸಬ್ಸಿಡಿ ಹೆಸರಲ್ಲಿ ಕೇಂದ್ರ ಸರ್ಕಾರವು ವಿಮಾನ ದರವನ್ನು ಸಿಕ್ಕಾಪಟ್ಟೆ ಏರಿಸಿ ಆ ಹಣವನ್ನೆಲ್ಲ ಒಂದು ಇಲಾಖೆಯಿಂದ ವಿಮಾನಯಾನ ಇಲಾಖೆಗೆ ವರ್ಗಾಯಿಸುತ್ತಾ ಬಂದಿದೆ. ಆದರೆ ತುಷ್ಟೀಕರಣದ ಆರೋಪವನ್ನು ಮುಸಲ್ಮಾನ ಸಮುದಾಯ ಹೊರುವಂತಾಗಿದೆ.




ಹಜ್ ಯಾತ್ರಿಗಳಿಗೆ ಮಾರುಕಟ್ಟೆ ದರದಲ್ಲಿ ಪ್ರಯಾಣ ಮಾಡಲು ಅನುಕೂಲವಾಗುವಂತೆ ಜಾಗತಿಕ ಟೆಂಡರ್ ಕರೆದು ಎಲ್ಲಾ ವಿಮಾನ ಸಂಸ್ಥೆಗಳಿಗೆ ಹಜ್ ಯಾತ್ರಿಕರನ್ನು ಕೊಂಡೊಯ್ಯಲು ಅವಕಾಶ ನೀಡಬೇಕು. ಆಗ ಕಡಿಮೆ ದರದಲ್ಲಿ ಪ್ರಯಾಣ ಬೆಳೆ ಸಬಹುದಾಗಿದೆ. ಕೇವಲ ಏರ್ ಇಂಡಿಯಾದಿಂದ ಪ್ರಯಾಣಕ್ಕೆ ಅವಕಾಶ ನೀಡಿದರೆ ದುಬಾರಿ ವೆಚ್ಚ ತೆರಬೇಕಾಗುತ್ತದೆ ಎಂದು ಭಾರತೀಯ ಮುಸ್ಲಿಮರು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದಾರೆ.

ಹಜ್ ಸಬ್ಸಿಡಿಯನ್ನಲ್ಲದೆ ಕೈಲಾಸ-ಮಾನಸ ಸರೋವರ ತೀರ್ಥ ಯಾತ್ರೆ ಸೇರಿದಂತೆ ಇತರೆ ತೀರ್ಥಯಾತ್ರೆಗಳಿಗೂ ಸರ್ಕಾರ ನೀಡುವ ಸಬ್ಸಿಡಿಗಳನ್ನು ಯಾವುದೇ ಮತೀಯ ತಾರತಮ್ಯವಿಲ್ಲದೆ ಕೊನೆಗೊಳಿಸಬೇಕಿದೆ.

- ಅಶ್ರಮ್ ಹಸನ್, ಮಂಗಳೂರು

ಮಾಸ್ಟರ್ ಹಿರಣ್ಣಯ್ಯನವರ ಗ್ರಹಿಕೆ ತಪ್ಪು


"ಲಂಕೇಶ್ ಬರದ್ರು, ಹಿರಣ್ಣಯ್ಯ ಉಗದ್ರು..." ಎನ್ನುವುದು ಹಂಸಲೇಖ ಅವರ 'ಹವಾಲ' ಆಲ್ಬಮ್‌ನಲ್ಲಿಯ ಹಾಡಿನ ಸಾಲು. ಈ ಸಾಲನ್ನು ಪ್ರಗತಿಪರರೆಲ್ಲ ಗುನುಗಿದ್ದ ಕಾಲವೊಂದಿತ್ತು. ಆದರೆ ಲಂಕೇಶರು ಇರುವ ಸಾಲಿನಿಂದ ಪ್ರಗತಿಪರರೆಲ್ಲರೂ ಮಾಸ್ಟರ್ ಹಿರಣ್ಣಯ್ಯನವರನ್ನು ದೂರವಿಡುವಂತಹ ಮಾತನ್ನು ಹಿರಣ್ಣಯ್ಯ ಅವರು ಇತ್ತೀಚೆಗೆ ಆಡಿರುವುದು ನಿಜಕ್ಕೂ ನನ್ನಂತಹವರಿಗೆ ಬೇಸರ ತರಿಸಿದೆ.



ಇತ್ತೀಚೆಗೆ ಬೆಂಗಳೂರಿನ ವಾಡಿಯಾ ಸಭಾಂಗಣದಲ್ಲಿ ಜರುಗಿದ ಬೀಚಿ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಹಿರಣ್ಣಯ್ಯ ಮಾತನಾಡುತ್ತಾ "ಕುವೆಂಪು ಅವರಿಗೆ ನೀಡಿದ ಮನ್ನಣೆ ಬ್ರಾಹ್ಮಣ ಸಮುದಾಯದ ಸಾಹಿತಿಗಳಿಗೆ ಸರ್ಕಾರ ನೀಡಿದ್ದ" ಎಂದು ಹೇಳಿದ್ದಾರೆ.

"ಜ್ಞಾನಪೀಠ ಪಡೆದವರಲ್ಲಿ ಬ್ರಾಹ್ಮಣರದೆ ಸಿಂಹಪಾಲು" ಎಂದಿರುವ ಹಿರಣ್ಣಯ್ಯ ಅವರು ಮಾಸ್ತಿ ಮತ್ತು ಕಾರಂತರಂತಹ ಸಾಹಿತಿಗಳನ್ನು ಬ್ರಾಹ್ಮಣ ಸಮುದಾಯಕ್ಕೆ ಸೀಮಿತಗೊಳಿಸಿರುವುದು ಬೇಸರದ ಸಂಗತಿ.

ಜೀವಪರ ಚಿಂತನೆಯ ಸಾಹಿತ್ಯ ಇವತ್ತಿನ ಹದಗೆಟ್ಟ ಪರಿಸ್ಥಿತಿಗೆ ಅವಶ್ಯವೆಂದು ಹಿರಣ್ಣಯ್ಯನವರಿಗೆ ಮನನ ಮಾಡುವ ಅಗತ್ಯವಿಲ್ಲ. ಸಾಹಿತಿಗಳನ್ನು ಜಾತಿ ಲೆಕ್ಕಾಚಾರಕ್ಕೆ ಸೀಮಿತಗೊಳಿಸಿ ಮಾತನಾಡುವುದು ಎಷ್ಟು ಸರಿ? ಹಿರಣ್ಣಯ್ಯ ತರಹದವರು ಒಂದು ಸಮುದಾಯಕ್ಕೆ ಸೀಮಿತವಾಗದೆ ಈ ಹಿಂದಿನಂತೆ ತಮ್ಮ ಚಾಟಿಯನ್ನು ಬೀಸುವುದು ಹಿಂದೆಂದಿಗಿಂತಲೂ ಇಂದಿನ ವಿಷಮಸ್ಥಿತಿಯಲ್ಲಿ ಅವಶ್ಯವಿದೆ. ಸರಕಾರದ ಮನ್ನಣೆ, ಪ್ರಶಸ್ತಿ ಸನ್ಮಾನಗಳಿಗಿಂತ ಜನರ ಮತ್ತು ಓದುಗರ ಮನ್ನಣೆಯೇ ಮುಖ್ಯ ಎಂದು ಅವರು ಅರ್ಥಮಾಡಿಕೊಳ್ಳಲಿ.



- ವಿಜಯ ಅಮೃತರಾಜ್, ವಕೀಲರು, ಕೊಪ್ಪಳ

ಕಳ್ಳರು, ಇತ್ಯಾದಿಗಳನ್ನು ಕುರಿತು

ಟಟ್ರಾ ಹಗರಣ ಕುರಿತು ದೊಡ್ಡಿಪಾಳ್ಯ ನರಸಿಂಹಮೂರ್ತಿ ಅವರು ಬರೆದ 'ರಕ್ಷಣೆ ಹೆಸರಲ್ಲಿ ಭಕ್ಷಣೆ' ವರದಿಯೊಂದಿಗೆ ಪ್ರಕಟಗೊಂಡ 'ಕಳ್ಳರನ್ನು ಕಾವಲಿಗಿಟ್ಟರೆ' ಎಂಬ ಬಾಕ್ಸ್ ಐಟಂ ಮಹತ್ವವಾದ ಮಾಹಿತಿಯನ್ನು ಒಳಗೊಂಡಿತ್ತು. ಆದರೆ ಅದರಲ್ಲಿ ಶವಪೆಟ್ಟಿಗೆ ಹಗರಣವನ್ನೂ ಸೇರಿಸಬೇಕಿತ್ತು.

ಜಾರ್ಜ್ ಫೆರ್ನಾಂಡಿಸ್ ಎಂಬ ಭಂಡ ನಾಯಕನ ಕೈವಾಡ ಮತ್ತು ಅಂಥವನನ್ನು ಸಮರ್ಥಿಸಿಕೊಂಡಿದ್ದ ಎ.ಬಿ.ವಾಜಪೇಯಿ (ಪೇಯಿ ಎಂದಾಗ ನೆನಪಾಯಿತು. ಈತನಿಗೆ ವಿದೇಶಿ ಸ್ಕಾಚ್ ವ್ಹಿಸ್ಕಿ ಎಂಬ ಪೇಯ ಬಹಳ ಇಷ್ಟವಂತೆ) ತರಹದ ದೇಶಭಕ್ತರನ್ನು ಮರೆಯಲಾದೀತೆ?

- ರವಿಕುಮಾರ್, ಹಾಸನ

ಕನ್ನಡ ಜನತೆಗೆ ಡಬ್ಬಿಂಗ್‌ನಿಂದ ಲಾಭವೇ ಇದೆ. ಆದರೆ ರಾಜ್ ಫ್ಯಾಮಿಲಿಗೆ ಕಷ್ಟ ಆಗಬಹುದು. ಈ ಮರಿ ರಾಜ್‌ಗಳ ಮುಖ ನೋಡಿ ಸಾಕಾಗಿದೆ. ತೆಲುಗು ಮತ್ತು ತಮಿಳ್ ಸಿನಿಮಾ ಕನ್ನಡ ಸಿನಿಮಾ ಇಂಡಸ್ಟ್ರಿಯನ್ನು ನುಂಗಿಹಾಕುವ ದಿನ ಬೇಗ ಬರಲಿದೆ.

- ಗಂಗಾಧರ, ನಾಗಮಂಗಲ

ಈಗ ಸಿಬಿಐ ತನಿಖೆಗೆ ಒಳಪಟ್ಟಿರುವ ಯಡಿಯೂರಪ್ಪನ ಪರ ಕರ್ನಾಟಕದ ಲಿಂಗಾಯತ ಮಠಾಧೀಶರು ನ್ಯಾಯಾಲಯದ ಮುಂದೆ ಹಾಜರಾಗಿ ಮಾಹಿತಿಯನ್ನು ನೀಡುತ್ತಾರೆಯೇ?

- ಎ.ಜೆ.ಸೂರ್ಯಮೂರ್ತಿ, ಎಸ್‌ಎಂಎಸ್ ಮೂಲಕ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 30-05-2012 RNI No. KARKAN2005/1

ಸೂರಿ ನಿರ್ದೇಶಿಸಿದ, ಪುನೀತ್ ರಾಜ್‌ಕುಮಾರ್ ನಟಿಸಿದ 'ಅಣ್ಣಾ ಬಾಂಡ್' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ನೆಲ ಕಚ್ಚಿದ್ದರೂ ತಾನು ಸೋತಿದ್ದೇನೆಂದು ಸೂರಿ ಒಪ್ಪಿಕೊಳ್ಳುತ್ತಿಲ್ಲ. ಬದಲಾಗಿ ಸೂರಿ ಮಂಡಿಸುತ್ತಿರುವ ವಾದ ಬಹಳ ಕುತೂಹಲಕಾರಿಯಾಗಿದೆ. "ನಾನು ಈ ಚಿತ್ರಕ್ಕೆ 'ಅಣ್ಣಾ ಬಾಂಡ್' ಎಂದು ಹೆಸರಿಡಬಾರದಿತ್ತು, ಹೀಗೆ ಹೆಸರಿಟ್ಟಿದ್ದರಿಂದಲೇ ಚಿತ್ರದ ಬಗ್ಗೆ ಪ್ರೇಕ್ಷಕರ ನಿರೀಕ್ಷೆ ದುಪ್ಪಟ್ಟು ಆಗಿಹೋಯಿತು. ಚಿತ್ರಕ್ಕಿಂತ ಚಿತ್ರದ ಟೈಟಲ್‌ನ ತೂಕವೇ ಹೆಚ್ಚಾಯಿತೆಂದು ನನಗೀಗ ಅನ್ನಿಸುತ್ತಿದೆ. ನಾನು 'ಅಣ್ಣಾ ಬಾಂಡ್' ಎಂದು ಹೆಸರಿಡುವ ಬದಲಿಗೆ 'ರವಿ ಬಾಂಡ್' ಎಂದು ಹೆಸರಿಡಬೇಕಿತ್ತು ಎಂದೆನಿಸುತ್ತಿದೆ" ಎಂದು ಸೂರಿ ಮೊನ್ನೆ ಹೇಳಿದರು.

ಸೋಲೊಪ್ಪದ ಸೂರಿ



'ಅಣ್ಣಾ ಬಾಂಡ್' ಅಂದಾಕ್ಷಣ ಎಲ್ಲರೂ ಅಣ್ಣಾವ್ರು ನಟಿಸಿದ್ದ 'ಬಾಂಡ್' ಚಿತ್ರಕ್ಕೆ ಇದನ್ನು ಹೋಲಿಸಿದರು ಎಂಬುದೇ ಅವರ ಒಟ್ಟು ಮಾತಿನ ತಾತ್ಪರ್ಯ.

ಅದೇನೇ ಇರಲಿ, ಈ ಚಿತ್ರದ ಸೋಲಿನಿಂದ ಸೂರಿ ಧೃತಿಗೆಟ್ಟಿಲ್ಲ, ಸದ್ಯದಲ್ಲೇ ಅವರ ನಿರ್ದೇಶನದ 'ಕಡ್ಡಿಪುಡಿ' ಎಂಬ ಹೊಸ ಚಿತ್ರ ಸೆಟ್ಟೇರುತ್ತಿದೆ. ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ಮತ್ತು ರಾಧಿಕಾ ಪಂಡಿತ್ ಮೊದಲ ಬಾರಿಗೆ ನಾಯಕ-ನಾಯಕಿಯಾಗಿ ಕಾಣಿಸಿಕೊಳ್ಳಲಿದ್ದಾರೆ.

ಆದರೆ ಒಂದು ಮಾತಂತೂ ಸತ್ಯ. ಹಿಂದೊಮ್ಮೆ ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಸೋತಾಗಲೂ ಅವರು ಇದೇ ತರಹದ ಟೀಕೆಗಳನ್ನು ಎದುರಿಸಬೇಕಾಗಿತ್ತು, ಆಗ ಅವರು "ಇನ್ನು ಮುಂದೆ ಪಕ್ಕಾ ಕಮರ್ಷಿಯಲ್ ಚಿತ್ರವನ್ನಷ್ಟೇ ಮಾಡುತ್ತೇನೆ" ಎಂದು ಶಪಥ ಮಾಡಿದ್ದರು. ಆ ನಿಟ್ಟಿನಲ್ಲಿ ವಿಜಯ್ ನಟಿಸಿದ್ದ 'ಜಂಗ್ಲಿ' ಮತ್ತು ಪುನೀತ್ ನಟಿಸಿದ್ದ 'ಜಾಕಿ' ಎಂಬ ಅಪ್ಪಟ ಕಮರ್ಷಿಯಲ್ ಚಿತ್ರಗಳನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿದ್ದರು. ಆದರೀಗ ಅಂತಹದ್ದೇ ಕಮರ್ಷಿಯಲ್ ಚಿತ್ರವಾದ 'ಅಣ್ಣಾ ಬಾಂಡ್' ಸೋತಿದೆ....

'ಅಣ್ಣಾಬಾಂಡ್' ಚಿತ್ರದ ಸೋಲಿನಿಂದಾಗಿ ಗಾಂಧಿನಗರದಲ್ಲಿ ಸೂರಿಯವರ ಚಿತ್ರಕಥೆ ಮತ್ತು ನಿರೂಪಣಾ ಶೈಲಿಯ ಬಗ್ಗೆ ಅಪಸ್ವರದ ಮಾತು ಕೇಳಿಬರುತ್ತಿದೆ. ಈ ಕಾರಣಕ್ಕಾಗಿ 'ಕಡ್ಡಿಪುಡಿ' ಚಿತ್ರದಲ್ಲಿ ಸೂರಿ ಅತ್ಯಂತ ಜಾಗ್ರತೆಯಿಂದ ತನ್ನ ಟೀಕಾಕಾರರಿಗೆ ಉತ್ತರವನ್ನು ನೀಡಬೇಕಾಗಿದೆ...

ಮಠಾಧೀಶರ ಸಿನಿಮಾಗಳ ಹೊಸ ಟ್ರೆಂಡ್!



ರಾಜಕೀಯ ರಂಗದಲ್ಲಿ ಹೇಗೆ ರಾಜಕಾರಣಿಗಳು ಜಾತಿಯನ್ನು ತಮ್ಮ ತಮ್ಮ ಮೂಗಿನ ನೇರಕ್ಕೆ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಾರೋ ಅಂತಹುದೇ ಒಂದು 'ಸಂಪ್ರದಾಯ' ಈಗ ಈ ಥಳಕು-ಬಳಕು ಸಿನಿಮಾ ಲೋಕದಲ್ಲೂ ಆರಂಭವಾಗಿದೆ.

ಮುಂದಿನ ಒಂದೆರಡು ವಾರಗಳಲ್ಲಿ 'ಶ್ರೀ ಕ್ಷೇತ್ರ ಆದಿಚುಂಚನ ಗಿರಿ' ಮತ್ತು 'ಸಿದ್ದ-ಗಂಗಾ' ಎಂಬ ಎರಡು ಚಲನಚಿತ್ರಗಳು ತೆರೆ ಕಾಣಲಿವೆ. ಈ ಚಿತ್ರಗಳ ಹೆಸರೇ ಸೂಚಿಸುವಂತೆ ಮೊದಲನೆ ಚಿತ್ರ ಒಕ್ಕಲಿಗ ಜನಾಂಗಕ್ಕೆ ಸಂಬಂಧಪಟ್ಟಿದ್ದರೆ, ಎರಡನೆಯ ಚಿತ್ರ ಲಿಂಗಾಯತ ಸಮುದಾಯಕ್ಕೆ ಸಂಬಂಧಪಟ್ಟದ್ದು.

'ಶ್ರೀ ಕ್ಷೇತ್ರ ಆದಿಚುಂಚನಗಿರಿ' ಚಿತ್ರವನ್ನು ನರಸಿಂಹಯ್ಯ ಎಂಬ ಮಠದ ಭಕ್ತ ನಿರ್ಮಿಸಿದ್ದು ಸಾಯಿಪ್ರಕಾಶ್ ಇದನ್ನು ನಿರ್ದೇಶಿಸಿದ್ದಾರೆ. ಉದ್ಯಮದಲ್ಲಿರುವ ಬಹುತೇಕ ಒಕ್ಕಲಿಗ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಹಾಗೆಯೇ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿರುವ ಅನೇಕ ಒಕ್ಕಲಿಗ ಶಾಸಕರು ಮತ್ತು ಮಂತ್ರಿಗಳು ಕೂಡ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಇನ್ನು 'ಸಿದ್ದ-ಗಂಗಾ' ಚಿತ್ರದ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಈ ಚಿತ್ರವನ್ನು ರಾಜ್ಯ ಪ್ರಶಸ್ತಿ ವಿಜೇತ ಜೆ.ಮೂರ್ತಿ ನಿರ್ದೇಶಿಸಿದ್ದರೆ ಇದರಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಲಿಂಗಾಯತ ಕಲಾವಿದರು ಕಾಣಿಸಿಕೊಂಡಿದ್ದಾರೆ.

ವಿಶೇಷವೆಂದರೆ ಈ ಎರಡೂ ಚಿತ್ರಗಳಿಗೆ ಆಯಾ ಮಠದ ಸ್ವಾಮೀಜಿಗಳು, ಅಂದರೆ ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ್ ಸ್ವಾಮೀಜಿಗಳು, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆಶೀರ್ವದಿಸಿ ತಮ್ಮ ಜನಾಂಗದ ಪ್ರೇಕ್ಷಕರು ಇದನ್ನು ನೋಡುವಂತೆ ಪ್ರೇರೇಪಿಸಿದ್ದಾರೆ.



ಜಾತಿ ಮತ್ತು ಮಠದ ಪ್ರಾಮುಖ್ಯತೆಯನ್ನು ಸಿನಿಮಾದ ಮುಖಾಂತರ ಜನರಿಗೆ ತಲುಪಿಸುವ ಈ ಟ್ರೆಂಡ್ ಮುಂಬರುವ ದಿನಗಳಲ್ಲಿ ಇನ್ನೂ ಅನೇಕ ಆಯಾಮಗಳನ್ನು ಪಡೆದುಕೊಂಡರೂ ಆಶ್ಚರ್ಯವೇನಿಲ್ಲ; ಕನ್ನಡಿಗರೆಲ್ಲಾ ವಿಶ್ವಮಾನವರಾಗಬೇಕೆಂದು ಮಹಾನ್ ಕವಿ ಕುವೆಂಪು ಅವರು ಆಶಿಸಿದ್ದ ನಾಡಿನಲ್ಲಿ ಜಾತಿ ಮತ್ತು ಮಠಗಳಿಗೆ ಜೋತು ಬೀಳುವ ಸಿನಿಮಾಗಳು ಬರುತ್ತಿರುವುದು ಪ್ರಗತಿಪರರಲ್ಲಿ ಆತಂಕವನ್ನು ಹುಟ್ಟಿಸಿದೆ.



ಕಾಣೆಯಾದರು ಕಾಸರವಳ್ಳಿ!

ಮೊನ್ನೆ ನಡೆದ ರಾಜ್ಯ ಚಲನಚಿತ್ರ ಪ್ರಶಸ್ತಿ ವಿತರಣಾ ಸಮಾರಂಭಕ್ಕೆ ಸಂಬಂಧಪಟ್ಟಂತೆ ವಾರ್ತಾ ಇಲಾಖೆಯ ಅಧಿಕಾರಿಗಳ ಕಡೆಯಿಂದ ಒಂದು ಪ್ರಮಾದ ಆಗಿಹೋಗಿದೆ.


ಅದೇ ಸಮಾರಂಭದಲ್ಲಿ ವಾರ್ತಾ ಇಲಾಖೆಯ ಅಧಿಕಾರಿಗಳು ರಾಷ್ಟ್ರಮಟ್ಟದಲ್ಲಿ ಕನ್ನಡದ ಕೀರ್ತಿ ಪತಾಕೆಯನ್ನು ಹಾರಿಸಿದ ನಿರ್ದೇಶಕರನ್ನು ಸನ್ಮಾನಿಸಲು ನಿರ್ಧರಿಸಿದರು. ಆ ನಿಟ್ಟಿನಲ್ಲಿ ರಾಷ್ಟ್ರ ಪ್ರಶಸ್ತಿಗಳನ್ನು ಗೆದ್ದಿರುವ ಟಿ.ಶೇಷಾದ್ರಿ, ಬಿ.ಸುರೇಶ್ ಮತ್ತು ರಾಮದಾಸ್ ನಾಯ್ಡು ತರಹದ ನಿರ್ದೇಶಕರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿದರು. ಆದರೆ ಎಲ್ಲರಿಗಿಂತ ಅತಿ ಹೆಚ್ಚು ಸಂಖ್ಯೆಯಲ್ಲಿ ರಾಷ್ಟ್ರ ಪ್ರಶಸ್ತಿಗಳನ್ನು ಪಡೆದಿರುವ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಹೆಸರನ್ನೇ ವಾರ್ತಾ ಇಲಾಖೆಯ ಅಧಿಕಾರಿಗಳು ಮರೆತರು! ಹೀಗಾಗಿ ಆಹ್ವಾನಪತ್ರಿಕೆಯಲ್ಲಿ ಕಾಸರವಳ್ಳಿಯವರ ಹೆಸರು ನಾಪತ್ತೆಯಾಗಿತ್ತು.

ತಮ್ಮ ತಪ್ಪಿನ ಅರಿವಾದಾಗ ಅಧಿಕಾರಿಗಳು ಕಾಸರವಳ್ಳಿಯವರಿಗೆ ಫೋನಾಯಿಸಿ ಆದ ಪ್ರಮಾದಕ್ಕಾಗಿ ಕ್ಷಮೆಯನ್ನು ಯಾಚಿಸಿ "ನಿಮಗೂ ಒಂದು ಪ್ರಶಸ್ತಿಯಿದೆ. ದಯವಿಟ್ಟು ಸಮಾರಂಭಕ್ಕೆ ಬಂದು ಅದನ್ನು ಸ್ವೀಕರಿಸಬೇಕು" ಎಂದು ಒತ್ತಾಯ ಮಾಡಿದರು. ಆದರೆ ಅಧಿಕಾರಿಗಳು ಮಾಡಿದ ಈ ಅವಮಾನವನ್ನು ಸಹಿಸದ ಕಾಸರವಳ್ಳಿಯವರು ಸಮಾರಂಭಕ್ಕೆ ಗೈರುಹಾಜರಾಗಿ ತಮ್ಮ ಸಿಟ್ಟನ್ನು ಪ್ರದರ್ಶಿಸಿದರು.

ಈಗಾಗಲೇ ನಾಲ್ಕು ರಾಷ್ಟ್ರ ಪ್ರಶಸ್ತಿಗಳನ್ನು, ಪದ್ಮಶ್ರೀಯನ್ನೂ ಗೆದ್ದಿರುವ ಕಾಸರವಳ್ಳಿಯವರಂತಹ ದೊಡ್ಡ ನಿರ್ದೇಶಕರನ್ನೇ ಮರೆತ ಅಧಿಕಾರಿಗಳು ಈಗ ತಾವು ಮಾಡಿದ ತಪ್ಪಿಗಾಗಿ ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ವಿಪರ್ಯಾಸ ಏನೆಂದರೆ ಅದೇ ಅಧಿಕಾರಿಗಳು 'ಮಠ' ಖ್ಯಾತಿಯ ಗುರುಪ್ರಸಾದ್ ಮತ್ತು 'ಪುಟ್ಟಕ್ಕನ ಹೈವೇ' ಖ್ಯಾತಿಯ ಬಿ.ಸುರೇಶ್ ಅವರ ಹೆಸರುಗಳನ್ನು ಆಹ್ವಾನಪತ್ರಿಕೆಯಲ್ಲಿ ಪ್ರಕಟಿಸಿದ್ದರೂ ಅವರಿಬ್ಬರೂ ಸಮಾರಂಭಕ್ಕೆ ಗೈರುಹಾಜರಾದರು. ಅವರಿಬ್ಬರ ಪರವಾಗಿ ಅವರ ಪತ್ನಿಯರು ಪ್ರಶಸ್ತಿಯನ್ನು ಸ್ವೀಕರಿಸಿದ್ದರಿಂದ ಅವರ ಗೈರುಹಾಜರಿ ಅಂತಹ ದೊಡ್ಡ ಸುದ್ದಿಯನ್ನೇನು ಮಾಡಲಿಲ್ಲ.

ಅತ್ತಾವರನ 'ಪರಿ'ಯ ಪರದಾಟ!

ಮೊನ್ನೆ 'ಪರಿ' ಎಂಬ ಚಿತ್ರದ ಪತ್ರಿಕಾಗೋಷ್ಠಿ ನಡೆಯಿತು. ವಿಶೇಷವೆಂದರೆ 'ಪರಿ'ಯ ನಿರ್ಮಾಪಕ ಶಿವಿ ಬೆಳ್ತಂಗಡಿ ಮತ್ತು ಅವರ ನಾಯಕ ನಟ ರಾಕೇಶ್ ಹಾಜರಿದ್ದರೂ ಚಿತ್ರದ ನಿರ್ದೇಶಕ ಸುಧೀರ್ ಅತ್ತಾವರ್ ವ ಆ ಗೋಷ್ಠಿಯಲ್ಲಿ ಹಾಜರಿರಲಿಲ್ಲ.



"ಪತ್ರಿಕಾಗೋಷ್ಠಿಯ ಆಹ್ವಾನಪತ್ರಿಕೆಯು ನಿರ್ದೇಶಕ ಅತ್ತಾವರ್ ಅವರ ಹೆಸರಲ್ಲಿ ಬಂದಿದ್ದರೂ ಅವರು ಯಾಕೆ ಇಲ್ಲಿಗೆ ಬಂದಿಲ್ಲ?" ಎಂದು ಅಚ್ಚರಿಗೊಂಡ ಪತ್ರಕರ್ತರು ಅತ್ತಾವರ್ ಅವರ ಫೋನ್‌ಗೆ ಕರೆ ನೀಡಿದರೆ ಅದು ಸ್ವಿಚ್ ಆಫ್ ಆಗಿತ್ತು. ಕೊನೆಗೂ ಅವರು ಸಿಕ್ಕಾಗ ಅವರು ಹೇಳಿದ್ದಿಷ್ಟೆ: "ನನಗೆ ಈ ಚಿತ್ರದ ಬಗ್ಗೆ ಹೇಳಲು ಏನೂ ಉಳಿದಿಲ್ಲ, ಆದುದರಿಂದ ನಾನು ಪತ್ರಿಕಾಗೋಷ್ಠಿಗೆ ಬರುತ್ತಿಲ್ಲ."

ನಿಜವಾಗಲೂ ವಿಷಯ ಬೇರೆಯದೇ ಆಗಿದೆ. ಈ ಚಿತ್ರವನ್ನು ಎಪ್ಪತ್ತೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಮಾಡಿಕೊಡುತ್ತೇನೆ ಎಂದು ಆರಂಭದಲ್ಲಿ ನಿರ್ಮಾಪಕ ಬೆಳ್ತಂಗಡಿಯವರಿಗೆ ನಿರ್ದೇಶಕ ಅತ್ತಾವರ್ ಹೇಳಿದ್ದರಂತೆ. ಆದರೆ ಈ ಚಿತ್ರವನ್ನು ಮುಗಿಸಲು ಸುಮಾರು ಮೂರುವರೆ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿಸಿದ್ದಾರೆ. ಹೊಸ ನಿರ್ದೇಶಕ ಮತ್ತು ಹೊಸ ನಾಯಕ ನಟಿಯರಿದ್ದ ಈ ಚಿತ್ರ ಬಿಡುಗಡೆಯಾದರೂ ಇಲ್ಲಿಯತನಕ ನಿರ್ಮಾಪಕರಿಗೆ ಒಂದೇ ಒಂದು ಪೈಸೆ ಲಾಭ ತಂದುಕೊಟ್ಟಿಲ್ಲ, ಅಷ್ಟೇ ಅಲ್ಲ, ಈ ಚಿತ್ರದ ಸೆಟಲೈಟ್ ಹಕ್ಕಿನ ಮಾರಾಟ ಕೂಡ ಆಗಿಲ್ಲ.

ಈ ಚಿತ್ರದ ಪ್ರೀಮಿಯರ್ ಪ್ರದರ್ಶನವನ್ನು ಮುಂಬೈನಲ್ಲಿ ಏರ್ಪಡಿಸಿದರೆ ಇದನ್ನು ವೀಕ್ಷಿಸಲು ಬಾಲಿವುಡ್‌ನ ಘಟಾನುಘಟಿಗಳಾದ ಅಮೀರ್ ಖಾನ್, ಶಬಾನಾ ಆಜ್ಮಿ ತರಹದವರು ಬರುತ್ತಾರೆ ಹೇಳಿ ನಿರ್ಮಾಪಕರಿಂದ ಮತ್ತಷ್ಟು ಹಣವನ್ನು ಖರ್ಚು ಮಾಡಿಸಿದರು. ಪ್ರೀಮಿಯರ್ ಷೋಗೆ ಬಾಲಿವು ಯಾರೂ ಬರಲಿಲ್ಲ ಎಂಬುದು ಬೆಳ್ತಂಗಡಿ ಅವರಿಗೆ ತುಂಬಾ ಬೇಸರ ತಂದಿತು. ಒಟ್ಟಾರೆಯಾಗಿ ಅತ್ತಾ ಅವರಿಂದಾಗಿ ಬೆಳ್ತಂಗಡಿಯವರು ಮೂರೂವರೆ ಕೋಟಿ ರೂಪಾಯಿಗಳನ್ನು ಹಣವನ್ನು ನೀರಿನಲ್ಲಿ ಹೋಮ ಮಾಡಿದಂತಾ

ಇದಷ್ಟೇ ಅಲ್ಲದೆ, 'ಪರಿ' ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಅತ್ತಾವರ್ ಅವರು ರಾಜ್‌ಕುಮಾರ್ ಮನೆಯ ಬಗ್ಗೆ ಟಿ.ವಿ ಚಾನೆಲ್ ಒಂದರಲ್ಲಿ ಅಸಂಬದ್ಧವಾಗಿ ಮಾತನಾಡಿದ್ದರು. ಇದರ ಬಗ್ಗೆ ಬೆಳ್ತಂಗಡಿ ಮಾಧ್ಯಮಗಳ ಮು ತಮ್ಮ ಬೇಸರವನ್ನು ವ್ಯಕ್ತಪಡಿಸಿದ್ದರು. "ಪುಟ್ಟಣ್ಣನವರನ್ನು ನೆನಪಿಸುವ ರೀತಿಯಲ್ಲಿ ಚಿತ್ರವನ್ನು ನಿರ್ದೇಶಿಸಿದ್ದೆ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿದ್ದ ಅತ್ತಾವರ್ ಈಗ ಯಾವುದೇ ವಿಷಯದ ಬಗ್ಗೆ ತುಟಿಕ್ ಪಿ ಎನ್ನುತ್ತಿಲ್ಲದಿರುವುದು ಅಚ್ಚರಿ ಮೂಡಿಸುತ್ತದೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com